ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಫೆಬ್ರವರಿ 2019 ಬೆಲೆ ರೂ.5/-

## ಶ್ರೀನಿವಾಸಮಂಗಾಪುರಂ
## ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ
## ವಾರ್ಷಿಕ ಬ್ರಹ್ಮೋತ್ಸವ

24-02-2019 ರಿಂದ
04-03-2019 ರ ವರೆಗೆ



ತಿರುಮಲ ತಿರುಪತಿ ದೇವಸ್ಥಾನಗಳು

# ಶ್ರೀನಿವಾಸಮಂಗಾಪುರಂ
# ಶ್ರೀಕಲ್ಯಾಣವೆಂಕಟೇಶ್ವರ ಸ್ವಾಮಿಯವರ
# ವಾರ್ಷಿಕ ಬ್ರಹ್ಮೋತ್ಸವ

**24-02-2019 ರಿಂದ**
**04-03-2019 ರ ವರೆಗೆ**



**24-02-2019 ಭಾನುವಾರ**
ಹಗಲು: ಧ್ವಜಾರೋಹಣ,
ರಾತ್ರಿ: ದೊಡ್ಡಶೇಷವಾಹನ.

**25-02-2019 ಸೋಮವಾರ**
ಹಗಲು: ಚಿಕ್ಕಶೇಷವಾಹನ,
ರಾತ್ರಿ: ಹಂಸವಾಹನ.

**26-02-2019 ಮಂಗಳವಾರ**
ಹಗಲು: ಸಿಂಹವಾಹನ,
ರಾತ್ರಿ: ಮುತ್ತಿನಚಪ್ಪರವಾಹನ.

**27-02-2019 ಬುಧವಾರ**
ಹಗಲು: ಕಲ್ಪವೃಕ್ಷವಾಹನ,
ರಾತ್ರಿ: ಸರ್ವಭೂಪಾಲವಾಹನ.

**28-02-2019 ಗುರುವಾರ**
ಹಗಲು: ಪಲ್ಲಕ್ಕಿಯಲ್ಲಿ ಮೋಹಿನೀಅವತಾರೋತ್ಸವ,
ರಾತ್ರಿ: ಗರುಡವಾಹನ.

**01-03-2019 ಶುಕ್ರವಾರ**
ಹಗಲು: ಹನುಮದ್ವಾಹನ,
ಸಂಜೆ: ವಸಂತೋತ್ಸವ,
ರಾತ್ರಿ: ಗಜವಾಹನ.

**02-03-2019 ಶನಿವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ.

**03-03-2019 ಭಾನುವಾರ**
ಹಗಲು: ರಥೋತ್ಸವ,
ರಾತ್ರಿ: ಅಶ್ವವಾಹನ.

**04-03-2019 ಸೋಮವಾರ**
ಹಗಲು: ಚಕ್ರಸ್ನಾನ,
ರಾತ್ರಿ: ಧ್ವಜಾವರೋಹಣ.





ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ
ಉಭಯೋರಪಿ ದೃಷ್ಟೋಽಂತ ಸ್ತ್ವನಯೋಸ್ತತ್ತ್ವದರ್ಶಿಭಿಃ

(ಶ್ರೀ ಮದ್ಭಗವದ್ಗೀತೆ ಅಧ್ಯಾಯ 2, ಶ್ಲೋಕ- 16)

ಜಗತ್ಕಾರಣವಾದ ಮೂಲ ಪ್ರಕೃತಿಗೂ, ಪ್ರಕೃತಿಗೂ ಮೂಲನಾದ ಭಗವಂತನಿಗೂ ನಾಶವೆಂಬುದಿಲ್ಲ. (ಹಾಗೆಯೇ ಕೆಟ್ಟ ಕೆಲಸದಿಂದ ಎಂದೂ ಶುಭವಿಲ್ಲ. ಒಳ್ಳೆಯ ಕೆಲಸದಿಂದ ಎಂದೂ ಕೇಡಾಗದು) ಈ ಎರಡು ತತ್ತ್ವಗಳು ನಿರ್ಣಯವನ್ನು ತತ್ತ್ವಜ್ಞಾನಿಗಳು ಬಲ್ಲರು.



ಶರಣು ಶ್ರೀ ವೈಕುಂಠ ನಾಯಕ ಶರಣು ಶ್ರೀ ಪುರುಷೋತ್ತಮ
ಶರಣು ಶ್ರೀಧರ ಗರುಡವಾಹನ ಶರಣು ವೇಂಕಟನಾಯಕ

ಪರಮಪದ ಗೋವಿಂದ ಮಾಧವ
ಪದುಮನಾಭ ಜನಾರ್ದನ
ಧರಣಿಧರ ಕರಿವರದ ವಾಮನ
ವೈರಿಹರ ಬಲಿಭಂಜನ

ಜಲಜನೇತ್ರ ಮುಕುಂದ ಮುರಹರ
ಜ್ವಲಿತ ಚಕ್ರಗದಾಧರ
ಜಲಧಿಶಯನ ಉಪೇಂದ್ರ ಅಚ್ಯುತ
ಶೈಲಧರ ನಾರಾಯಣ

ಆದಿಯೋಗಿ ಮುನೀಂದ್ರ ವಂದಿತ
ನಿಖಿಳಸುರ ಗಣ ಸೇವಿತ
ವೇದವೇದ್ಯ ವಿರಂಚಿಸನ್ನುತ
ವಿಜಯವಿಠಲ ನಮೋ ನಮೋ

- ಶ್ರೀ ವಿಜಯದಾಸರು

# ದಯಾಶತಕಮ್

- ಎನ್. ನರಸಿಂಹಾಚಾರ್ಯ



ಮಯಿ ತಿಷ್ಠತಿ ದುಷ್ಕೃತಾಂ ಪ್ರಧಾನೇ ಮಿತದೋಷಾನಿತರಾನ್ ವಿಚಿನ್ವತೀ ತ್ವಮ್ ।
ಅಪರಾಧಗಣೈರಪೂರ್ಣಕುಕ್ಷಿಃ ಕಮಲಾಕಾಂತದಯೇ ಕಥಂ ಭವಿತ್ರೀ ॥೨೯॥

ಓ ದಯೆಯೇ, ನಿನ್ನ ದೊಡ್ಡ ಹೊಟ್ಟೆಯು ತುಂಬಬೇಕಾದರೆ, ವಿಧ ವಿಧವಾಗಿಯೂ ಹೆಚ್ಚು ಪರಿಮಾಣವುಳ್ಳದ್ದಾಗಿಯೂ, ರಸವತ್ತಾಗಿಯೂ ಇರುವ ಆಹಾರಗಳಂತೆ ವಿಧ ವಿಧವಾದ ಮಹಾ ಪಾಪಗಳನ್ನು ಅನೇಕ ಸಲ ಮಾಡಿ ಅಪರಾಧಿಗಳಲ್ಲಿ ಅಗ್ರಗಣ್ಯನಾದ ನಾನು ನಿನ್ನ ಎದುರಿಗೆ ಆ ಪಾಪಗಳೆಂಬ ಬೃಹದಾಕಾರವನ್ನು ಪಡೆದು ನಿಂತಿರುವಾಗ ಅಂತಹ ನನ್ನನ್ನೇ ನೀನು ಹಿಡಿಯಬೇಕು ; ಹಾಗಿಲ್ಲದೆ ನಿನ್ನ ಹೊಟ್ಟೆಯ ಅಲ್ಪಭಾಗವನ್ನೂ ತುಂಬಲಾರದ ಅಲ್ಪಪಾಪಗಳನ್ನುಳ್ಳ ಇತರರನ್ನು ನೀನು ಹುಡುಕಿ ಕೊಂಡು ಹೋದರೆ ಅವರ ಸ್ವಲ್ಪವೇ ಆದ ಪಾಪವು ನಿನಗೆ ಆಹಾರವಾಗಿ ದೊರಕುವುದರಿಂದ ಹೊಟ್ಟೆ ತುಂಬಲಾರದು. ಆಗ ನೀನು ಹೇಗೆ ಬದುಕಿರಲು ಸಾಧ್ಯ? ಪೂರ್ಣವಾದ ಆಹಾರವನ್ನು ಸೇವಿಸಿದರಲ್ಲವೇ ಬದಕುಬಹುದು! ಆದ್ದರಿಂದ ನನ್ನನ್ನು ಕಾಪಾಡದಿದ್ದರೆ ನೀನೇ ಹೊಟ್ಟೆಗಿಲ್ಲದೆ ಅನ್ಯಾಯವಾಗಿ ಜೀವಿಸುವುದಕ್ಕೆ ಗತಿಯಿಲ್ಲದೆ ಕಷ್ಟಪಡುವೆ. ಆದ್ದರಿಂದ, ಇಂತಹ ಪರಿಸ್ಥಿತಿಯಲ್ಲಿ ನೀನೇ ದಯನೀಯ ಸ್ಥಿತಿ (ನನ್ನ ದಯೆಯನ್ನೇ ನೀನು ನಿರೀಕ್ಷಿಸುವಂತಹ ಸ್ಥಿತಿ) ಯನ್ನು ಹೊಂದುವೆ - ಎಂಬ ಹೊಸದೊಂದು ರೀತಿಯಿಂದ ದಯಾದೇವಿಯ ಹಿರಿಮೆಯನ್ನು ಆಚಾರ್ಯರು ಇಲ್ಲಿ ಪ್ರಕಾಶಪಡಿಸಿರುತ್ತಾರೆ.

ದಯೆಯ ಪೂರ್ಣ ಸ್ವರೂಪವು ಪರಿಪೂರ್ಣವಾಗಿ ಗೋಚರಿಸುವುದು ಯಾವಾಗೆಂದರೆ, ಯಾವ ರೀತಿಯಿಂದಲೂ ಕೊನೆಗಾಣದ ಮಹಾಪಾಪಗಳನ್ನು ಮಾಡಿ ಅಧೋಗತಿಯಿಂದ ಮುಳುಗಿಹೋದವನನ್ನು ಕಾಪಾಡಿದಾಗಲೇ, ಹಾಗಿಲ್ಲದೇ, ಸಲ್ಪವೇ ಪಾಪವುಳ್ಳವನನ್ನು ಕಾಪಾಡಿದರೆ ದಯೆಗೆ ಅಂತಹ ಹಿರಿಮೆಯುಂಟಾಗುವುದಿಲ್ಲ ಆದ್ದರಿಂದ ಅಂತಹ ಮಹಾಪಾಪಿಯನ್ನು (ದಯೆಗೆ ಉತ್ತಮವಾದ ಪಾತ್ರವನ್ನು) ಹುಡುಕುವುದಕ್ಕೆ ಹೊರಟಾಗ ತಮಗೇ ಮೊದಲನೆಯ ಸ್ಥಾನವು ದೊರಕಬೇಕೆಂಬುದು ಕವಿಯ ಆಶಯ. ಎಂತಹ ಮಹಾಪಾಪವನ್ನಾದರೂ ಸಣ್ಣದೊಂದು ನೆಪದಿಂದ ಶ್ರೀನಿವಾಸನು ತನ್ನ ದಯೆಯಿಂದ ಕ್ಷಮಿಸುವನು. 'ಪಾಪವನ್ನು ಮಾಡಿಬಿಟ್ಟೆವಲ್ಲ! ಇನ್ನು ನಮಗೆ ಗತಿಯಿಲ್ಲ' ಎಂದು ಹೆದರಿ ಅವನಲ್ಲಿ ಭೀತಿಪಡಬೇಕಾದ ಪ್ರಸಂಗವಿಲ್ಲವೆಂಬ ಶಾಸ್ತ್ರಾರ್ಥ.ಪ್ರಕಾಶಪಡಿಸುವುದಕ್ಕಾಗಿಯೇ ದಯಾದೇವಿಯು ಈ ರೀತಿಯಾಗಿ ಸ್ತುತಿಸಲ್ಪಟ್ಟಿರುತ್ತಾಳೆ. ಹಾಗಿಲ್ಲದೆ, ದಯಾದೇವಿಗೆ ಆಹಾರವಾಗಿ ಅನೇಕಪಾಪಗಳನ್ನು ನಾವು ಪದೇ ಪದೇ ಮಾಡಿ ಅವಳಿಗೆ ಅರ್ಪಿಸಿ, ಅವಳ ಅನುಗ್ರಹಕ್ಕೆ ಪಾತ್ರರಾಗಬೇಕೆಂಬ ಅಭಿಪ್ರಾಯವನ್ನು ಹೇಳುವುದಾದರೆ ಸಮಸ್ತ ಶಾಸ್ತ್ರಗಳಿಗೂ ವಿರೋಧವುಂಟಾಗುವುದು.

ಇಲ್ಲಿ ಈಶ್ವರನಿಗೆ ದಯನೀಯನಾದ ಉತ್ತಮಪಾತ್ರಲಾಭವೂ, ಜೀವನಿಗೆ ಭಯವಿಲ್ಲದಿರುವಿಕೆಯೂ ಲಾಭವೆಂದು ಹೇಳಬಹುದು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ



ತಿರುಮಲೆ ತಿರುಪತಿ ದೇವಸ್ಥಾನಗಳು
ಸಚಿತ್ರ ಮಾಸಪತ್ರಿಕೆ
ಸಪ್ತಗಿರಿ



ಶ್ರೀ ವಿಳಂಬಿನಾಮ
ಸಂವತ್ಸರ
ಪುಷ್ಯ - ಮಾಘಮಾಸ
ಸಂಚಿಕೆ


**ಸಂಪುಟ - 49**

**ಸಂಚಿಕೆ - 9**



**ಗೌರವಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್ ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ ಆರ್.ವಿ. ವಿಜಯಕುಮಾರ್, ಬಿ.ಎ.ಬಿ.ಇಡಿ.,
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.
ಶ್ರೀ ಪಿ.ಶಿವಪ್ರಸಾದ್ ತಿ.ತಿ.ದೇ., ತಿರುಪತಿ.

**ವಿಶ್ರಾಂತಿ ಚಿತ್ರಕಾರರು**

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.


## ಫೆಬ್ರವರಿ 2019

## ವಿಷಯಸೂಚಿಕೆ


ಸಂಪಾದಕೀಯ 6

ಹಸಿರುತೋರಣ

ಆದಿದೇವ ನಮೋಸ್ತುಭ್ಯಂ ಮಮಜೀವನ ಭಾಸ್ಕರ 7
ಕೆ. ನರಸಿಂಹಮೂರ್ತಿ

ಭವ್ಯಮೂರ್ತಿ ಭೀಷ್ಮ ಪಿತಾಮಹ 11
ಶ್ರೀಮತಿ.ಸುಮಚಂದ್ರಶೇಖರ್

ಸಂಸ್ಕಾರ ಸಮನ್ವಿತ ಜೀವನವೃತ್ತಿ 13
-ರಾ.ನ.ನ.ಮೂರ್ತಿ

ಕಠೋಪನಿಷತ್ 15
ಶ್ರೀಮತಿ.ಗೀತವೀರರಾಘವನ್

ಆಮೆಯ ರೀತಿಯ ಸುರಕ್ಷಿತ 18
- ಡಿ.ಎಸ್.ಭೂಮಿಕ

ಪುರಂದರದಾಸರ ರಚನೆಗಳಲ್ಲಿ ದಾಸ್ಯಭಕ್ತಿ 20
ಶ್ರೀಮತಿ.ಸುಧಾಮಧುಸೂದನ್

ಸ್ನಾನ ಸಂದೇಶ 22
- ಶ್ರೀಮತಿ.ಕೆ.ವಿ.ಪದ್ಮಾವತಿ

ವಾತ ರೋಗಗಳಿಗೆ ಶ್ರೇಷ್ಟ ಔಷಧ ಅಜ್ವಾನ 25
- ಶ್ರೀಮತಿ.

ಅಧಿಷ್ಠಾತಾ ಭಗವಾನ್‌ಸೂರ್ಯ 31
- ಶ್ರೀಮತಿ.ಎಸ್.ಕಲ್ಯಾಣಿ

ಆಚಾರ್ಯಮಧ್ವರು 34
- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ

ಶ್ರೀ ವರಾಹಾವತಾರ 40
- ಡಿ.ಎಸ್.ಬದ್ರಿನಾಥ್

ತಿರುಪತಿ ಶ್ರೀವೆಂಕಟೇಶ್ವರ 44
ದಿ॥ಬಿ.ಎನ್.ಶ್ರೀನಿವಾಸನ್

ಕಪಿಲೇಶ್ವರಾ! ಸ್ವಯಂಭೂಲಿಂಗೇಶ್ವರಾ! 46
- ಶ್ರೀಮತಿ.ಎಸ್.ಸುರೇಖ

ಕೈಲಾಸ ಮಾನಸಸರೋವರ ಯಾತ್ರೆ 51
- ಶ್ರೀಮತಿ.ಎನ್.ನಾಗಲಕ್ಷ್ಮೀ



ಬಿಡಿ ಪ್ರತಿ ರೂ. 05/-
ವಾರ್ಷಿಕ ಚಂದಾ ರೂ. 60/-
ಆಜೀವ ಚಂದಾ ರೂ. 500/-
ವಿದೇಶಿವಾರ್ಷಿಕಚಂದಾ ರೂ. 850/-



ಲೇಖನ / ಚಂದಾ
ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517507
9866329955
0877 - 2264543

24x7 ಕೆಲಸ ಮಾಡುವ
ದೂರವಾಣಿ ಸಂಖ್ಯೆ
0877 - 2277777,
2233333,

ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@
tirumala.org

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ:
1800 - 425 - 4141



ಸಪ್ತಗಿರಿಯಲ್ಲಿ ಪ್ರಕಟ
ವಾಗುವ ಲೇಖನಗಳಲ್ಲಿನ
ಅಭಿಪ್ರಾಯಗಳು ಸಂಪಾದಕ
ವರ್ಗದ, ಪತ್ರಿಕೆಯ, ಅಭಿ
ಪ್ರಾಯಗಳೇ ಆಗಿರಬೇಕು
ಎಂದಿಲ್ಲ. - ಸಂಪಾದಕ

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ
ವೀಕ್ಷಿಸಬಹುದು.


ಮುಖಚಿತ್ರ - ಉಭಯ ದೇವಿಯರೊಂದಿಗೆ ಶ್ರೀ ಕಲ್ಯಾಣವೇಂಕಟೇಶ್ವರಸ್ವಾಮಿ, ಶ್ರೀನಿವಾಸಮಂಗಾಪುರಂ

ಹಿಂಬದಿಚಿತ್ರ -ಶ್ರೀ ಕಾಮಾಕ್ಷಿ ಸಮೇತ ಶ್ರೀಕಪಿಲೇಶ್ವರ ಸ್ವಾಮಿ, ಕಪಿಲತೀರ್ಥಂ, ತಿರುಪತಿ

ಸಂಪಾದಕೀಯ

# ಅಂತರಂಗದಲ್ಲಿರುವ ಕತ್ತಲನ್ನು ತೊಲಗಿಸುವ ಆಳ್ವಾರರು

ಈ ಪ್ರಪಂಚವನ್ನೇ ಸೃಷ್ಟಿಸಿರುವ ಶ್ರೀಮನ್ನಾರಾಯಣನು ವೈಷ್ಣವೀ ವಂಶದಲ್ಲಿ ತಿಳಿಸಿರುವಂತೆ ಪರ, ವ್ಯಯ, ವಿಭಯ ಅಂತರ್ಯಾಮಿ, ಅರ್ಚಾ ಎಂಬ ಐದು ರೂಪಗಳಲ್ಲಿ ನೆಲೆಗೊಂಡಿದ್ದಾನೆ. ಪರಮ ಅಂದರೆ ಈ ಪ್ರಪಂಚದ ಇತಿಮಿತಿಗಳನ್ನೆಲ್ಲಾ ಮೀರಿದ್ದು, ಯಾವುದೇ ರೂಪಗಳಲ್ಲಾದರೂ ಪ್ರಕಟಗೊಳ್ಳುವಂತದ್ದು, ವ್ಯಗ ಎಂದರೆ ಶ್ರೀ ಮಹಾವಿಷ್ಣು ಹಾಲ್ಗಡಲ ನಡುವೆ ಶೇಷತಲ್ಪದ ಮೇಲೆ ಪವಡಿಸಿರುತ್ತಾರೆ. ಇದು ನಮ್ಮ ಊಹೆಗೂ ಮೀರಿದ್ದು. ಇನ್ನು ಅವತಾರವೆಂದರೆ, ಮತ್ಸ್ಯ ಅವತಾರದಿಂದ ಕೃಷ್ಣಾವತಾರದವರೆಗೂ ಅವತರಿಸಿದ್ದಾನೆ. ಇವು ನಮ್ಮ ಕಣ್ಣಿಗೆ ಕಾಣಿಸಲಾರದ್ದು. ಏಕೆಂದರೆ ಈ ಅವತಾರಗಳೆಲ್ಲವೂ ವಿವಿಧ ಯುಗಗಳಲ್ಲಿ ಆವಿರ್ಭವಿಸಿದಂತವು.ಇನ್ನು ಅಂತರ್ಯಾಮಿ ಎಂದರೆ ಪ್ರತಿಯೊಬ್ಬರ ಹೃದಯದಲ್ಲಿ ಸ್ಥಿರಗೊಂಡಿದ್ದಾನೆಂದು ಅರ್ಥ.ಭಗವದ್ಗೀತೆಯಲ್ಲೇ ತಿಳಿಸಿರುವಂತೆ, “ಸರ್ವಸ್ಯ ಸಾಗಂ ಹೃತಿ ಸನ್ನಿವಸ್ಥೋ” ಎಲ್ಲಡೆಯಲ್ಲೂ ಸ್ಥಿರಗೊಂಡಿದ್ದಾನೆ. ಆದರೆ ಯೋಗಿಗಳ ಹೃದಯದಲ್ಲಿ ಸದಾ ನೆಲೆಸಿರುತ್ತಾನೆ. ಇನ್ನು ಐದನೆಯ ರೂಪವಾದ ಆರ್ಚಾರೂಪವೆನ್ನುವುದು ನಾವು ಮನೆಗಳಲ್ಲಿ, ದೇವಾಲಯಗಳಲ್ಲಿ ಪೂಜಿಸುವಂತದ್ದು.ಈ ರೂಪ ಎಲ್ಲಾ ಭಕ್ತರ ಮನೆಮನಗಳಲ್ಲಿ ನೆಲೆಸಿರುವಂತದ್ದು. ಭಕ್ತರ ಮನಸ್ಸಿಗೆ ಸುಲಭವಾಗಿ ಸೇರುವಂತದ್ದು.

ಶ್ರೀ ಮಹಾವಿಷ್ಣುವಿನಿಂದ ಅಪರ ಜ್ಞಾನವನ್ನು ಪಡೆದುಕೊಂಡ ಆಳ್ವಾರರು, ನಾಲಾಯಿರಂ ಎಂಬ ತಮಿಳ ವಾಕ್ಯದಂತೆ ಈ ದೇವದೇವನ ಕೃಪೆಗೆ ಪಾತ್ರರಾಗಿದ್ದಾರೆ.ನಮ್ಮ ದೇಶದಲ್ಲಿನ ನೂರಾಎಂಟು ವೈಷ್ಣವ ಕ್ಷೇತ್ರಗಳಲ್ಲಿ ಅವರುಗಳಿಂದ ರಚಿಸಲ್ಪಟ್ಟ ಪ್ರಬಂಧಗಳನ್ನೇ ಪಠಿಸುತ್ತಾರೆ. ಇವನ್ನು ದಿವ್ಯದೇಶಗಳೆಂದು ಕರೆಯುತ್ತಾರೆ. ನಾಲಾಯಿರಂ, ಆಳ್ವಾರರಿಗೆ ಅನುಭವಕ್ಕೆ ಬಂದಿರುವ ಅದ್ಭುತವಾದ ಜ್ಞಾನ ಇದರಲ್ಲಿ ದೇವದೇವನ ಆರ್ಚಾರೂಪವನ್ನು ವಿವಿಧ ಬಗೆಯಲ್ಲಿ ಹಾಡಿ ಹೊಗಳಿದ್ದಾರೆ.


ಈ ಆಳ್ವಾರರನ್ನು ದಿವ್ಯಸೂರಿಗಳೆಂದು ಕರೆಯುತ್ತಾರೆ.ಇವರಿಂದ ಕೊಂಡಾಡಲ್ಪಟ್ಟ ದೇವಾಲಯಗಳು ದಿವ್ಯದೇಶಗಳಾದುವು ಮತ್ತು ಆ ಮೂರ್ತಿಗಳು ದಿವ್ಯ ಮಂಗಳ ವಿಗ್ರಹಗಳಾದುವು. ವೈಷ್ಣವ ಮತದಲ್ಲಿ ಆಳ್ವಾರರಿಗೆ ಸಂಬಂಧಪಟ್ಟ ಪ್ರತಿಯೊಂದೂ ವಿಷಯವೂ ಪವಿತ್ರ ಹಾಗೂ ಆಧ್ಯಾತ್ಮಿಕವಾದುದಾಗಿದೆ.ಶ್ರೀ ಮಹಾವಿಷ್ಣುವು ಎಲ್ಲೆಡೆಯಲ್ಲೂ ಎಲ್ಲದರಲ್ಲೂ ವಾಸವಾಗಿದ್ದಾನೆ ಎಂಬ ಸಂದೇಶವನ್ನು ಆಳ್ವಾರರು ಪ್ರಪಂಚದ ಎಲ್ಲೆಡೆಯಲ್ಲೂ ಸಾರಿಹೇಳಿದ್ದಾರೆ. ಆ ಪರಮಾತ್ಮನ ಪಾದಕಮಲಗಳಲ್ಲಿ ಶರಣು ಹೋದಾಗ, ನಮ್ಮನ್ನು ನಾವು ಆತನಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಂಡಾಗ ಈ ನಿಜ ಅರಿವಾಗುತ್ತದೆ.

ಇದೇ ವಿಷಯವನ್ನು ಕುಲಶೇಖರ ಆಳ್ವಾರರು ತಮ್ಮ ಪಾಶುರವಾದ' ತರು ತುಯರಂ ತಾಡಯಲ್ ಸರನ ಅಲ್ಲಾಲ್ ಸರನ ಇಲ್ಲೈ” ನಲ್ಲಿ ಕೇರಳದ ದಿವ್ಯ ದೇಶದಲ್ಲಿನ “ತಿರುವೆಟುದಕ್ಕಡು” ವಿನ ಬಗೆಗೆ ವಿವರಿಸಿದ್ದಾರೆ. ಓ ದೇವ, ನೀನು ನನ್ನ ಕೈ ಹಿಡಿದು ಈ ಕಷ್ಟಗಳಿಂದ ಪಾರು ಮಾಡದಿದ್ದರೆ ನೀನಲ್ಲದೆ ನನಗೆ ಗತಿ ಮತಿ ಇನ್ನಾರು? ತಾಯಿ ತನ್ನ ಮಗು ಹಟ ಮಾಡಿತೆಂದು ಕೋಪದಲ್ಲಿ ಹೊಡೆದಾಗ ಆ ಮಗು ಅಳುತ್ತದೆ. ಆದರೆ ಆ ಮಾತೆಯೇ ಪುನಃ ಆ ಮಗುವನ್ನು ಸಮಾಧಾನಪಡಿಸುತ್ತಾಳೆ ಹಾಗೇ ನೀನು ನನ್ನನ್ನು ಸಲಹು.

ನಾವು ಆತ್ಮ ಮತ್ತು ದೈವದ ನಡುವಿನ ಸಂಬಂಧವನ್ನು ಅರಿತಿರಬೇಕು. ನಮ್ಮ ಆತ್ಮವನ್ನು ರಕ್ಷಿಸುವಾತ ಅವನೇ! ಆ ಸಂಬಂಧವನ್ನು ಬೇರ್ಪಡಿಸಲು ಸಾಧ್ಯವೇ ಇಲ್ಲ. ಆತನನ್ನು ತಿಳಿಯಬೇಕಾದರೆ ಅಹಂಕಾರ, ಮಮಕಾರಗಳನ್ನು ಬದಿಗಿಡಬೇಕು. ಏಕೆಂದರೆ ಆ ಅವಗುಣಗಳು ನಮ್ಮ ಆತ್ಮವನ್ನು ಪೊರೆಯಂತೆ ಸುತ್ತುವರೆದು ನಮ್ಮ ಸ್ಥಿಮಿತವನ್ನು ಕಳೆದುಕೊಳ್ಳುವಂತೆ ಮಾಡುತ್ತದೆ. ಜೊತೆಗೇ ನಮ್ಮ ಆತ್ಮವನ್ನು ತಪ್ಪುದಾರಿಗೆ ಎಳೆದೊಯ್ದು ನಿಜವಾದ ಸಂತೋಷದಿಂದ ನಮ್ಮನ್ನು ವಂಚಿತಗೊಳಿಸುತ್ತದೆ.

ಆಳ್ವಾರರು ಹನ್ನೆರಡುಜನರು. ಇವರೆಲ್ಲಾ ಭೂಮಿಗೆ ಬಂದು ಪ್ರಪಂಚದಲ್ಲಿನ ಅಂಧಕಾರವನ್ನು ಮನುಷ್ಯನಲ್ಲಿ ಘೋರ ಗಾಢಾಂಧಕಾರವನ್ನು ನಾಶಮಾಡುವುದಕ್ಕೆ ಕಾರಣ ಜನ್ಮರಾಗಿ ಅವತರಿಸಿದ ಹನ್ನೆರಡು ಸೂರ್ಯರು. ಬನ್ನಿ ನಾವೆಲ್ಲಾ ದಿವ್ಯ ಸೂರಿಯಾದ ಮಹಾನ್ ಚಕ್ರವರ್ತಿಯಾದ ಕುಲಶೇಖರ ಆಳ್ವಾರರ ಜನ್ಮದಿನವನ್ನು ಹಾಗೂ ರಥಸಪ್ತಮಿಯ ಪರ್ವದಿನವನ್ನು ಆಚರಿಸಿ, ಸೂರ್ಯನಂತೆ ನಮ್ಮ ಸುತ್ತಲೂ ಕವಿದಿರುವ ಕತ್ತಲೆಯನ್ನು ಕಳೆದುಕೊಳ್ಳೋಣ. ಹೃದಯದಲ್ಲಿ ಭಕ್ತಿ ಜ್ಞಾನದ ಜ್ಯೋತಿಯನ್ನು ಬೆಳಗಿಸೋಣ.

ಹಸಿರು ತೋರಣ



# ಆದಿದೇವ ನಮೋಸ್ತುಭ್ಯಂ ಮಮಜೀವನ ಭಾಸ್ಕರ

ಸಪ್ತಾಶ್ವರಥಾರೂಢಂ ಪ್ರಚಂಡಂ ಕಶ್ಯಪಾತ್ಮಜಂ ।
ಶ್ವೇತಪದ್ಮಧರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಮ್॥

ಪ್ರತ್ಯಕ್ಷದೈವನಾದ ಶ್ರೀ ಸೂರ್ಯ ಭಗವಂತನು ಸಮಸ್ತ ಲೋಕಕ್ಕೂ ಬೆಳಕು ಕೊಡುವ ದೇವದೇವನು. ಈ ಸ್ವಾಮಿಯು ಶ್ರೀಕಾಕುಳಂ ಜಿಲ್ಲೆಯ ಅರಸಪಲ್ಲಿಯಲ್ಲಿ ನೆಲೆಗೊಂಡಿದ್ದಾನೆ. ಸೂರ್ಯನಾರಾಯಣನನ್ನು ದೇವತೆಗಳ ರಾಜನಾದ ಇಂದ್ರ ಪ್ರಜಾಪತಿ ಪ್ರತಿಷ್ಠಾಪಿಸಿದ್ದಾನೆಂದು ಸ್ಥಳಪುರಾಣಗಳು ಹೇಳುತ್ತದೆ.

ಏಳು ಕುದುರೆಗಳ ರಥದಲ್ಲಿ ಸ್ವಾಮಿಯು ಮಹಾ ಪ್ರಚಂಡವಾದ ಕಾಂತಿಯಿಂದ ಪದ್ಮಪತ್ರ ನಯನನಾಗಿ ಮಕರಕುಂಡಲ ಧಾರನಾಗಿ ಎರಡೂ ಕೈಗಳಲ್ಲಿ ಶ್ವೇತ ಪದ್ಮಗಳನ್ನು ಧರಿಸಿ ರಾಜ ಗಾಂಭೀರ್ಯದಿಂದಿದ್ದಾನೆ. ಸ್ವಾಮಿಯ ಎಡಭಾಗದಲ್ಲಿ ಉಷಾದೇವಿ, ಬಲಭಾಗದಲ್ಲಿ ಪದ್ಮಿನಿದೇವಿ ಸ್ವಾಮಿಯ ಪಾದ ಪದ್ಮಗಳ ಬಳಿ ಛಾಯಾದೇವಿ ಶೋಭಿಸುತ್ತಾರೆ. ಎರಡೂ ಕಡೆಗಳಲ್ಲಿ ಪಿಂಗಳ ಮಾರ್ತಾಂಡರೂ, ಮತ್ತು ಮೇಲ್ಭಾಗದಲ್ಲಿ ಸನಕ ಸನಂದಾದಿ ಮಹರ್ಷಿಗಳೊಂದಿಗೆ ಗಂಧರ್ವರು ಕಿನ್ನರ - ಕಿಂಪುರುಷರು, ಅಪ್ಸರೆಯರು ನೆಲೆಗೊಂಡಿದ್ದಾರೆ. ಸ್ವಾಮಿಗೆ ವಿಶ್ವಕರ್ಮ ನಿರ್ಮಿಸಿ ಕೊಟ್ಟ ಬಂಗಾರ ರಥದ ಉದ್ದ 36 ಲಕ್ಷ ಯೋಜನೆಗಳಾದರೆ ಅಗಲ 9 ಲಕ್ಷ ಯೋಜನೆಗಳು.

ಈ ರಥದಲ್ಲಿ ಸೂರ್ಯನ ಪರಿವಾರ ದೈವರಾದ ಬ್ರಹ್ಮ ರುದ್ರಾದಿಗಳು, ಗಣಪತಿ ಹಾಗೂ ಕುಮಾರ ಸ್ವಾಮಿಯ ಜೊತೆಗೆ ಇಂದ್ರಾದಿಗಳು ಸಹಾ ಇದ್ದಾರೆ. ಅಲ್ಲದೇ ಭಗವಂತನ ಸಪ್ತ ಕುದುರೆಗಳೂ ಇವೆ.

ಸ್ವಾಮಿಯವರ ವಿವರಣಾಚಿತ್ರವೆಂದರೆ ಪದ್ಮ ಪುರಾಣ ಹಾಗೂ ಋಗ್ವೇದ, ಕಾಶ್ಯಪಶಿಲ್ಪಶಾಸ್ತ್ರ ನಿಯಮಾವಳಿ, ರೂಪಧ್ಯಾನರತ್ನಾವಳಿ, ಉತ್ತಮ ದಶತಲಾಪ್ರಕಾರ ಭಾರತೀಯ ಸಂಪ್ರದಾಯ ಚಿತ್ರಕಲೆ ಹಾಗೂ ಕಲಂಕಾರಿ ಚಿತ್ರಕಲೆಯು ಮೇಳೈಸಿ ಚಿತ್ರಿಸಲಾಗಿದೆ.

ಸೂರ್ಯಭಗವಂತನು ಮೂರು ವೇದಗಳ ಕುರುಹಾಗಿ ನಿಂತಿದ್ದಾನೆ. ಅವು ಋಗ್ವೇದ, ಯಜುರ್ವೇದ ಹಾಗೂ ಸಾಮವೇದ. ಅದರಿಂದಲೇ ಸೂರ್ಯ ಮೂರು ಕಾಲನಾಗಿ ನಿಂತಿದ್ದಾನೆ.

ಋಗ್ವೇದದಲ್ಲಿ ಕತ್ತಲೆಯನ್ನು ತೊಲಗಿಸುವವನು ಹಾಗೂ ಜ್ಞಾನವನ್ನು ನೀಡುವವನು. ಸರ್ವಜೀವಿಗಳಿಗೂ ಆಧಾರನು, ಒಳ್ಳೆಯದನ್ನೇ ಕೊಡುವವನೂ ಆರೋಗ್ಯ ಪ್ರದಾತನೂ ಎಂದು ಹೇಳಲಾಗಿದೆ.

ರಥಸಪ್ತಮಿ ಪ್ರಧಾನವಾಗಿ ಸೂರ್ಯನನ್ನು ಆರಾಧಿಸುವ ಹಬ್ಬವಾಗಿದೆ. ರಥಸಪ್ತಮಿಯನ್ನು 'ಸೂರ್ಯಜಯಂತಿ' ಎಂದು ಕೂಡಾ ಕರೆಯುತ್ತಾರೆ. ಹಲವು ಪ್ರಾಂತ್ಯಗಳಲ್ಲಿ ಸೌರಸಪ್ತಮಿ, ಭಾಸ್ಕರಸಪ್ತಮಿ - ಜಯಂತಿ, ಮಹಾಸಪ್ತಮಿ ಎಂದು ಸಹಾ ಕರೆಯುತ್ತಾರೆ. ಪರಮಾತ್ಮನು ಸೂರ್ಯನನ್ನು ಸೃಷ್ಟಿಸಿದ್ದು ಮಾಘಶುದ್ಧ ಸಪ್ತಮಿಯಂದೇ ಆದ್ದರಿಂದ ಈ ಹಬ್ಬವು ಸೂರ್ಯಜಯಂತಿಯೆಂದು ಪ್ರಸಿದ್ಧಿ ಪಡೆದಿದೆ. ಸೂರ್ಯನು ಅದಿತಿ, ಕಶ್ಯಪರ ಪುತ್ರನಾಗಿ ಜನ್ಮಿಸಿದ್ದು ಸಹಾ ಮಾಘಶುದ್ಧ ಸಪ್ತಮಿಯಂದೇ ಆದ್ದರಿಂದ ಸೂರ್ಯಜಯಂತಿಯೆಂದೂ, ಸೂರ್ಯಮಾತೃಕೆ ಎಂದೂ ಸಹಾ ಕರೆಯಲ್ಪಡುತ್ತದೆ.

## ದ್ವಾದಶಾದಿತ್ಯರು

ಸೂರ್ಯನನ್ನು ಸೂರ್ಯನಾರಾಯಣನೆಂದು ಸಹಾ ಕರೆಯುತ್ತಾರೆ. ಅಂದರೆ ಸೂರ್ಯನು ನಾರಾಯಣ ಸ್ವರೂಪನು (ವಿಷ್ಣುಪುರಾಣಂ,

- ಮೂಲ. ಕು॥ ಎಸ್. ಲಾವಣ್ಯ
- ಅನುವಾದ. ಕೆ. ನರಸಿಂಹಮೂರ್ತಿ

ಭಗವದ್ಗೀತೆ) ಶ್ರೀಮನ್ನಾರಾಯಣ ಸ್ವರೂಪನಾದ ಸೂರ್ಯನು ಏಕಸ್ವರೂಪವೇ ಆದರೂ ಸಹಾ ಕಾಲದೇಶ ಕ್ರಿಯಾದಿ ಭೇದಗಳಲ್ಲಿ ಹನ್ನೆರಡು ರೂಪಗಳನ್ನು ಹೊಂದಿ ಒಂದೊಂದು ಮಾಸದಲ್ಲಿ ಒಂದೊಂದು ರೂಪದಿಂದ ಪ್ರಕಾಶಿಸುತ್ತಾ ಒಂದೊಂದು ಹೆಸರಿನಿಂದ ಕರೆಯಲ್ಪಡುತ್ತಿರುತ್ತಾನೆ. ಅವುಗಳು- ಚೈತ್ರ - ಧಾತೆ, ವೈಶಾಖ - ಆರ್ಯ, ಜ್ಯೇಷ್ಠ- ಮಿತ್ರ, ಆಷಾಢ - ವರುಣ, ಶ್ರಾವಣ - ಇಂದ್ರ, ಭಾದ್ರಪದ - ವಿವಸ್ವತ, ಆಶ್ವಯುಜ- ತ್ವಷ್ಟ, ಕಾರ್ತಿಕ - ವಿಷ್ಣು, ಮಾರ್ಗಶಿರ - ತರ್ಯಾಮ, ಪುಷ್ಯ - ಭಗ, ಮಾಘ - ಪೂಷು, ಫಾಲ್ಗುಣ - ಕ್ರತು.

ಮಾನವರಿಂದಷ್ಟೇ ಅಲ್ಲದೇ ಸುರಾಸುರರಿಂದಲೂ ಪೂಜೆ ಗೊಳ್ಳುತ್ತಾನೆ. ಈ ಸೂರ್ಯ ಸುಪ್ರಸಿದ್ಧವಾದ ಗಾಯಿತ್ರಿ ಮಂತ್ರ ಸೂರ್ಯಪರವಾದದ್ದು. 'ಆದಿತ್ಯ ಹೃದಯ'ವನ್ನು ಪಠಿಸಿದ್ದರಿಂದಲೇ ಶ್ರೀರಾಮನು ರಾವಣನನ್ನು ಸಂಹರಿಸಬಲ್ಲವನಾಗಿದ್ದಾನೆ. ಪಾಂಡವರು ಸೂರ್ಯಾನುಗ್ರಹದಿಂದಲೇ ಅಕ್ಷಯ ಪಾತ್ರೆಯನ್ನು ಹೊಂದಿ ಅರಣ್ಯವಾಸ ಸಮಯದಲ್ಲಿ ತಮ್ಮೊಂದಿಗೆ ಅಲ್ಲಿದ್ದ ವರಿಗೆಲ್ಲಾ ಆಹಾರ ಸಮಸ್ಯೆಯಿಲ್ಲದೇ ಅತಿಥಿಸತ್ಕಾರಗೈಯುತ್ತಾ ಧನ್ಯರಾಗಿದ್ದಾರೆ. ಸೂರ್ಯೋಪಾಸನೆಯಿಂದಲೇ ಸತ್ರಾಜಿತು ಶ್ಯಮಂತಕಮಣಿಯನ್ನು ಹೊಂದಿದ್ದಾನೆ. ರಥಸಪ್ತಮಿಯಂದು ಅರುಣೋದಯ ಕಾಲದಲ್ಲಿ ಸ್ನಾನಮಾಡಿ ಸೂರ್ಯನನ್ನು ಆರಾಧಿಸುವುದು ಮಹಾಪುಣ್ಯಕರವೆಂದೂ, ಆರೋಗ್ಯಕರ ವೆಂದೂ ಅಕಾಲ ಮೃತ್ಯು ಪರಿಹಾರಕವೆಂದೂ ಮರಣಾನಂತರ ಸೂರ್ಯಲೋಕವನ್ನು ತಲುಪಿಸುತ್ತವೆಂದೂ ಪುರಾಣಗಳು ಸಾರುತ್ತವೆ. ರಥಸಪ್ತಮಿದಿನ ಸೂರ್ಯೋದಯ ಕಾಲದಲ್ಲಿ ಆಕಾಶ ದಲ್ಲಿ ನಕ್ಷತ್ರಗಳ ನಿಲುವು ರಥಾಕಾರದಲ್ಲಿರುತ್ತದೆ. ಹೀಗೆ ರಥಾ ಕಾರದಲ್ಲಿ ನಕ್ಷತ್ರಗಳು ಕೂಡುವ ಈ ದಿನಕ್ಕೆ ರಥಸಪ್ತಮಿಯೆಂದು ಹೆಸರು ಬಂದಿದೆ.

### ಎಕ್ಕೆಎಲೆಗಳಿಗೆ ಪ್ರಾಶಸ್ತ್ಯ

ರಥಸಪ್ತಮಿಯಂದು ಶಿರಸ್ನಾನದಲ್ಲಿ ಎಕ್ಕದೆಲೆಗಳನ್ನು ತಲೆಯ ಮೇಲೆ, ಭುಜಗಳ ಮೇಲೆ, ಕೈಗಳ ಮೇಲೆ, ಇಟ್ಟುಕೊಂಡು ಸ್ನಾನವನ್ನು ಮಾಡಬೇಕು. ಸೂರ್ಯಕಿರಣಗಳಲ್ಲಿನ ಪ್ರಾಣಶಕ್ತಿಯನ್ನು ಅತ್ಯಧಿಕವಾಗಿ ಹಿಡಿದಿಟ್ಟುಕೊಳ್ಳಬಲ್ಲ ಶಕ್ತಿ ಈ ಎಲೆಗಳಿಗಿವೆ. ಎಕ್ಕದೆಲೆಗಳನ್ನು ಅರ್ಕಪತ್ರವೆಂದೂ ಕರೆಯುತ್ತಾರೆ.



ಸೂರ್ಯನಿಗೆ 'ಅರ್ಕ' ಎಂಬ ಹೆಸರೂ ಸಹಾ ಇದೆ. ಇದು ಸೂರ್ಯರಶ್ಮಿಯ ಪ್ರಾಣಶಕ್ತಿಯನ್ನು ಹೆಚ್ಚಾಗಿ ಹಿಡಿದಿಟ್ಟು ಕೊಳ್ಳುವುದರಿಂದ ಇದು ಉಷ್ಣಕಾರಿ. ಇದು ಸರ್ವರೋಗ ಪರಿಹಾರಕವಾಗಿ ಸಹ ಬಳಸಲ್ಪಡುತ್ತದೆ. ಎಕ್ಕದೆಲೆಗಳೂ ಸಹಾ ಇಂತಹ ಲಕ್ಷಣಗಳನ್ನು ಹೊಂದಿರುತ್ತದೆ. ಈ ಎರಡೂ ಪತ್ರೆಗಳನ್ನೇ ಹೊಂದಿರುತ್ತದೆ. ಈ ಎರಡೂ ಪತ್ರೆಗಳಲ್ಲಿ ಸೂರ್ಯಕಿರಣಗಳ ಪ್ರಾಣ ಶಕ್ತಿಯ ಪ್ರಭಾವ ಹೆಚ್ಚಾಗಿರುವು ದರಿಂದ ಇವನ್ನು ತಲೆ, ಹಾಗೂ ಭುಜಗಳ ಮೇಲಿಟ್ಟುಕೊಂಡು ಸ್ನಾನ ಮಾಡುವುದರಿಂದ ಇವುಗಳ ಪ್ರಭಾವದಿಂದಾಗಿ ಶಿರೋಭಾಗದ ಚೈತನ್ಯ ಉದ್ದೀಪನೆಗೊಂಡು ಆ ಭಾಗದ ಅಂಗಾಂಗಗಳನ್ನೆಲ್ಲಾ ಉತ್ತೇಜಿಸುತ್ತದೆ. ಇದರಿಂದಾಗಿ ಮಾನಸಿಕ ದೃಢತೆ, ಜ್ಞಾಪಕಶಕ್ತಿ ವೃದ್ಧಿಗೊಳ್ಳುತ್ತದೆ. ಶರೀರ ಸಂಬಂಧಿ ಕಾಯಿಲೆಗಳು ನಶಿಸುತ್ತವೆ. ಈ ದಿನದಂದು ಚಳ್ಳಿಂಬರೆಕಾಯಿಂದ ರಥವನ್ನು ಮಾಡಿ ಅದರಲ್ಲಿ ಸೂರ್ಯ ಬಿಂಬವನ್ನು ವೀಳ್ಯದೆಲೆಯ ಮೇಲೆ ಬಿಡಿಸಿ, ಇಟ್ಟು ಪೂಜಿಸು ವುದು ಕೆಲವರ ಆಚಾರ.

### ಮಾಘಮಾಸ ಪ್ರಶಸ್ತಿ

ಉತ್ತರಾಯಣವು ಮಕರ ಸಂಕ್ರಮಣದಿಂದ ಆರಂಭ ಗೊಂಡರೂ ರಥಸಪ್ತಮಿಯಿಂದಲೇ ಗೋಚರಗೊಳ್ಳು ವುದು. ಈ ದಿನದಿಂದಲೇ ಬೇಸಿಗೆಯ ಪ್ರಾರಂಭ. ಈ ದಿನ ದಿಂದ ಸೂರ್ಯನು ಉತ್ತರಕ್ಕೆ ಪ್ರಕಾಶಿಸುತ್ತಾನಾದ್ದರಿಂದ ಇದನ್ನು ಸೂರ್ಯಗ್ರಹಣ ತುಲ್ಯವಾಗಿ ಭಾವಿಸಿ ತರ್ಪಣಗಳನ್ನು ಕೊಡಬೇಕೆಂಬ ನಿಯಮವನ್ನು ವಿಧಿಸಿದ್ದಾರೆ ನಮ್ಮ ಹಿರಿಯರು. ಉತ್ತರಾಯಣ ಮಾಘಮಾಸವು ಮಾನವನನ್ನು ಉನ್ನತ ಜ್ಞಾನ ಮಾರ್ಗಕ್ಕೆ ಪಯಣಿಸುವಂತೆ ಮಾಡಿ, ಭಗವತ್ಸಾಕ್ಷಾತ್ಕಾರಕ್ಕೆ ಪ್ರಾಪ್ತನನ್ನಾಗಿ ಮಾಡುತ್ತದೆ.

### ಆರೋಗ್ಯ ಪ್ರದಾತನಾಗಿ ಆದಿತ್ಯ

ಸೂರ್ಯೋಪಾಸನೆಯಿಂದ, ಸೂರ್ಯ ನಮಸ್ಕಾರ ದಿಂದ, ಸೂರ್ಯನ ಮುಂದೆ ನಿಲ್ಲುವುದರಿಂದ ಶರೀರಕ್ಕೆಷ್ಟೋ ಆರೋಗ್ಯವು ಕೈಗೊಡುತ್ತದೆ. ಆತ್ಮ ವಿಶ್ವಾಸ ಬೆಳೆಯುತ್ತದೆ. ನೇತ್ರಶಕ್ತಿ ವೃದ್ಧಿಸುತ್ತದೆ. ಹೃದ್ರೋಗ ನಿವಾರಣೆಗೆ ಸೂರ್ಯನೇ ಆರಾಧ್ಯ ದೈವ ಸೂರ್ಯ ಆರೋಗ್ಯ ಪ್ರದಾತ ಸೂರ್ಯ ಕಾಂತಿಯ ನೀಲಿಕಿರಣಗಳ ಪ್ರಭಾವದಿಂದಲೇ ನಮ್ಮ ಶರೀರ ಸಹಜ ಸಿದ್ಧವಾಗಿಯೇ "ವಿಟಮಿನ್-ಡಿ" ಯನ್ನು ಉತ್ಪತ್ತಿ ಮಾಡಬಲ್ಲದು ಈ ವಿಟಮಿನ್ ಕೊರತೆಯುಂಟಾದರೆ ಶರೀರ ದಲ್ಲಿ ಎಲುಬುಗಳ ವಿಕಾರಗಳು ಮೈದೋರುತ್ತವೆ. ಆದ್ದರಿಂದಲೇ ಉದಯಕಾಲದಲ್ಲಿ ಸೂರ್ಯಾಭಿಮುಖವಾಗಿ ಅರ್ಧಗಂಟೆ ಯಾದರೂ ನಿಂತು ಸೂರ್ಯ ನಮಸ್ಕಾರ ಮಾಡಬೇಕೆಂದೂ,



ವ್ಯಾಯಾಮಗಳನ್ನು ಮಾಡಬೇಕೆಂದೂ ವಿಧಿಸಿದ್ದಾರೆ ಹಿರಿಯರು.

### ಲೋಕಪೋಷಕನು ಸೂರ್ಯನು

ಈ ಸೃಷ್ಟಿಯ ಜೀವರಾಶಿಗಳೆಲ್ಲವೂ ತಮ್ಮ ಆಹಾರಾವಸರಗಳಿಗಾಗಿ ಪರೋಕ್ಷವಾಗಿಯೂ, ಅಪರೋಕ್ಷವಾಗಿಯೂ ಸೂರ್ಯನ ಮೇಲೆಯೇ ಆಧರಿಸಿವೆ. ಸೂರ್ಯಕಿರಣಗಳನ್ನು ಬಳಸಿಕೊಂಡೇ ಮರಗಿಡಗಳು ಕಿರಣಜನ್ಯ ಸಂಯೋಗ ಕ್ರಿಯೆಗಳ ದ್ವಾರ ಆಹಾರವನ್ನು ಉತ್ಪತ್ತಿ ಮಾಡಿಕೊಳ್ಳುತ್ತದೆ. ಶಾಖಾಹಾರಿ ಜೀವಿಗಳೆಲ್ಲಾ ತಮ್ಮ ಆಹಾರಕ್ಕಾಗಿ ಮರಗಿಡಗಳನ್ನೇ ಅವಲಂಭಿಸಿವೆ. ಇನ್ನು ಮಾಂಸಾಹಾರಿ ಪ್ರಾಣಿಗಳು ಮಾಂಸಕ್ಕಾಗಿ ಶಾಖಾಹಾರಿ ಪ್ರಾಣಿಗಳನ್ನೇ ಅವಲಂಭಿಸಿವೆ. ಹೀಗೆ ಎಲ್ಲಾ ವಿಧದ ಪ್ರಾಣಿಗಳೂ ಆಹಾರಕ್ಕಾಗಿ ಆದಿತ್ಯನನ್ನೇ ಅವಲಂಬಿಸಿವೆ. ಈ ರೀತಿಯಲ್ಲಿ ಸೂರ್ಯನು ಲೋಕಪೋಷಕನಾಗಿದ್ದಾನೆ.

ಸೂರ್ಯನರಥಕ್ಕೆ ಒಂದೇ ಚಕ್ರ. ಅದಕ್ಕೆ ಕಡಿಗಳು ಆರು, ಕುದುರೆಗಳು ಏಳು, ಸೂರ್ಯನ ರಥಸಾರಥಿ ಅಸೂರನು. ನಿರಂತರ ಪ್ರಯಾಣವು ಬೆಳಕು ಶಾಖಗಳನ್ನು ಹೊರಹೊಮ್ಮಿಸುವುದೇ ಸೂರ್ಯನ ಲಕ್ಷಣ ಇದೊಂದು ಭೌತಿಕಸ್ವರೂಪವು ಸೂರ್ಯನಿಗೆ ಒಂದು ಸಂವತ್ಸರವೆಂಬುದೊಂದು ಚಕ್ರ. ವಿಶ್ವವೇ ರಥವು. ಆರು ಋತುಗಳೇ ಆರು ಕೀಲುಗಳು. ಛಂದಸ್ಸುಗಳೇ ಕುದುರೆಗಳು ರಥ ಸಪ್ತಮಿಯಿಂದ ಕತ್ತಲೆ, ಛಳಿ ತೊಲಗಿ ಅಂದರೆ ಮಾಯಾವಾಗಿ ಶಾಂತಿಯುಗ ಪ್ರಾರಂಭಗೊಳ್ಳುತ್ತದೆ.

### ತಿರುಮಲೆಯಲ್ಲಿ ರಥಸಪ್ತಮಿ

ಶ್ರೀ ತಿರುಮಲೇಶನಿಗೂ, ಸೂರ್ಯನಿಗೂ, ರಥಸಪ್ತಮಿಗೂ ಸಪ್ತಮಿ ಸಂಖ್ಯೆಗೂ ಅವಿನಾಭಾವ ಸಂಬಂಧವಿದ್ದಂತೆ ಗೋಚರಿಸುತ್ತದೆ. ತಿರುಮಲೇಶನನ್ನು

ಸಪ್ತಗಿರಿಯಲ್ಲಿ ನೆಲೆಗೊಂಡು ಭಕ್ತರನ್ನು ರಕ್ಷಿಸುತ್ತಿರುವವನು. ಸೂರ್ಯನು ಸಪ್ತಾಶ್ವರಥದಲ್ಲಿ ಪಯಣಿಸುತ್ತಾ ಏಳು ಅಧೋಲೋಕಗಳನ್ನು, ಏಳು ಊರ್ಧ್ವಲೋಕಗಳನ್ನು ತನ್ನ ಕಾಂತಿಯುತವಾದ ಕಿರಣಗಳಿಂದ ಚೈತನ್ಯೋಹಾರಿಯಾಗಿ ಮಾಡುತ್ತಿರುತ್ತಾನೆ. ಇಬ್ಬರೂ ತಮೋಹಾರಿಗಳೂ, ಪಾಪೋ ಹಾರಿಗಳಾಗಿಯೂ ಸಂಚಾರ, ಸರ್ವಲೋಕರಕ್ಷಣವೆಂಬ ಲಕ್ಷಣಗಳನ್ನು ಹೊಂದಿದ್ದಾರೆ.ತಿರುಮಲೇಶನು ವೆಂಕಟ ನಾರಾಯಣನಾದರೆ ಆದಿತ್ಯನು ಸೂರ್ಯನಾರಾಯಣನು. ತಿರುಮಲೇಶನ ರಥವೂ ಹಿರಣ್ಮಯವೇ; ಸೂರ್ಯರಥವೂ ಹಿರಣ್ಮಯವೇ ಸ್ವಾಮಿ ಶ್ರೀದೇವಿ - ಭೂದೇವಿ ಸಮೇತನು. ಸೂರ್ಯನು ಸಂಜ್ಞಾ - ಛಾಯಾ ಸಮೇತನು. ಹೀಗೆ ಲಕ್ಷ್ಮೀ ನಾರಾಯಣನಿಗೂ ಸೂರ್ಯನಾರಾಯಣನಿಗೂ ಬಹಳ ಸೌಮ್ಯತೆಗಳುಂಟು.ತಿರುಮಲೇಶನ ವಿಶೇಷ ಉತ್ಸವಗಳಲ್ಲಿ ರಥಸಪ್ತಮಿ ಒಂದು ವಿಶಿಷ್ಟ ಸ್ಥಾನವನ್ನು ಹೊಂದಿದೆ.

ಪ್ರತಿವರ್ಷ ಮಾಘ ಶುದ್ಧ ಸಪ್ತಮಿಯಂದು ಬರುವ ಸೂರ್ಯೋಜಯಂತಿ - ರಥಸಪ್ತಮಿಯನ್ನು ತಿರುಮಲೆಯದಲ್ಲಿ ಮಹಾವೈಭವೋಪೇತವಾಗಿ ಜರುಗಿಸುತ್ತಾರೆ. ಆ ದಿನ ತಿರುಮಲೆ ಯಲ್ಲಿ ರಥಸಪ್ತಮಿಯ ಹೆಸರಿನಲ್ಲಿ ಉತ್ಸವಗಳು ಆಚರಣೆ ಗೊಳ್ಳುತ್ತವೆ.ಆ ದಿನ ಸೂರ್ಯೋದಯದಿಂದ ಸೂರ್ಯಾಸ್ತದ ವರೆಗೆ ಸ್ವಾಮಿ ಏಳು ಬಗೆಬಗೆಯ ವಾಹನಗಳನ್ನೇರಿ ಭಕ್ತರಿಗೆ ದರ್ಶನ ವೀಯುತ್ತಾನೆ. ಅವುಗಳೆಂದರೆ 1) ಸೂರ್ಯಪ್ರಭ ವಾಹನ 2) ಚಿಕ್ಕಶೇಷವಾಹನ 3) ಗರುಡವಾಹನ 4) ಹನುಮದ್ವಾಹನ 5)ಕಲ್ಪವೃಕ್ಷವಾಹನ 6) ಸರ್ವಭೂಪಾಲ ವಾಹನ 7) ಚಂದ್ರ ಪ್ರಭವಾಹನ.ಆ ದಿನ ಮಧ್ಯಾಹ್ನ ವರಾಹ ಸ್ವಾಮಿಯ ದೇವಾಲಯದ ಮುಂದಿರುವ ಪುಷ್ಕರಣಿಯಲ್ಲಿ ಚಕ್ರತ್ತಾ ಳ್ವಾರ್‌ಗೆ (ಸುದರ್ಶನ ಚಕ್ರಮೂರ್ತಿಗೆ) ಚಕ್ರಸ್ನಾನ ಜರುಗಿಸ ಲಾಗುತ್ತದೆ.

ಎಂದೂ ಇಲ್ಲದ ವಿಶೇಷ ರೀತಿಯಲ್ಲಿ ಆ ದಿನ ಸ್ವಾಮಿಯು ಏಳು ವಾಹನಗಳಲ್ಲಿ ಏಳು ಬಾರಿ ವಿಧ - ವಿಧ ಅಲಂಕಾರ ಗಳಿಂದ, ದಿವ್ಯಶೋಭೆಗಳಿಂದ ವಿಹರಿಸುತ್ತಾ ಭಕ್ತರಿಗೆ ದರ್ಶನ ವೀಯುವುದು ರಥಸಪ್ತಮಿಯಂದು ಮಾತ್ರವೇ ಜರಗುವ ವಿಶಿಷ್ಟಾ ವಿಶಿಷ್ಟ ಮಹೋತ್ಸವವು ಆದ್ದರಿಂದಲೇ ರಥಸಪ್ತಮಿ ಉತ್ಸವ ಗಳನ್ನು ಅರ್ಧ ಬ್ರಹ್ಮೋತ್ಸವವೆಂದೂ ಒಂದು ದಿನದ ಬ್ರಹ್ಮೋ ತ್ಸವವೆಂದು ಭಕ್ತರು ವರ್ಣಿಸುತ್ತಾರೆ.

ಇಷ್ಟು ವೈಶಿಷ್ಟಗಳನ್ನು ಒಳಗೊಂಡಿರುವ ವಿಶೇಷದಿನ ಈ ರಥಸಪ್ತಮಿ ಆದ್ದರಿಂದಲೇ ಎಲ್ಲರೂ ರಥಸಪ್ತಮಿದಿನ (ಪ್ರತಿ ದಿನವೂ ಸಹಾ) ಈ ಸೂರ್ಯನಾರಾಯಣನನ್ನು ಆರಾಧಿ ಸೋಣ, ಆಯುರಾರೋಗ್ಯಐಶ್ವರ್ಯಗಳನ್ನು ಹೊಂದೋಣ.

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

## ಚಂದಾದಾರರಿಗೆ ವಿಜ್ಞಪ್ತಿ

ಸಪ್ತಗಿರಿ ಮಾಸಪತ್ರಿಕೆ ಪಾಠಕರಿಗೆ ಪ್ರತಿ ತಿಂಗಳು ಸಕಾಲದಲ್ಲಿ ಸೇರಲು ಅನೇಕ ಕ್ರಮ ಗಳನ್ನು ಕೈಗೊಂಡಿದೆ. ಭಕ್ತರು ತಮ್ಮ ವಿಳಾಸದಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ನಮಗೆ ತಿಳಿಸಬೇಕಾಗಿ ಕೋರಲಾಗಿದೆ. ಪಾಠಕರು ಈ ವಿಷಯವನ್ನು ಈ ಕೆಳಗೆ ತಿಳಿಸಿದಂತೆ ಪ್ರಧಾನ ಸಂಪಾದಕರ ಕಾರ್ಯಾಲಯಕ್ಕೆ ತಿಳಿಸ ಬೇಕಾಗಿ ವಿನಂತಿ.

1) "ಸಪ್ತಗಿರಿ" ಮಾಸಪತ್ರಿಕೆಗೆ ಸಂಬಂಧಿಸಿದ ಸಲಹೆ/ಸೂಚನೆ/ದೂರುಗಳನ್ನು sapthagiri_helpdesk@tirumala.org ಮುಖಾಂತರ ತಿಳಿಯ ಪಡಿಸಿ.

2) ಸಪ್ತಗಿರಿ ಚಂದಾದಾರರ ವಿಳಾಸದಲ್ಲಿ ಬದ ಲಾವಣೆ ಇದ್ದಲ್ಲಿ 0877 - 2264543 ದೂರ ವಾಣಿ ಸಂಖ್ಯೆಗೆ ಕರೆ ಮಾಡಿ ತಮ್ಮ ಪೂರ್ತಿ ವಿಳಾಸವನ್ನು ಪಿನ್‌ಕೋಡ್, ಸೆಲ್ ನಂಬರ್ ಸಮೇತ ಕಾರ್ಯಾಲಯದ ಕೆಲಸದ ವೇಳೆ ಯಲ್ಲಿ (ಬೆ.10.30 ರಿಂದ ಸಂಜೆ 5.00 ಗಂಟೆ ಯೊಳಗೆ) ತಿಳಿಸಬೇಕು.

3. ಕಾರ್ಯಾಲಯದ ದೂರವಾಣಿ ನಂಬರ್ ಮುಖಾಂತರವಾಗಲಿ, sapthagiri_helpdesk @tirumala.org ಮುಖಾಂತರ ತಿಳಿಯಪಡಿಸಿ.

4. ಆನ್‌ಲೈನ್ ಚಂದಾದಾರರು ತಮ್ಮ ಪೂರ್ತಿ ವಿಳಾಸವನ್ನು ಕ್ರಮಬದ್ಧೀಕರಿಸಲು ತಿ.ತಿ.ದೇ. ವೆಬ್‌ಸೈಟ್ ಮುಖಾಂತರ ಮತ್ತೊಮ್ಮೆ ತಿಳಿಸ ಬೇಕಾಗಿ ಕೋರಲಾಗಿದೆ.

-ಪ್ರಧಾನ ಸಂಪಾದಕರು



# ಭವ್ಯ ಮೂರ್ತಿ ಭೀಷ್ಮ ಪಿತಾಮಹ

- ಶ್ರೀಮತಿ. ಸುಮಚಂದ್ರಶೇಖರ್

ಬಿಳಿಯ ಕೂದಲುಗಳ ಹರಹಿನ ಮೇಲೆ ಅಲಂಕೃತವಾದ ಶಿರದ ಕಿರೀಟ, ಜೋಲಿದ ಹುಬ್ಬು, ಕಣ್ಣುಗಳನ್ನೆ ಮುಚ್ಚುವುದೋ ಎಂಬಂತಿರುವ ಹುಬ್ಬಿನ ಮೇಲಿನ ಕೂದಲು, ರಾಜಪೋಷಾಕು, ಕೈಯಲ್ಲಿ ಧನಸ್ಸು ಬಾಣ - ಇದು ಕಲಾವಿದರು ಸಾಮಾನ್ಯವಾಗಿ ಚಿತ್ರಿಸಿರುವ ಭೀಷ್ಮರ ಚಿತ್ರ, ಪರಮಭಾಗವತರ ಗೋಷ್ಠಿಯಲ್ಲಿ ಇಂದೂ ಭೀಷ್ಮರ ಹೆಸರು ಅಜರಾಮರವಾಗಿ ಅವರ ಉಜ್ವಲ ವಿಷ್ಣು ಭಕ್ತಿಗೆ ಸ್ಮಾರಕವಾಗಿದೆ. ಯುದ್ಧ ಭೂಮಿಯಲ್ಲಿ ಕೆಳಗುರುಳಿ, ಶರಶಯ್ಯೆಯಲ್ಲಿ ನರಳುತ್ತಿದ್ದಾಗ ಧರ್ಮಜನಿಗೆ ಉಪದೇಶಿಸಿದ ವಿಷ್ಣು ಸಹಸ್ರನಾಮ ಸ್ತೋತ್ರಗಳಲ್ಲೆ ಶಿಖರಪ್ರಾಯವಾಗಿದೆ.

ಭೀಷ್ಮ ಕುರುವಂಶದ ಮಹೋನ್ನತ ವ್ಯಕ್ತಿ. ಭೀಷ್ಮ ಎಂದಾಗ ಭೀಷಣ ಎಂಬ ಪದಜ್ಞಾಪಕಕ್ಕೆ ಬಂದು ಭಯಂಕರ ಎಂಬ ಅರ್ಥ ಮನಸ್ಸಿನಲ್ಲಿ ಸುಳಿಯುತ್ತದೆ. ಆದರೆ ಭೀಷ್ಮನು ಭಯಂಕರನೂ ಅಲ್ಲ, ಭೀಷಣನೂ ಅಲ್ಲ. ರಣಭಯಂಕರನಾದ ಭೀಷ್ಮನು ಶತ್ರುಗಳಿಗೆ ಭೀಷಣನಾಗಿದ್ದಾನೆ ಹೊರತು ಇತರರಿಗಲ್ಲ. ಧರ್ಮ- ರಾಜಕೀಯ ಪ್ರಜ್ಞೆ, ಆಡಳಿತಾನುಭವ, ಸತ್ಯನಿಷ್ಠೆ, ಭಾರತೀಯ ಸಂಸ್ಕೃತಿಯ ಪೂರ್ಣಪ್ರಜ್ಞೆ ಔನ್ನತ್ಯದಲ್ಲಿ ಭೀಷ್ಮನನ್ನು ಮೀರಿಸುವವರಾರೂ ಇರಲಿಲ್ಲ.

## ಗಂಗಪುತ್ರ ಭೀಷ್ಮ

ಚಂದ್ರವಂಶ ದ್ವಾಪರ ಯುಗದಲ್ಲಿ ರಾಜ್ಯವಾಳಿದ ಅರಸು ವಂಶಗಳಲ್ಲಿ ಬಹಳ ಪ್ರಸಿದ್ಧವಾದುದು. ಚಂದ್ರವಂಶದಲ್ಲಿ ಶಂತನು ಹಸ್ತಿನಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದ. ಗಂಗೆ ಆತನ ಹೆಂಡತಿ. ಗಂಗಾಪುತ್ರನೇ ದೇವವ್ರತ, ತಂದೆ ಶಂತುನುವಿನಂತೆಯೇ ದೇವವ್ರತನೂ ಸತ್ಯನಿಷ್ಠ, ಪಿತೃವಾಕ್ಯ ಪರಿಪಾಲಕ. ಒಮ್ಮೆ ಶಂತನು ಮಹಾರಾಜ ಯಮುನಾ ನದಿಯ ದಂಡೆಯಲ್ಲಿ ಸಂಚರಿಸುತ್ತಿದ್ದಾಗ ದಾಶರಾಜನ ಮಗಳು ಸತ್ಯವತಿಯನ್ನು ಕಂಡ. ಸತ್ಯವತಿಗೆ ಯೋಜನಗಂಧಿ ಎಂತಲೂ ಕರೆಯುತ್ತಾರೆ. ಅವಳನ್ನು ಮಹಾರಾಜ ಮೋಹಿಸಿದ, ಮದುವೆಯಾಗಲು ಬಯಸಿದ. ತಂದೆ ಒಪ್ಪಿದರೆ ನನ್ನದೇನು ಅಭ್ಯಂತರವಿಲ್ಲ ಎಂದಾಳಾಕೆ. ಶಂತನು ದಾಶರಾಜನ ಬಳಿ ಬಂದ. ಮನದ ಇಂಗಿತವನ್ನು ವ್ಯಕ್ತಪಡಿಸಿದ. ಆದರೆ ದಾಶರಾಜ ಒಂದು ಷರತ್ತನ್ನು ಮುಂದಿಟ್ಟ. ತನ್ನ ಮಗಳಿಂದ ಹುಟ್ಟುವ ಮಗನಿಗೇ ರಾಜ್ಯ ಪಟ್ಟಾಭಿಷೇಕವಾಗಬೇಕು ಎನ್ನುವುದು ಅವನ ಬಯಕೆಯಾಗಿತ್ತು. ದಾಶರಾಜನ ಮಾತಿಗೆ ಸಮ್ಮತಿ ಸೂಚಿಸದೆ ಶಂತನು ಹಸ್ತಿನಾಪುರಕ್ಕೆ ಹಿಂದಿರುಗಿದ. ತಂದೆಯ ಮನೋವ್ಯಾಕುಲತೆಯನ್ನು ಸಾರಥಿಯ ಮೂಲಕ ಅರ್ಥ ಮಾಡಿಕೊಂಡ ದೇವವ್ರತ ದಾಶರಾಜನ ಮನೆಗೆ ತೆರಳುತ್ತಾನೆ. ಅವನೆದುರು ಪ್ರತಿಜ್ಞೆ ಮಾಡುತ್ತಾನೆ. ತನ್ನ ಸಿಂಹಾಸನವನ್ನು ತಂದೆಗೆ ಬಿಟ್ಟುಕೊಟ್ಟಿದ್ದೇನೆ ಎನ್ನುವುದೇ ಮೊದಲ ಪ್ರತಿಜ್ಞೆ, ಆದರೂ ದಾಶರಾಜ ಸುಮ್ಮನಾಗಲಿಲ್ಲ. ನೀನೇನೋ ನುಡಿದಂತೆ ನಡೆದುಕೊಳ್ಳುವವನು. ಆದರೆ ಮುಂದೆ ನಿನಗೊಬ್ಬ ಮಗನಾದರೆ? ಎಂದು ಅಪಸ್ವರವನ್ನು ಎತ್ತುತ್ತಾನೆ. ಆಗ ದೇವವ್ರತ ಮದುವೆ ಆಗುವುದೇ ಇಲ್ಲವೆಂದು ಪ್ರತಿಜ್ಞೆ ಮಾಡುತ್ತಾನೆ. ಹೀಗೆ ಸತ್ಯವತಿಯೊಂದಿಗೆ ಶಂತನುವಿನ ಮದುವೆ ನಡೆಯುತ್ತದೆ. ಮಗನ ಪ್ರತಿಜ್ಞೆಯಿಂದ ಸಂತುಷ್ಟನಾದ ಶಂತನು ಮಗನಿಗೆ ಭೀಷ್ಮ ಎಂದೇ ಸಂಬೋಧಿಸುತ್ತಾನೆ. ನೀನು ಬಯಸಿದಾಗ ಮಾತ್ರ ಸಾವು ಬರಲಿ ನೀನು ಇಚ್ಛಾ ಮರಣಿಯಾಗು ಎಂದು ವರವನ್ನು ಕರುಣಿಸುತ್ತಾನೆ.

ದೈವ - ಮಾನವಾಂಶಗಳೆರಡನ್ನೂ ಬೆರೆಸಿಕೊಂಡ ಒಬ್ಬ ಆದರ್ಶವಾದಿ.

ಸತ್ಯವತಿಗೆ ಇಬ್ಬರು ಮಕ್ಕಳು. ಅವರೇ ಚಿತ್ರಾಂಗದ ಮತ್ತು ವಿಚಿತ್ರವೀರ್ಯ. ವಿಚಿತ್ರವೀರ್ಯನಿಗೆ ಹೆಣ್ಣು ಹುಡುಕಲು ಭೀಷ್ಮ ಕಾಶಿರಾಜನ ಅರಮನೆಗೆ ಬರುತ್ತಾನೆ. ಕಾಶಿರಾಜನಿಗೋ ಮೂವರು ಪುತ್ರಿಯರು. ಅವರಲ್ಲೊಬ್ಬಳು ಅಂಬೆ. ಅಂಬೆಗೆ



ಸಾಲ್ವರಾಜನ ಮೇಲೆ ವ್ಯಾಮೋಹ. ಆದರೆ ಭೀಷ್ಮನೊಂದಿಗೆ ನಡೆದ ಯುದ್ಧದಲ್ಲಿ ಸೋತ ಸಾಲ್ವರಾಜ ಅಂಬೆಯನ್ನು ತಿರಸ್ಕರಿಸುತ್ತಾನೆ. ಅಲ್ಲಿಯೂ ಸಲ್ಲದೆ, ಇಲ್ಲಿಯೂ ಸಲ್ಲದ ಅಂಬೆ ಅಪಮಾನಿತಳಾಗಿ ಅಗ್ನಿಯನ್ನು ಪ್ರವೇಶಿಸುತ್ತಾಳೆ ಮುಂದೆ ಭೀಷ್ಮರ ವಧೆಗಾಗಿ ಶಿಖಂಡಿಯಾಗಿ ಜನಿಸುತ್ತಾಳೆ. ಇತ್ತ ಅಂಬಿಕೆ, ಅಂಬಾಲಿಕೆಯರಿಗೆ ಮಕ್ಕಳಾಗುತ್ತಾರೆ. ಅವರೇ ಕ್ರಮವಾಗಿ ಧೃತರಾಷ್ಟ್ರ ಮತ್ತು ಪಾಂಡು. ಧೃತರಾಷ್ಟ್ರನು ಹುಟ್ಟು ಕುರುಡನಾದುದರಿಂದ ಪಾಂಡುವಿಗೆ ಭೀಷ್ಮರು ಪಟ್ಟ ಕಟ್ಟುತ್ತಾರೆ. ಪಾಂಡುವಿನ ನಂತರ ಧೃತರಾಷ್ಟ್ರನೇ ಹಸ್ತಿನಾಪುರಕ್ಕೆ ರಾಜನಾಗುತ್ತಾನೆ. ಆದರೆ ಕೌರವರು ಮತ್ತು ಪಾಂಡವರ ನಡುವೆ ದಾಯಾದಿ ಕಲಹ. ಕೌರವರ ಸ್ವಾರ್ಥದ ಕಾರಣ ಕುರುಕ್ಷೇತ್ರದ ಯುದ್ಧವಾಗುತ್ತದೆ. ಭೀಷ್ಮರು ಸೈನಾಧಿಪತಿಯಾಗಿ ಹನ್ನೊಂದು ಅಕ್ಷೌಹಿಣಿ ಸೇನೆಯನ್ನು ಮುನ್ನಡೆಸುತ್ತಾರೆ. ಹೀಗೆ ಒಂಬತ್ತು ದಿವಸಗಳು ಕಳೆದು ಹೋಗುತ್ತವೆ. ಭೀಷ್ಮರ ಪರಾಕ್ರಮದಿಂದ ನಡುಗಿದ ಪಾಂಡವರು ಶ್ರೀಕೃಷ್ಣನ ಸಲಹೆ ಕೇಳುತ್ತಾರೆ. ಶ್ರೀ ಕೃಷ್ಣನ ಸಲಹೆಯಂತೆ ಮರುದಿನ ಅರ್ಜುನ ಶಿಖಂಡಿಯನ್ನು ಮುಂದಿಟ್ಟುಕೊಂಡು ಯುದ್ಧಭೂಮಿಗೆ ಬರುತ್ತಾನೆ. ಭೀಷ್ಮರು ಶಸ್ತ್ರತ್ಯಾಗ ಮಾಡುತ್ತಾರೆ. ಅರ್ಜುನನ ಬಾಣಗಳು ಅವರನ್ನು ನಿತ್ರಾಣರನ್ನಾಗಿ ಮಾಡಿರುತ್ತವೆ. ಅರ್ಜುನ ನಿರ್ಮಿಸಿದ ಶರಶಯ್ಯೆಯ ಮೇಲೆ ಮಲಗುತ್ತಾರೆ. ಅವರು ಉತ್ತರಾಯಣ ಪುಣ್ಯಕಾಲಕ್ಕೆ ಎದುರು ನೋಡುತ್ತಿರುತ್ತಾರೆ. ಇತ್ತ ಭೀಷ್ಮರ ಮಾತನ್ನು ಧಿಕ್ಕರಿಸಿದ ದುರ್ಯೋಧನ ಹತನಾಗುತ್ತಾನೆ. ಕುರುವಂಶ ನಿರ್ನಾಮವಾಗುತ್ತದೆ. ಧರ್ಮರಾಜನಿಗೆ ಪಟ್ಟಾಭಿಷೇಕವಾಗುತ್ತದೆ. ಧರ್ಮರಾಜ ಶ್ರೀಕೃಷ್ಣನ ಸಹಿತ ಭೀಷ್ಮರ ದರ್ಶನಕ್ಕೆ ಬರುತ್ತಾನೆ. ಭೀಷ್ಮರು ಧರ್ಮರಾಜನನ್ನು ಹರಸುತ್ತಾರೆ. ಧರ್ಮಪಾಲನೆ ಮಾಡು ಎಂಬ ಸಂದೇಶ ನೀಡುತ್ತಾರೆ. ಶ್ರೀ ಕೃಷ್ಣನನ್ನು ಕಣ್ತುಂಬ ನೋಡುತ್ತಾರೆ. ನೀನು ಅಪ್ಪಣೆ ಕೊಟ್ಟರೆ ನಾನಿನ್ನು ಹೊರಡುವೆ ಎನ್ನುತ್ತಾರೆ. ಭೀಷ್ಮರು ನಿರೀಕ್ಷಿಸುತ್ತಿದ್ದ ಸಮಯ ಬರುತ್ತದೆ. ಭೀಷ್ಮರ ಪ್ರಾಣ ಶ್ರೀಮನ್ನಾರಾಯಣನ ಪಾದಗಳಲ್ಲಿ ಲೀನವಾಗುತ್ತದೆ.

ಕುರುಕುಲಪಿತಾಮಹರೆಂದು ಖ್ಯಾತರಾದ ಭೀಷ್ಮಾಚಾರ್ಯರು ಶೌರ್ಯ, ಪರಾಕ್ರಮಗಳಿಗೆ ಖ್ಯಾತರಾದಂತೆಯೇ ಭಗವದ್ಭಕ್ತಿಗೂ ಖ್ಯಾತರಾಗಿದ್ದರೆಂಬುದು ಶ್ರೀ ಮಹಾಭಾರತದಿಂದ ವಿದಿತವಾಗುತ್ತದೆ. ಮಹಾಭಾರತ ಯುದ್ಧದಲ್ಲಿ ಹತ್ತು ದಿನಗಳ ಕಾಲ ಸೇನಾಧಿಪತಿಯಾಗಿದ್ದು ಕೊಂಡು ಸೈನ್ಯವನ್ನು ಯಥಾಯೋಗ್ಯವಾಗಿ ನಿಯೋಜಿಸುತ್ತ ಸಮರ್ಥವಾಗಿ ಹೋರಾಡಿದ ಮಹಾವೀರ.

ಪರಿಸ್ಥಿತಿಯ ಒತ್ತಡದಿಂದ ಮದುವೆಯಾಗದೆ, ರಾಜ್ಯವನ್ನು ಆಳುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ ಭೀಷ್ಮರಿಗೆ ಸಂಸಾರ ತಾಪತ್ರಯ ಎಂಬುದು ಬಿಡಲೇ ಇಲ್ಲ. ಶಂತನು-ಗಂಗೆಯರ ಮಗ ಭೀಷ್ಮ ದೈವ-ಮಾನವಾಂಶಗಳೆರಡನ್ನೂ ಬೆರೆಸಿಕೊಂಡ ಒಬ್ಬ ಆದರ್ಶವಾದಿ. ಅಪ್ಪನಿಗಾಗಿಯೇ ಬ್ರಹ್ಮಚರ್ಯ ವ್ರತವನ್ನು ಕೈಗೊಂಡು ದೇವವ್ರತನಾಗಿದ್ದವನು ಭೀಷ್ಮನಾಗುತ್ತಾನೆ.

### ಹುಟ್ಟಿದ್ದು ಕ್ಷತ್ರಿಯಕುಲದಲ್ಲಿ;

ವಿದ್ಯೆ ಕಲಿತದ್ದು ಪರಶುರಾಮರೂಪಿ ಭಗವಂತನಲ್ಲಿ; ಕೊನೆಗಾಲ ಕಳೆದದ್ದು ಶಾಸ್ತ್ರೋಪದೇಶಕನಾಗಿ ಆಚಾರ್ಯನಾಗಿ; ಆದ್ದರಿಂದಲೇ ಭೀಷ್ಮಾಚಾರ್ಯ ಎಂದು ಪ್ರಸಿದ್ಧಿ.

ಭೀಷ್ಮಾಚಾರ್ಯರು ಇಹಲೋಕ ತ್ಯಜಿಸಿದ ಪರಮಪವಿತ್ರದಿನ ಮಾಘ ಶುದ್ಧ ಅಷ್ಟಮಿ, ಧಾರ್ಮಿಕ ನೈತಿಕ ವಿಶ್ವಕೋಶವನ್ನೇ ನೀಡಿದ ಅಪೂರ್ವ ವ್ಯಕ್ತಿತ್ವದ ಅವರ ಋಣ ಎಂದಿಗೂ ತೀರಿಸಲಾಗದಷ್ಟು ಅಗಾಧವಾದುದು. ಈ ದಿನ ಸರ್ವರೂ ಭೀಷ್ಮನಿಗೆ ತರ್ಪಣವನ್ನು ಕೊಡಬೇಕು.

ಗಂಗಾಪುತ್ರಾಯ ಭೀಷ್ಮಾಯ ಆಜನ್ಮಬ್ರಹ್ಮಚಾರಿಣೇ।
ಅಪುತ್ರಾಯ ಜಲಂ ದದ್ಯಾಂ ನಮೋ ಭೀಷ್ಮಾಯ ವರ್ಮಣೇ।
ಭೀಷ್ಮಃ ಶಾಂತನವೋ ವೀರಃ ಸತ್ಯವಾದೀ ಜಿತೇಂದ್ರಿಯಃ
ಅಭೀರದ್ಭಿರವಾಪ್ನೋತು ಪುತ್ರಪೌತ್ರೋಚಿತಾಂ ಕ್ರಿಯಾಮ್।

ವೈಯಾಘ್ರಪಾದಗೋತ್ರಾಯ ಸಾಂಕೃತ್ಯಪ್ರವರಾಯ ಚ।
ಅಪುತ್ರಾಯ ದದಾಮ್ಯೇತಜ್ಜಲಂ ಭೀಷ್ಮಾಯ ವರ್ಮಿಣೇ।
ವಸೂನಾಮವತಾರಾಯ ಶಂತನೋರಾತ್ಮಜಾಯ ಚ।
ಅರ್ಘ್ಯಂ ದದಾಮಿ ಭೀಷ್ಮಾಯ ಅಬಾಲಬ್ರಹ್ಮಚಾರಿಣೇ।



# ಸಂಸ್ಕಾರ ಸಮನ್ವಿತ ಜೀವನವೃತಿ

**ರಾ.ನ.ನ.ಮೂರ್ತಿ**

(ಕಳೆದ ಸಂಚಿಕೆಯಿಂದ ಮುಂದುವರಿಯುವುದು)

ಸಹಯಜ್ಞಾ: ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ।
ಅನೇನ ಪ್ರಸವಿಷ್ಯ ಧ್ವಮೇಷ ವೋಽಸ್ತ್ವಿಷ್ಟಕಾ ಮಧುಕ್॥

ಪ್ರಜಾಪತಿ ಬ್ರಹ್ಮ ಕಲ್ಪದ ಪ್ರಾರಂಭದಲ್ಲಿ ಯಜ್ಞಸಹಿತ ಪ್ರಜೆಗಳನ್ನು ಸೃಷ್ಟಿಸಿ; 'ನೀವೆಲ್ಲಾ ಈ ಯಜ್ಞದ ಮೂಲಕ ವೃದ್ಧಿಯನ್ನು ಪಡೆಯಿರಿ. ಈ ಯಜ್ಞ ನಿಮಗೆಲ್ಲರಿಗೂ ಇಷ್ಟಾರ್ಥವನ್ನು ಕರುಣಿಸುವಂತದು' ಎಂದನು. ಗೀತೆಯಲ್ಲಿಯೂ ಸಹ ಭಗವಾನ್ ಶ್ರೀಕೃಷ್ಣ -'ಯಜ್ಞದಲ್ಲಿ ಉಳಿದ ಅನ್ನವನ್ನು (ಆಹಾರ) ತಿನ್ನುವ ವ್ಯಕ್ತಿ ಎಲ್ಲ ಪಾಪಗಳಿಂದ ಮುಕ್ತನಾಗುತ್ತಾನೆ. ಯಾವ ಪಾಪಿಗಳಾದರೂ ತಮ್ಮ ಶರೀರಪೋಷಣೆಗೆ ಆಹಾರವನ್ನು ಸಿದ್ಧಪಡಿಸುತ್ತಾರೋ ಅವರು ಪಾಪವನ್ನೇ ತಿಂದಂತೆ' ಎನ್ನುತ್ತಾನೆ.

ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ।
ಭುಂಜತೇ ತೇ ತ್ವಘಂ ಪಾಪಾಯೇ ಪಚಂತ್ಯಾತ್ಮಕಾರಣಾತ್॥

ಹಾಗಾಗಿ ಭಗವಂತ ಹೇಳಿದ - "ತಸ್ಮಾತ್ ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಮ್', ಸರ್ವವ್ಯಾಪಿಯಾದ ಪರಮ ಅಕ್ಷರ ಪರಮಾತ್ಮಾನು ಸರ್ವದಾ ಯಜ್ಞದಲ್ಲಿ ಪ್ರತಿಷ್ಠಿತನು. ಶರೀರ ಮತ್ತು ಅಂತಃಕರಣ ಶುದ್ಧಿ ಹಾಗೂ ಜೀವನದಲ್ಲಿ ದಿವ್ಯತೆಯನ್ನು ಸಂಪಾದಿಸಲು ಸಹ ಯಜ್ಞದ ಅವಶ್ಯಕತೆ ಇದೆ: ಮಹಾಯಜ್ಞೈಶ್ಚ ಯಜ್ಞೈಶ್ಚ ಬ್ರಾಹ್ಮೀಯಂ ಕ್ರಿಯತೇ ತನಃ''. ಈ ಯಜ್ಞವನ್ನು ಕಾರಣವಿಟ್ಟು ಕೊಂಡೂ ಮಾಡಬಹುದು ಹಾಗೆಯೇ ಕಾರಣವಿಲ್ಲದೆಯೂ ಮಾಡಬಹುದು. ಅನೇಕ ರಾಜರ ಹಾಗೂ ಇನ್ನಿತರ ಗುಣ ವರ್ಣನೆಯಲ್ಲಿ (ಚರಿತ್ರೆ) ವಿವಿಧ ಯಜ್ಞಾನುಷ್ಠಾನುಗಳ ಸುಂದರ ವ್ಯಾಖ್ಯಾನ. ಚರ್ಚೆಗಳು ಪುರಾಣಗಳಲ್ಲಿ ಸಿಗುತ್ತವೆ. ಈ ಯಜ್ಞಗಳಿಂದ ಪರಮಪುರುಷ ನಾರಾಯಣನ ಆರಾಧನೆಯೇ ಆಗುತ್ತದೆ. ಶ್ರೀ ಮದ್ಭಾಗವತದಲ್ಲಿ ಸ್ಪಷ್ಟವಾಗಿ ವರ್ಣಿತವಾಗಿದೆ.

**ಈ ಯಜ್ಞವನ್ನು ಕಾರಣವಿಟ್ಟು ಕೊಂಡೂ ಮಾಡಬಹುದು ಹಾಗೆಯೇ ಕಾರಣವಿಲ್ಲದೆಯೂ ಮಾಡಬಹುದು. ಅನೇಕ ರಾಜರ ಹಾಗೂ ಇನ್ನಿತರ ಗುಣ ವರ್ಣನೆಯಲ್ಲಿ (ಚರಿತ್ರೆ) ವಿವಿಧ ಯಜ್ಞಾನುಷ್ಠಾನುಗಳ ಸುಂದರ ವ್ಯಾಖ್ಯಾನ. ಚರ್ಚೆಗಳು ಪುರಾಣಗಳಲ್ಲಿ ಸಿಗುತ್ತವೆ.**

- ಯಸ್ಯ ರಾಷ್ಟ್ರೇ ಪುರ್ರೈ ಚೈವ ಭಗವಾನ್‌ಯಜ್ಞ ಪುರುಷ:।
ಇಜ್ಯತೇ ಸ್ವೇನ ಧರ್ಮೇಣ ಜನೈರ್ವರ್ಣಾಶ್ರಮಾನ್ವಿತೈಃ,
ತಸ್ಯ ರಾಜ್ಞೋ ಮಹಾಭಾಗ ಭಗವಾನ್ ಭೂತ ಭಾವನಃ
ಪರಿತುಷ್ಯತಿ ವಿಶ್ವಾತ್ಮಾ ತಿಷ್ಠತೋ ನಿಜಶಾಸನೇ ॥

ಯಾರ ರಾಜ್ಯ ಅಥವಾ ನಗರದಲ್ಲಿ ವರ್ಣಾಶ್ರಮ ಧರ್ಮಗಳನ್ನು ಪಾಲಿಸುವ ಮನುಷ್ಯರು ಸ್ವಧರ್ಮಪಾಲನೆಯ ಮೂಲಕ ಭಗವಾನ್ ಯಜ್ಞ ಪುರುಷನ ಆರಾಧನೆ ಮಾಡುತ್ತಾರೋ .ಹೇ ಮಹಾಭಾಗ। ಭಗವಂತನು ತನ್ನ ವೇದ ಶಾಸ್ತ್ರರೂಪದ ಆಜ್ಞೆಯನ್ನು ಪಾಲಿಸುವುವಂತಹ ರಾಜರ ಬಗ್ಗೆ ಸಂತುಷ್ಟನಾಗಿರುತ್ತಾನೆ. ಇದಕ್ಕೆ ಕಾರಣ, ಅವರೇ ಇಡೀ ವಿಶ್ವದ ಆತ್ಮ ಹಾಗೂ ಇಡೀ ಪ್ರಾಣಿ ಸಮೂಹಕ್ಕೆ ರಕ್ಷಕರಾಗಿರುತ್ತಾರೆ. ಪದ್ಮ ಪುರಾಣದ ಸೃಷ್ಟಿ ಖಂಡದಲ್ಲಿ ಸ್ಪಷ್ಟರಾಗಿರುವುದು.'ಯಜ್ಞದಿಂದ ದೇವತೆಗಳ ಆಪ್ಯಾಯನ ಇಲ್ಲವೇ ಪೋಷಣೆಯಾಗುತ್ತದೆ.ಯಜ್ಞದ ಮೂಲಕ ಸೃಷ್ಟಿಯಾಗುವುದರಿಂದ

ಮನುಷ್ಯರ ಪಾಲನೆಯಾಗುತ್ತದೆ. ಈ ರೀತಿ ಜಗತ್ತನ್ನು ರಕ್ಷಿಸುವು ದರಿಂದಲೇ ಯಜ್ಞ ಕಲ್ಯಾಣಕಾರಕ ಎಂದು ಹೇಳಲ್ಪಟ್ಟಿದೆ. :-

ಯಜ್ಞೇನಾಪ್ಯಾಯಿತಾ ದೇವಾ ವೃಷ್ಟಯುತ್ಸರ್ಗೇಣ ಮಾನವಾಃ
ಆಪ್ಯಾಯನಂ ವೈ ಕುರ್ವಂತಿ ಯಜ್ಞಾಃ ಕಲ್ಯಾಣ ಹೇತವ ಃ

ಎಲ್ಲ ಪುರಾಣಗಳು ಯಜ್ಞಗಳನ್ನು ಯಥಾ ಸಾಧ್ಯ ವಾದಷ್ಟೂ ಸಂಪಾದಿಸುವ ಸಲುವಾಗಿ (ಗಳಿಸುವಂತಹದು) ಹೆಚ್ಚು ಸಾಮರ್ಥ್ಯನೀಡುತ್ತವೆ. ಯಜ್ಞಗಳ ಫಲ ಕೇವಲ ಇಹ ಲೌಕಿಕವಷ್ಟೇ ಅಲ್ಲ, ಅವು ಪಾರಲೌಕಿಕವೂ ಸಹ ಹೌದು . ಇವುಗಳ ಅನುಷ್ಠಾನದಿಂದ ದೇವತೆಗಳು ಋಷಿಗಳು, ದೈತ್ಯರು, ನಾಗರು, ಕಿನ್ನರರು, ಮಾನವರು ಹಾಗೂ ಎಲ್ಲರಿಗೂ ತಮ್ಮ ಅಭೀಷ್ಟ ಕಾಮನೆಗಳು ಪೂರೈಸಿರುವುದಲ್ಲದೆ ಪ್ರಸ್ತುತ ಅವುಗಳ ಸರ್ವಾಂಗೀಣ ಅಭ್ಯುದಯವೂ ಸಹ ಆಗಿದೆ. ಹಾಗಾಗಿ ಇವುಗಳನ್ನು ಗಳಿಸುವುದು ಅವಶ್ಯಕವೇ ಸರಿ.

ಶಾಸ್ತ್ರಗಳಲ್ಲಿ ಮನುಷ್ಯರ ಒಳಿತಿಗಾಗಿ ಯಜ್ಞ, ತಪಸ್ಸು, ಪುಣ್ಯ ಕ್ಷೇತ್ರದರ್ಶನ, ಪುಣ್ಯ ತೀರ್ಥಸೇವನೆ, ದಾನಧರ್ಮ ಇತ್ಯಾದಿ ಅನೇಕ ಸಾಧನೆಗಳನ್ನು ತಿಳಿಸಿದೆ. ಅವುಗಳಲ್ಲಿ ವ್ರತೋಪಾಸನೆಯೂ ಸಹ ಒಂದು. ಇದರ ಮಹಿಮೆ ಅಪಾರ, ಅಂತಃಕರಣ ಶುದ್ಧಿಗಾಗಿ ವ್ರತೋಪಾಸನೆ ಅವಶ್ಯಕ. ಇದರಿಂದ ಬುದ್ಧಿ,ವೈಚಾರಿಕತೆ ಮತ್ತು ಜ್ಞಾನತಂತು ಬೆಳವಣಿಗೆಯಾಗುತ್ತದೆ. ಶರೀರದ ಅಂತಸ್ಥಳದಲ್ಲಿ ಭಗವಂತನ ಬಗ್ಗೆ ಭಕ್ತಿ, ಶ್ರದ್ಧೆ ಮತ್ತು ತಲ್ಲೀನತೆಯ ಸಂಚಾರವಾಗುತ್ತದೆ. ಪಾರಮಾರ್ಥಿಕ ಲಾಭದ ಜತೆಜತೆಗೇ ವ್ರತೋಪವಾಸದಿಂದ ಲೌಕಿಕ ಲಾಭವೇ ಉಂಟಾ ಗುತ್ತದೆ. ವ್ಯಾಪಾರ, ವ್ಯವಸಾಯ (ಕೃಷಿ), ಕಲಾಕೌಶಲ್ಯ, ಶಾಸ್ತ್ರಾನು ಸಂಧಾನ ಮತ್ತು ಉತ್ಸಾಹ ಪೂರ್ವಕ ವ್ಯವಹಾರ ಕೌಶಲ್ಯದ ಸಫಲ ಸಂಪಾದನೆಗಾಗಿ ಮನಸ್ಸು ನಿಗ್ರಹಗೊಂಡಿ ರುತ್ತದೆ. ಇದರಿಂದ ಸುಖಮಯವಾದ ದೀರ್ಘಜೀವನದ ಆರೋಗ್ಯಸಾಧನೆಯು ಸ್ವತಃ ಸಂಗ್ರಹವಾಗುತ್ತದೆ.

ರೋಗವು ಪಾಪ, ಇಂತಹ (ರೋಗ) ಪಾಪ ವ್ರತ ಗಳಿಂದ ದೂರವಾಗಿದ್ದರೂ ಕಾಯಿಕ, ವಾಚಕ, ಮಾನಸಿಕ ಮತ್ತು ಸಾಂಸಾರಿಕ ಪಾಪ, ಉಪಾಯ, ಮಹಾಪಾಪಾದಿಗಳು ಸಹ ವ್ರತೋಪಾಸದಿಂದ ದೂರವಿರುತ್ತವೆ. ಅವುಗಳನ್ನು ಬುಡಸಹಿತ ನಾಶಮಾಡುವ ಪ್ರತ್ಯಕ್ಷ ಪ್ರಮಾಣವೆಂದರೆ - ವ್ರತಾರಂಭಕ್ಕೆ ಮುನ್ನ ಪಾಪದಿಂದ ಕೂಡಿದ ಜೀವಿಗಳ ಮುಖ ಹತಾಶೆಯಿಂದ ಕೂಡಿರುತ್ತದೆ. ವ್ರತಮುಗಿಯುತ್ತಲೇ ಸೂರ್ಯೋದಯದ ಕಮಲದಂತೆ (ತಾವರೆ) ಅರಳಿರುತ್ತದೆ.

ಪುಣ್ಯಪ್ರಾಪ್ತಿಗೆ ಯಾವುದೇ ಪುಣ್ಯ ಘಳಿಗೆಯಲ್ಲಿ ಉಪವಾಸ ಮಾಡುವ ಅಥವಾ ಉಪವಾಸ ಕರ್ಮಾನುಷ್ಠಾನ ಮೂಲಕ ಪುಣ್ಯ ಸಂಪಾದಿಸುವ, ಸಂಗ್ರಹಿಸುವ ಸಂಕಲ್ಪವನ್ನು ವ್ರತವೆನ್ನುತ್ತಾರೆ. ಯಮ ನಿಯಮ ಮತ್ತು ಶಮದಮ ಇತ್ಯಾದಿ ಗಳ ಪಾಲನೆ, ಭೋಜನ ಮುಂತಾದವುಗಳ ಪರಿತ್ಯಾಗ ಅಥವಾ ನೀರು ಹಣ್ಣುಗಳಿಂದ ಇರುವುದು ಹಾಗೂ ಸಮಸ್ತ ಭೋಗಗಳನ್ನೆ ತ್ಯಜಿಸುವುದು. ಇವೆಲ್ಲವೂ ವ್ರತದೊಳಗೆ ಸೇರಿಕೊಂಡಿವೆ. ಶಾಸ್ತ್ರೋಕ್ತ ನಿಯಮವೇ ವ್ರತವೆನಿಸಿಕೊಳ್ಳುತ್ತದೆ. ವ್ರತಿಯಾದ ವನು ಶಾರೀರಿಕ ಸಂತಾಪವನ್ನು ಸಹಿಸಿ ಕೊಳ್ಳಬೇಕಾಗುತ್ತದೆ. ಹಾಗಾಗಿ ಇದನ್ನು ತಪಸ್ಸೆಂದೂ ಕರೆಯುತ್ತಾರೆ. ಇಂದ್ರೀಯ ನಿಗ್ರಹವನ್ನು ದಮ ಎಂದೂ ಮತ್ತು ಮನೋನಿಗ್ರಹವನ್ನು ಶಮವೆಂದೂ ಹೇಳುತ್ತಾರೆ. ವ್ರತದಲ್ಲಿ ಇಂದ್ರೀಯಗಳ ನಿಯಮನ (ಸಂಯಮ) ಮಾಡಬೇಕಾಗುತ್ತದೆ. ಆದ್ದರಿಂದ ಇದನ್ನು ನಿಯಮ ಎಂತಲೂ ಕರೆಯುತ್ತಾರೆ. ಕ್ಷಮೆ ಸತ್ಯ, ದಯೆ, ದಾನ, ಶೌಚ, ಇಂದ್ರೀಯ ಸಂಯಮ, ದೇವರಪೂಜೆ, ಹವನ, ಸಂತೋಷ ಮತ್ತು ಕಳ್ಳತನದ ಕೊರತೆ (ಮಾಡದಿರುವುದು) ಈ ಹತ್ತು ನಿಯಮಗಳ ಪಾಲನೆ ಸಾಮಾನ್ಯವಾಗಿ ಎಲ್ಲ ವ್ರತಗಳಲ್ಲಿಯೂ ಪ್ರಧಾನ ಅವಶ್ಯಕವೆಂದು ಹೇಳಲ್ಪಟ್ಟಿದೆ.

-(ಸಶೇಷ)

## ಪಾಠಕರಿಗೆ ವಿಜ್ಞಪ್ತಿ

ಸಪ್ತಗಿರಿ ಮಾಸಪತ್ರಿಕೆ ನಿಮಗೆ ಸಕಾಲದಲ್ಲಿ ತಲುಪದಿದ್ದರೆ ಪ್ರಧಾನ ಸಂಪಾದಕ ಕಾರ್ಯಾಲಯಕ್ಕೆ ಕೆಲಸದ ದಿನಗಳಲ್ಲಿ ಕರೆ ಮಾಡಬೇಕು. ನಂತರವೇ ನಿಮಗೆ ಮತ್ತೊಂದು ಪತ್ರಿಕೆಯನ್ನು ಕಳಿಸುತ್ತಾರೆ. ಕೆಳಗಿನ ವಿವರಗಳಲ್ಲಿರುವ ದೂರವಾಣಿ ಸಂಖ್ಯೆಗೆ ಕರೆ ಮಾಡಿ. ನಿಮ್ಮ ಚಂದಾ ನಂಬರ್, ಮತ್ತು ನಿಮ್ಮ ವಿಳಾಸ, ನಿಮ್ಮ ಊರಿನ ಪಿನ್‌ಕೋಡ್ ನಂಬರ್, ನಿಮ್ಮ ದೂರವಾಣಿ ನಂಬರ್ ಅನ್ನು ವಿವರವಾಗಿ ತಿಳಿಸಬೇಕು.....

**ಪ್ರಧಾನ ಸಂಪಾದಕರ ಕಾರ್ಯಾಲಯದ**
**ದೂರವಾಣಿ ಸಂಖ್ಯೆ: 0877-2264543**

# ಕಠೋಪನಿಷತ್

- ಶ್ರೀಮತಿ. ಗೀತವೀರರಾಘವನ್

ಕಠೋಪನಿಷತ್ ಅತ್ಯಂತ ಆಕರ್ಷಣೀಯವಾದ ಒಂದು ಉಪನಿಷತ್ ಭಾಗವಾಗಿದೆ. ಕಠೋಪನಿಷತ್ ಕಥಾ ಸಂಹಿತೆಯಲ್ಲಿ ಹೇಳಲ್ಪಡುವ ಕಥಾ ವಿಭಾಗದ ಮುಂದುವರಿದ ಭಾಗವಾಗಿದೆ. ಈ ಉಪನಿಷತ್ತಿನಲ್ಲಿ ಎರಡು ಅಧ್ಯಾಯಗಳಿವೆ. ಪ್ರತಿ ಅಧ್ಯಾಯದಲ್ಲಿ ಮೂರುವಲ್ಲಿಗಳಿವೆ. ಅಂದರೆ ಒಟ್ಟು ಉಪನಿಷತ್ತಿನಲ್ಲಿ ಆರು ವಲ್ಲಿಗಳಿವೆ.

ಪ್ರಥಮ ವಲ್ಲಿಯಲ್ಲಿ ನಚಿಕೇತಸ್ಸಿನ ಕಥೆಯನ್ನು ಹೇಳಲ್ಪಟ್ಟಿದೆ. ವಜ್ರಶ್ರವಸ್ ಎನ್ನುವ ನಚಿಕೇತನ ತಂದೆ ವಿಶ್ವಾಜಿತ್ ಎನ್ನುವ ಯಾಗವನ್ನು ಮಾಡುತ್ತಾನೆ. ವಿಶ್ವಾಜಿತ್ ಯಾಗದಲ್ಲಿ ಯಾಗ ಮಾಡುವವರು ತಮ್ಮಲ್ಲಿರುವ ಸಕಲ ಐಶ್ವರ್ಯವನ್ನೂ ದಕ್ಷಿಣೆಯಾಗಿ ಯಾಗ ಮಾಡಿಸುವವರಿಗೆ ಕೊಡಬೇಕೆಂಬ ನಿಯಮವಿದೆ. ವಜ್ರಶ್ರವಸ್ಸಿನ ಯಾಗದಲ್ಲಿ ದಾನವಾಗಿ ಕೊಡಲ್ಪದ್ದ ಹಸುಗಳೆಲ್ಲಾ ಮುದಿಯಾಗಿ ನಿರುಪಯುಕ್ತವಾಗಿದ್ದುವು. ಇದನ್ನು ಕಂಡ ನಚಿಕೇತನು ಖಿನ್ನನಾಗಿ ಯಾಗ ಸಂಪೂರ್ಣವಾಗಲು "ನನ್ನನ್ನು ಯಾಗ ಮಾಡಿಸಿದ ಯಾರಿಗೆ ಕೊಡುತ್ತೀಯೇ?" ಎಂದು ಕೇಳುತ್ತಾನೆ. ಇದನ್ನು ಕೇಳಿದ ತಂದೆ ಅತ್ಯಂತ ಕುಪಿತನಾಗಿ "ನಿನ್ನನ್ನು ಮೃತ್ಯುವಿಗೆ ಕೊಡುತ್ತೇನೆ" ಎನ್ನುತ್ತಾನೆ. ನಚಿಕೇತನು ಯಮನ ಆವಾಸ ಸ್ಥಾನಕ್ಕೆ ಹೋಗುತ್ತಾನೆ. ಅಲ್ಲಿ ಯಮನು ಇರುವುದಿಲ್ಲ. ಯಾವುದೋ ಕೆಲಸದ ಸಲುವಾಗಿ ಬೇರೆಲ್ಲಿಗೋ ಹೋಗಿರುತ್ತಾನೆ. ಅಲ್ಲಿ ಯಮನು ಇರುವುದಿಲ್ಲ. ಯಾವುದೋ ಕೆಲಸದ ಸಲುವಾಗಿ ಬೇರೆಲ್ಲಿಗೋ ಹೋಗಿರುತ್ತಾನೆ. ಯಮನನ್ನು ಕಾಣಲು ನಚಿಕೇತನು ಅಲ್ಲಿ ಮೂರು ದಿನಗಳು ಯಾವುದೇ ಆಹಾರವಿಲ್ಲದೆ ಕಾಯುತ್ತಾನೆ. ಯಮನು ಬಂದೊಡನೆ ತನ್ನ ಆವಾಸ ಸ್ಥಾನದಲ್ಲಿ ಯಾವುದೇ ಆಹಾರವಿಲ್ಲದೆ ಮೂರು ದಿನಗಳು ಕಾದ ನಚಿಕೇತನಿಗೆ ಮೂರು ವರಗಳನ್ನು ನೀಡುತ್ತಾನೆ. ಮೊದಲನೆಯ ವರದಿಂದ ನಚಿಕೇತನು ತನ್ನ ತಂದೆಯು ಎಲ್ಲಾ ವಿಧವಾದ ಆತಂಕಗಳಿಂದ ವಿಮುಕ್ತರಾಗಬೇಕು ಮತ್ತು ತನ್ನನ್ನು ಮೊದಲಿನಂತೆಯೇ ಪ್ರೀತಿಯಿಂದ ಕಾಣಬೇಕೆಂದು ಪ್ರಾರ್ಥಿಸುತ್ತಾನೆ. ಎರಡನೆಯ ವರದಿಂದ ಯಮನು ಅವನಿಗೆ ಯಾವ ಅಗ್ನಿ ವಿದ್ಯೆಯಿಂದ ಸ್ವರ್ಗವನ್ನು (ಮೋಕ್ಷವನ್ನು) ಪಡೆಯಲಾಗುವುದೋ ಆ ಅಗ್ನಿ ವಿದ್ಯೆ ಉಪದೇಶಿಸಬೇಕೆಂದು ಪ್ರಾರ್ಥಿಸುತ್ತಾನೆ ಮತ್ತು ಮೂರನೆಯ ವರದಿಂದ ಯಮನು ಅವನಿಗೆ ಮೋಕ್ಷ ಸ್ವರೂಪದ ಜ್ಞಾನವನ್ನು ಉಪದೇಶಿಸಬೇಕೆಂದು ಪ್ರಾರ್ಥಿಸುತ್ತಾನೆ. ಯಮನು ನಚಿಕೇತನಿಗೆ ಅಷ್ಟೈಶ್ವರ್ಯ, ದೀರ್ಘಾಯಸ್ಸು, ಎಲ್ಲಾ ವಿಧವಾದ ಸುಖ ಸಂತೋಷಗಳು ಮತ್ತು ಐಹಿಕ ಲಾಭಗಳನ್ನು ಇದರ ಬದಲಾಗಿ ಅನುಗ್ರಹಿಸುವುದಾಗಿ ತಿಳಿಸುತ್ತಾನೆ. ಆದರೆ ನಚಿಕೇತನು ಈ ಲೋಕದ ಸುಖಭೋಗಗಳಲ್ಲಿ ಯಾವುದೇ ಆಸಕ್ತಿಯಿಲ್ಲದೆ ವಿರಕ್ತನಾಗಿದ್ದವನು ಯಮನನ್ನು ತನಗೆ ಇದು ಯಾವುದೂ ಬೇಡ. ಅಮೃತತತ್ವವನ್ನು ಪಡೆಯುವ ಆ ಜ್ಞಾನವೇ ಬೇಕೆಂದು ಮತ್ತೆ ಮತ್ತೆ ಪ್ರಾರ್ಥಿಸಿದನು.

ಎರಡನೆಯ ವಲ್ಲಿ ಯಮನು ನಚಿಕೇತನು ಜ್ಞಾನದಾಹದಿಂದ ಬೇರೇ ಏನನ್ನು ಬೇಡದೆ ಅಮೃತತತ್ವವನ್ನು ಪಡೆಯುವ ಜ್ಞಾನದಲ್ಲಿ ಏಕಮನಸ್ಕನಾಗಿ ನಿಂತು ಪ್ರಾರ್ಥಿಸುತ್ತಿದ್ದುದನ್ನು ನೋಡಿ ಅವನಲ್ಲಿ ಅತ್ಯಂತ ಸಂತುಷ್ಟನಾಗಿ ಅವನಿಗೆ ಜ್ಞಾನವನ್ನು ಉಪದೇಶಿಸುತ್ತಾನೆ. ಯಮನು ನಚಿಕೇತನಿಗೆ ಮಾಡಿದ ತತ್ತ್ವೋಪದೇಶ ಈ ಉಪನಿಷತ್ತಿನಲ್ಲಿ ಪ್ರತಿವಾದೀತವಾಗಿದೆ. ಇಲ್ಲಿ ಯಮನು ಉಪದೇಶಿಸಿದ 'ಶ್ರೇಯಸ್ಸು - ಪ್ರೇಯಸ್ಸು' ಎಂಬುದರ ಸ್ವರೂಪ ಈ ಭಾಗದಲ್ಲಿದೆ. ಆತ್ಮ ಸ್ವರೂಪದ ಉಪದೇಶ ಪಡೆಯುವುದು ಅಷ್ಟು ಸುಲಭವಲ್ಲ. ಯಾವನೋ ಒಬ್ಬ ಪುಣ್ಯಜೀವಿ ತಿಳಿಯಲೇ ಬೇಕೆಂಬ ದೃಢ ನಿಶ್ಚಯ ಇರುವವನು ಸದ್ಗುರುವಿನಿಂದ ತಿಳಿಯುತ್ತಾನೆ. ಯಮನು ನಚಿಕೇತನಿಗೆ ಆತ್ಮ ಸ್ವರೂಪವನ್ನು ಪ್ರಣವದ ಮೂಲಕ ಉಪದೇಶಿಸಿದನು. ಜೀವಾತ್ಮ ಸ್ವರೂಪ, ಪರಮಾತ್ಮ ಸ್ವರೂಪ, ಉಪಸನಾ ಸ್ವರೂಪ ಇವುಗಳೆಲ್ಲಾ ಬಹಳ ನಿಖರವಾಗಿ ವರ್ಣಿತವಾಗಿವೆ. ಈ ವಲ್ಲಿಯಲ್ಲಿ ಭಗವಂತನನ್ನು ಪ್ರೀತಿಸುವ ಜ್ಞಾನಿಯು ಅವನನ್ನು ತನ್ನ ಭಕ್ತಿಪೂರ್ವಕ ಉಪಾಸನೆ ಧ್ಯಾನದಿಂದ ಪಡೆಯುತ್ತಾನೆ. ನೈತಿಕ ಮತ್ತು ಧಾರ್ಮಿಕ ಗುಣಗಳ ಅನುಷ್ಠಾನ ಸಾಧಕನಿಗೆ ಅತ್ಯಂತ ಅವಶ್ಯಕ ಎಂದು ತಿಳಿಸಿದೆ.

ಮೂರನೆಯ ವಲ್ಲಿಯಲ್ಲಿ ಜೀವಾತ್ಮ ಪರಮಾತ್ಮರು ಹೃದಯವೆಂಬ ಒಂದೇ ಗುಹೆಯಲ್ಲಿ ಇದ್ದಾರೆ. ಈ ವಲ್ಲಿಯಲ್ಲಿ ಇಂದ್ರಿಯ ನಿಗ್ರಹ, ಮನೋನಿಗ್ರಹ ಸಾಧಕನಿಗೆ ಪರಮಾತ್ಮನನ್ನು ಪಡೆಯಲು ಅತ್ಯಂತ ಆವಶ್ಯಕವೆಂದು ತಿಳಿಸಿದೆ. ಯಾವನು ಪ್ರಪಂಚದ ವಿಷಯಗಳ ಅನಿತ್ಯತೆಯನ್ನು ಮನಗಾಣುವನೋ ಅವನು ಅವುಗಳನ್ನು ತ್ಯಜಿಸಿ, ನಿತ್ಯವಾದ ಪರವಸ್ತುವನ್ನು ಅನ್ವೇಷಿಸುತ್ತಾನೆ. ಯಾರು ಧ್ಯಾನ ಪರರಾಗುತ್ತಾರೆಯೋ ಯಾರು ಇಂದ್ರಿಯಗಳನ್ನು ನಿಗ್ರಹಿಸುವರೋ ಅವರು ಅಮೃತತತ್ವವನ್ನು ಪಡೆಯುತ್ತಾರೆ. ಜೀವಾತ್ಮ-ಪರಮಾತ್ಮರು ಹೃದಯವೆಂಬ ಗುಹೆಯಲ್ಲಿ ಇದ್ದಾರೆ.



ಜೀವಾತ್ಮನು ತನ್ನ ಕರ್ಮ ಫಲವನ್ನು ಆನಂದದಿಂದ ಅನುಭವಿಸುತ್ತಿದ್ದಾನೆ. ಪರಮಾತ್ಮನು ಅವನನ್ನು ಕರ್ಮ ಫಲವನ್ನು ಆನಂದಿಸುವಂತೆ ಮಾಡುತ್ತಿದ್ದಾನೆ. ಪರಮಾತ್ಮನು ಜೀವಾತ್ಮನಿಗೆ ತನ್ನನ್ನು ಸುಲಭವಾಗಿ ಪಡೆಯುವಂತೆ ಮಾಡಲು ಅವನೊಡನೆಯೇ ಇದ್ದಾನೆ. ಈ ಜೀವಾತ್ಮರಿಗೆ ಸಂಸಾರ ಸಾಗರವನ್ನು ದಾಟಲು ಸುಲಭವಾಗುವಂತೆ ಸೇತುವಾಗಿದ್ದಾನೆ.

ಯಾವ ಪರಮಾತ್ಮನು ಸರ್ವ ಭೂತಗಳಿಗೂ ಅಂತರಾತ್ಮನಾಗಿದ್ದಾನೋ, ಎಲ್ಲವನ್ನೂ ನಿಯಮಿಸುತ್ತಾನೋ, ಬಹು ಪ್ರಕಾರವಾಗಿ ಕಾಣುತ್ತಿದ್ದಾನೋ ಅಂತಹ ಪರಮಾತ್ಮನನ್ನು ತನ್ನೊಳಗೆ ಕಾಣುವ ಸಾಧಕನು ಶಾಶ್ವತವಾಗಿ ಸುಖವನ್ನು ಪಡೆಯುತ್ತಾನೆ. ಇತರರಿಗೆ ಅದು ಸಾಧ್ಯವಿಲ್ಲ. ಈ ಉಪನಿಷತ್ತಿನಲ್ಲಿ ಬ್ರಹ್ಮಜ್ಞಾನದ ಮಹತ್ವವನ್ನು ಸ್ಪಷ್ಟವಾಗಿ ನಿರೂಪಿಸಿ ತರ್ಕದಿಂದ ಅದರ ಪ್ರಾಪ್ತಿ ಸಾಧ್ಯವಿಲ್ಲ ವೆಂಬುದನ್ನು ತಿಳಿಸಿದೆ. ಜ್ಞಾನ, ಭಕ್ತಿ, ವೈರಾಗ್ಯ ಇವುಗಳ ಮಹತ್ವವನ್ನು ಇದು ಮನಗಾಣಿಸುತ್ತದೆ.

ಈ ವಲ್ಲಿಯಲ್ಲಿ ಮನುಷ್ಯನು ತನ್ನ ಜೀವನ ಯಾತ್ರೆಯನ್ನು ಹೇಗೆ ನಡೆಸ ಬೇಕೆಂಬುದನ್ನು ಒಂದು ಸುಂದರ ರೂಪದಿಂದ ತೋರಿಸಿಕೊಟ್ಟಿದೆ.

"ಆತ್ಮಾನಂ ರಥಿನಂ ವಿದ್ಧಿಶರೀರಂ ರಥಮೇವ ತು।
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ॥"

ಆತ್ಮನು ರಥಿ. ದೇಹವೇ ರಥ. ಬುದ್ಧಿಯು ಸಾರಥಿ. ಮನಸ್ಸು ಲಗಾಮು. ಇಂದ್ರಿಯಗಳೇ ರಥಕ್ಕೆ ಕಟ್ಟಿರುವ ಕುದುರೆಗಳು. ಇಂದ್ರಿಯಗಳ ವಿಷಯಗಳಾದ ಶಬ್ದ, ಸ್ಪರ್ಶ, ರೂಪ ರಸಾದಿಗಳು ಕುದುರೆಗಳು ಸಾಗುವ ಹಾದಿಗಳು. ಯಾರು ಸಮೀಚೀನವಾದ ಜ್ಞಾನವನ್ನು ಹೊಂದಿರುವನೋ, ಮನಸ್ಸನ್ನು ಹಿಡಿತದಲ್ಲಿಟ್ಟು ಕೊಂಡಿರುವನೋ ಅವನಿಗೆ, ಒಳ್ಳೆಯ ಕುದುರೆಗಳಂತೆ ಇಂದ್ರಿಯಗಳು ಸ್ವಾಧೀನ ವಾಗಿರುವುವು. ಶುದ್ಧವಾದ ಮನಸ್ಸುಳ್ಳ ಅವನು ತಾನು ಸೇರಬೇಕಾದ ಸ್ಥಾನವನ್ನು ಸುಖವಾಗಿ ಹೋಗಿ ಸೇರುತ್ತಾನೆ.

ನಾಲ್ಕನೆಯ ವಲ್ಲಿಯಲ್ಲಿ ಬರುವ ವಿಚಾರಗಳು. ಭಗವಂತನು ಈ ಇಂದ್ರಿಯ ಗಳನ್ನು ಕೇವಲ ಹೊರಗಿನ ವಸ್ತುಗಳನ್ನು ಕಾಣುವಂತೆ ಮಾಡಿದ್ದಾನೆ. ಕಣ್ಣು, ಕಿವಿ ಮುಂತಾದವು ಬರೀ ಹೊರಗೆ ಕಾಣುವ ವಸ್ತುಗಳನ್ನು ಕಾಣುತ್ತವೆಯೇ ಹೊರತು ಒಳಗಿರುವ ಆತ್ಮನನ್ನು ಕಾಣುವುದಿಲ್ಲ. ಯಾವುನೋ ಒಬ್ಬ ಪುಣ್ಯಶಾಲಿ ತನ್ನ ಕಣ್ಣು ಗಳನ್ನು ಒಳಗಡೆಗೆ ತಿರುಗಿಸಿ ಮೋಕ್ಷವನ್ನ ಪೇಕ್ಷಿಸಿ ಆ ಪರಮಾತ್ಮನ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುತ್ತಾನೆ. ಅಂತಹ ಪುಣ್ಯಶಾಲಿ ಸೃಷ್ಟಿಗೆ ಮೊದಲಿಗೂ ಇದ್ದು ನಂತರ ಎಲ್ಲರ ಹೃದಯ ಗುಹೆಯಲ್ಲಿ ಅಂತರ್ಯಾಮಿ ಯಾಗಿರುವ ಅವನನ್ನು ಕಾಣುತ್ತಾನೆ.

ಅಂಗುಷ್ಟ ಮಾತ್ರವಾಗಿ ಹೃದಯದಲ್ಲಿ ವಾಸಿಸುತ್ತಿರುವ ಆ ಸ್ವಾಮಿಯೇ ಎಲ್ಲಾ ಕಾಲಕ್ಕೂ ಎಲ್ಲರಿಗೂ ಸ್ವಾಮಿ ಸಾರ್ವ ಭೌಮ.

ಐದನೆಯ ವಲ್ಲಿಯಲ್ಲಿ ಪರಮಾತ್ಮನನ್ನು ಸಾಕ್ಷಾತ್ಕರಿಸಿ ಕೊಂಡಂತಹ ಸಾಧಕನಿಗೆ ಬೇರೆ ಏನೂ ಮಾಡಬೇಕಾಗಿಲ್ಲ. ಅವನನ್ನು ಸೇರಲು ಈ ದೇಹದ ಅಂತ್ಯಕ್ಕೆ ಅವನು ಕಾಯಬೇಕು. ಈ ವಲ್ಲಿಯಲ್ಲಿ ಯಮನು ಪರಮಾತ್ಮನ ಮಹತ್ವವನ್ನು ವರ್ಣಿಸುತ್ತಾನೆ. ಎಲ್ಲಾ ಜೀವಿಗಳ ಸೃಷ್ಟಿ, ಸ್ಥಿತಿ,ಲಯಕ್ಕೆ ಆ ಸಾರ್ವಭೌಮನೇ ಕಾರಣ. ಮೋಕ್ಷ ಪ್ರದನೂ ಆ ಸ್ವಾಮಿಯೇ.

ಈ ವಲ್ಲಿಯಲ್ಲಿ ಪರಮಾತ್ಮನು ಜೀವಾತ್ಮನೂಡನೆ ಅಂತರ್ಯಾಮಿಯಾಗಿ ಎಲ್ಲಾ ಜೀವಿಗಳಲ್ಲಿದ್ದರೂ ಈ ಜೀವಾತ್ಮನ ಯಾವುದೇ ದೋಷ ಅವನಿಗೆ ಸೇರುವುದಿಲ್ಲ. ಅವನು ಸಕಲ ಕಲ್ಯಾಣಗುಣಾಕರನಾಗಿ ರುವುದರಿಂದ ಯಾವುದೇ ದೋಷವಿಲ್ಲದೆ ಶುದ್ಧಸತ್ವಮಯನಾಗಿರುತ್ತಾನೆ.

ಪರಮಾತ್ಮನು ತನ್ನದೇ ಆದ ದಿವ್ಯ ಮಂಗಳ ವಿಗ್ರಹದಲ್ಲಿ ಶೋಭಿಸುತ್ತಿರುತ್ತಾನೆ.

ಆರನೆಯ ವಲ್ಲಿಯಲ್ಲಿ ಈ ಸಂಸಾರ ವನ್ನು ಒಂದು ಪಿಪ್ಪಿಲ ವೃಕ್ಷಕ್ಕೆ ಹೋಲಿಸಿದೆ. ಪಿಪ್ಪಿಲ ವೃಕ್ಷಕ್ಕೆ ಬೇರು ಮೇಲಿರುತ್ತದೆ. ಅದರ ಕೊಂಬೆಗಳು ಕೆಳಗಿರುತ್ತವೆ. ಅವುಗಳೇ ಮಾನವರು, ಪ್ರಾಣಿಗಳು, ಹುಳುಗಳು ಮುಂತಾದುವು. ಪರಬ್ರಹ್ಮನು ಇವುಗಳಿಂದ ಬೇರೆಯಾಗಿ ಸಕಲ ಕಲ್ಯಾಣ ಗುಣಕಾರ

ನಾಗಿದ್ದಾನೆ. ಅವನು ಈ ಸಂಸಾರವನ್ನು ಅವನ ವಿಭೂತಿಯಾಗಿ ಉಳ್ಳವನು.

ಈ ವಲ್ಲಿಯಲ್ಲಿ ನಿತ್ಯವಾದ ಆತ್ಮ ಜ್ಞಾನವನ್ನು ಪಡೆಯಲು ಅದು ಪ್ರಕೃತಿ ಯಿಂದ (ದೇಹದಿಂದ) ಬೇರೆಯಾದುದೆಂದು ತಿಳಿದು ದೇಹಾತ್ಮ ಭ್ರಮೆ ಹೋಗಿಸಿಕೊಳ್ಳಲು ಆಪರಮಾತ್ಮನಲ್ಲಿ ಮಾತ್ರ ಶರಣಾಗ ಬೇಕೆಂದು ತಿಳಿಸಿದೆ.

ಪರಮಾತ್ಮನನ್ನು ಪೂರ್ಣವಾಗಿ ತಿಳಿಯಲು ಯಾರಿಗೂ ಸಾಧ್ಯವಿಲ್ಲ. ಅವನು ಅಖಿಲಹೇಯ ಪ್ರತ್ಯನೀಕ ಕಲ್ಯಾಣಗುಣ ಸಾಗರನು. ಅವನನ್ನು ಶಾಸ್ತ್ರದ ಮೂಲಕವೇ ತಿಳಿಯಬೇಕು.

ಕಠೋಪನಿಷತ್‌ಇಂದಿನ ಜನಾಂಗಕ್ಕೆ ಈ ರೀತಿಯಾದ ಸಂದೇಶವನ್ನು ನೀಡುತ್ತದೆ.

1) ಮನುಷ್ಯನು ತನಗೆ ಶ್ರೇಯಸ್ಸು ಯಾವುದು ಎಂಬುದನ್ನು ನಿಶ್ಚಯಿಸಿಕೊಂಡು ಅದನ್ನು ಪಡೆದುಕೊಳ್ಳಬೇಕು. ತಾತ್ಕಾಲಿಕ ಪ್ರಿಯವನ್ನು ದಿಟ್ಟತನದಿಂದ ಬಿಡಬೇಕು.

2) ಆತ್ಮ ಸ್ವರೂಪವು ಅತ್ಯಂತ ಸೂಕ್ಷ್ಮವಾಗಿದ್ದು ಕೇಳುವುದಕ್ಕೂ ದುರ್ಲಭವಾದುದು. ಅದನ್ನು ತಕ್ಕ ಗುರುಗಳಿಂದ ಕೇಳಿ ತಿಳಿದುಕೊಳ್ಳಬೇಕು.

3) "ಈ ಲೋಕವೇ ಎಲ್ಲಾ" ಎಂದು ಭ್ರಮಿಸಿ ವಿತ್ತ ಸಂಪಾದನೆಯಲ್ಲಿಯೇ ಮುಳುಗಿ ಹೋಗಬಾರದು.

4) ತನ್ನ ಹೃದಯದೊಳಗೆ ನೆಲೆಸಿರುವ ಆತ್ಮ ವಸ್ತುವನ್ನು ಧ್ಯಾನವೇ ಮೊದಲಾದುದರಿಂದ ತಿಳಿದುಕೊಳ್ಳಬೇಕು.

5) ಈ ಆತ್ಮನು ಹುಟ್ಟು ಸಾವುಗಳಿಲ್ಲದವನಾಗಿ ನಿತ್ಯನಾಗಿ ಇರುವನೆಂದು ಮನಗಾಣಬೇಕು.

6) ಮನಸ್ಸಂಯಮವನ್ನು ಹೊಂದಿ ಇಂದ್ರಿಯಗಳ ನಿಗ್ರಹವನ್ನು ಮಾಡಬೇಕು.

7) ಜೀವನದ ಕಾಲಾವಧಿ ಪರಿಮಿತವಾಗಿರುವುದರಿಂದ ತಡಮಾಡದೆ ಸಾಧನೆಯನ್ನು ಕೈಗೊಳ್ಳಬೇಕು.

8) ನಚಿಕೇತನಂತೆ ಅಚಲವಾದ ಶ್ರದ್ಧೆಯನ್ನು ಹೊಂದಿ ಅತ್ಮನಿಗಿಂತ ಬೇರೆಯಾದ ವಿಷಯಗಳಲ್ಲಿ ದೃಢವಾದ ವೈರಾಗ್ಯವನ್ನು ಹೊಂದಬೇಕು.

9) ಮನುಷ್ಯನು ತನಗಿಂತ ಮೀರಿದ ಒಂದು ದೈವಶಕ್ತಿ ಎಲ್ಲವನ್ನೂ ನಡೆಸುತ್ತಿದೆ ಎಂದು ಅರಿಯಬೇಕು.

10) ಆ ಪರಮಪುರುಷ ಸಾರ್ವಭೌಮ ಪರಮಾತ್ಮನನ್ನು ತನ್ನೊಳಗೆ ಕಂಡುಕೊಳ್ಳಬೇಕು.

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡುತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡ ಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾಮಂಡಪ.

### ಶ್ರೀ ವೆಂಕಟೇಶ್ವರ ಧ್ಯಾನಮಂದಿರ (ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳ ಬಹುದು.



# ಆಮೆಯ ರೀತಿಯ ಸುರಕ್ಷಿತ

ಡಾ।। ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ: ಡಿ.ಎಸ್. ಭೂಮಿಕ

ಭಗವದ್ಗೀತೆಯೊಂದು ಅನುಸರಣೀಯವಾದ ಗ್ರಂಥವೇ ಹೊರತು ಯಾವುದೋ ಸಿದ್ಧಾಂತ ಪರ ವಾದದ್ದಲ್ಲ ಭಗವದ್ಗೀತೆಯಲ್ಲಿ ಹೇಳಿದ ವಿಷಯಗಳಲ್ಲಿ ಕೆಲವನ್ನಾದರೂ ಪರಿಪಾಲಿಸಿದರೂ ಸಾಕು ಫಲವು ಲಭಿಸುತ್ತದೆ. ಗೀತಾಚಾರ್ಯರು ಗೀತೆಯಲ್ಲಿ ಹಲವು ವಿಷಯಗಳನ್ನು ಬಹಳ ಸರಳವಾದ ಉದಾಹರಣೆ ಗಳೊಂದಿಗೆ ವಿವರಿಸಿದ್ದಾರೆ. ಇದರಿಂದಾಗಿ ಎಲ್ಲರಿಗೂ ವಿಷಯವು ಚೆನ್ನಾಗಿ ಅರ್ಥ ಮಾಡಿಕೊಳ್ಳುವ ಅವಕಾಶ ವುಂಟಾಗಿದೆ. ಮನುಷ್ಯನು ಸುರಕ್ಷಿತವಾಗಿರ ಬೇಕೆಂದರೆ ಆಮೆಗತಿಯನ್ನು ಅನುಸರಿಸಿದರೆ ಒಳ್ಳೆಯ ದೆಂದು ಭಗವದ್ಗೀತೆ ಬೋಧಿಸುತ್ತದೆ. ಆಮೆ ರೀತಿ ಬಹಳ ವಿಭಿನ್ನವಾಗಿರುತ್ತದೆ. ಆದರೆ ಶರೀರದ ಹೊರ ಭಾಗದಲ್ಲಿ ಅತಿಗಟ್ಟಿಯಾದ ಚಿಪ್ಪಿನ ಪದಾರ್ಥ ವಿರುತ್ತದೆ. ಯಾವ ರೀತಿಯಲ್ಲಿ ಮನುಷ್ಯನು ತನ್ನ ನೆತ್ತಿ ಮೇಲೆ ಶಿರೋಕವಚ (ಹೆಲ್ಮೆಟ್) ಇರಿಸಿಕೊಳ್ಳುತ್ತಾನೋ ಅದೇ ರೀತಿ ಆಮೆಯ ಸಂಪೂರ್ಣ ಶರೀರದ ಮೇಲೆ ಒಂದು ಹೆಲ್ಮೆಟ್ ಇರುತ್ತದೆ. ಯಾವಾಗಲಾದರೂ ಯಾವುದೇ ಪ್ರಮಾದದ ಸುಳಿವು ಸಿಕ್ಕರೆ ಸಾಕು ಕೂಡಲೇ ತನ್ನ ಅವಯವಗಳನ್ನು ಆ ಚಿಪ್ಪಿನೊಳಗೆ ಎಳೆದು ಕೊಳ್ಳುತ್ತದೆ. ಈ ಕೆಲಸ ಕ್ಷಣ ಮಾತ್ರದಲ್ಲಿ ಆಗಿ ಹೋಗುತ್ತದೆ. ಯಾವುದೇ ಜಂತು ಆಮೆಯ ಮೇಲೆ ದಾಳಿ ನಡೆಸಿದಲ್ಲಿ ಕೇವಲ ಚಿಪ್ಪಿನ ಮೇಲೆಯೇ ದಾಳಿ ನಡೆಸಿದಂತೆಯೇ ಸರಿ. ಒಳಗಿನ ಆಮೆಯು ಸುರಕ್ಷಿತವಾಗಿ ಉಳಿದು ಹೋಗುತ್ತದೆ. ಭಗವದ್ಗೀತೆಯಲ್ಲಿ ಈ ಆಮೆಯ ಉದಾಹರಣೆಯನ್ನು ಏಕೆ ಕೊಟ್ಟಿದ್ದಾರೋ ನೋಡೋಣ.

ಮನುಷ್ಯನ ಇಂದ್ರಿಯಗಳು ಅನೇಕ, ಅವು ಒಟ್ಟು ಹತ್ತು. ಅದರಲ್ಲಿ ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು. ಕರ್ಮೇಂದ್ರಿಯ ಗಳ ಮೂಲಕ ನಾವು ಕರ್ಮಗಳನ್ನು ಮಾಡುತ್ತೇವೆ. ಜ್ಞಾನೇಂದ್ರಿಯಗಳ ಮೂಲಕ ಸಮಾಚಾರವನ್ನು ಗ್ರಹಿಸುತ್ತೇವೆ. ಕಾಲು, ಕೈ, ಹೊಟ್ಟೆ, ಜನನಾಂಗ, ಗುದದ್ವಾರ ಎಂಬುವು ಐದು ಕರ್ಮೇಂದ್ರಿಯಗಳು. ಇನ್ನು ಕಣ್ಣು, ಕಿವಿ, ನಾಲಿಗೆ, ಮೂಗು, ಸ್ಪರ್ಶ ಎಂಬುವು ಐದು ಜ್ಞಾನೇಂದ್ರಿಯ ಗಳು ಈ ಇಂದ್ರಿಯಗಳ ಮೂಲಕ ಮನುಷ್ಯ ಅನೇಕ ವಿಧವಾದ ಭೋಗ ಗಳನ್ನು ಅನುಭವಿಸುತ್ತಾ ಇರುತ್ತಾನೆ. ಕಣ್ಣು ಯಾವುದೋ ಅಂದ ವಾದುದನ್ನು ನೋಡಬೇಕೆಂದು ಇಚ್ಛಿಸುತ್ತವೆ. ಟಿವಿ ನೋಡಬೇಕೆಂದು ಅನಿಸುತ್ತವೆ. ಸಿನಿಮಾ ನೋಡಬೇಕೆಂದು ಆಶಿಸುತ್ತವೆ. ಕಿವಿಗಳು ಯಾವುದೋ ಒಳ್ಳೆಯ ಸಂಗೀತವನ್ನು ಆಲಿಸಬೇಕೆಂದು ಕೋರುತ್ತವೆ. ಹಾಡುಗಳನ್ನು ಕಥೆಗಳನ್ನು ಕೇಳಬೇಕೆಂದು ಕೋರಿಕೊಳ್ಳುತ್ತವೆ. ನಾಲಿಗೆ ನಾನಾ ಬಗೆಯ ರುಚಿಗಳನ್ನು ಆಶಿಸುತ್ತದೆ. ಪಿಜ್ಜಾಗಳನ್ನು ಆಸೆ ಪಡು ತ್ತವೆ. ಬರ್ಗರ್, ಮಿರ್ಚಿಯನ್ನು ಬಯಸುತ್ತವೆ. ಮೂಗಿಗೆ ಸುಗಂಧ ದ್ರವ್ಯ

**ಭಗವದ್ಗೀತೆಯೊಂದು ಅನುಸರಣೀಯವಾದ ಗ್ರಂಥವೇ ಹೊರತು ಯಾವುದೋ ಸಿದ್ಧಾಂತ ಪರವಾದದ್ದಲ್ಲ ಭಗವದ್ಗೀತೆಯಲ್ಲಿ ಹೇಳಿದ ವಿಷಯಗಳಲ್ಲಿ ಕೆಲವನ್ನಾದರೂ ಪರಿಪಾಲಿಸಿದರೂ ಸಾಕು ಫಲವು ಲಭಿಸುತ್ತದೆ.**

**ಯಾರು ತಪಸ್ಸು ಮಾಡುತ್ತಾರೋ ಅವರಿಗೆ ಫಲಿತಗಳು ನಿಶ್ಚಯವಾಗಿ ಉಂಟಾಗುತ್ತವೆ. ತಪಸ್ಸಾಚರಣೆಯ ಮುಖ್ಯ ಭಾಗವೆಂದರೆ ಇಂದ್ರಿಯ ಭೋಗಗಳನ್ನು ಬಿಟ್ಟು ಬಿಡುವುದು. ಗುರಿ ಸಾಧನೆಯ ನಂತರ ಉಂಟಾಗುವ ಫಲಿತಗಳನ್ನು ನೆನೆಯುತ್ತಾ ವಿದ್ಯಾರ್ಥಿಯರು, ತರುಣರು, ತಾತ್ಕಾಲಿಕವಾದ ಇಂದ್ರಿಯ ಭೋಗಗಳನ್ನು ಬಿಟ್ಟು ಬಿಡಬೇಕು.**

ಬೇಕು.ಸ್ಪರ್ಶಕ್ಕೆ ಮೆದುವಾದ್ದು, ನುಣುಪಾದ ಅನುಭೂತಿಬೇಕು. ಹಾಗೆಯೇ ಕರ್ಮೇಂದ್ರಿಗಳು ಸಹಾ ನಾನಾ ಬಗೆಯ ಆಸ್ವಾದನೆಯನ್ನು ಕೋರುತ್ತವೆ. ಕರ್ಮೇಂದ್ರಿಯಗಳ ಮೂಲಕ ನಾವು ಶರೀರವನ್ನು ಪೋಷಿಸಿಕೊಳ್ಳುತ್ತೇವೆ. ಜ್ಞಾನೇಂದ್ರಿಯಗಳ ಮೂಲಕ ಜ್ಞಾನಾರ್ಜನೆಯನ್ನು ಮಾಡಿಕೊಳ್ಳುತ್ತೇವೆ. ಈ ಇಂದ್ರಿಯಗಳನ್ನು ಆಯಾ ಕೆಲಸಕ್ಕೆ ಮಾತ್ರವೇ ವಿನಿಯೋಗಿಸಿಕೊಳ್ಳಬೇಕೇ ವಿನಃ ಭೋಗಕ್ಕಲ್ಲ, ಭೋಗದಲ್ಲಿ ಬೀಳುವವನು ರೋಗದಲ್ಲಿ ಬೀಳುತ್ತಾನೆ. ದುರಾಭ್ಯಾಸಗಳ ಪಾಲಾಗುತ್ತಾನೆ. ಗುರಿಯನ್ನು ಸಾಧಿಸದೇ ಹೋಗುತ್ತಾನೆ. ಗುರಿಯನ್ನು ಸಾಧಿಸಬೇಕಾದರೆ ಬುದ್ಧಿ ಪ್ರಚುರವಾಗಿರಬೇಕು. ಅದಕ್ಕೇ ಗೀತಾಚಾರ್ಯರು ಆಮೆಯ ಉದಾಹರಣೆ ನೀಡುತ್ತಾ,

ಯದಾ ಸಂಹರತೇ ಚಾಯಂ ಕೂರ್ಮೋಂಗಾ ವೀವ ಸರ್ವಶಃ।
ಇಂದ್ರಿಯಾಣಿಂದ್ರಿಯಾರ್ಥಭ್ಯಃ ತಸ್ಯ ಪ್ರಜ್ಞಾ ಪ್ರತಿಷ್ಠಿತಾ।। (ಭಗವದ್ಗೀತ 2.58)

“ಯಾರ ಇಂದ್ರಿಯಗಳು ಇಂದ್ರಿಯಾರ್ಥಗಳಿಂದ ದೂರವೇ ಉಳಿದಿರುತ್ತವೋ ಯಾರು ಆ ಕಾರ್ಯವನ್ನು ಆಮೆಯು ತನ್ನ ಅವಯವಗಳನ್ನು ಚಿಪ್ಪಿನಲ್ಲಿ ಎಳೆದುಕೊಂಡು ಮುದುರಿಕೊಂಡು ಕುಳಿತು ಕೊಳ್ಳುವಂದದಿ ಮಾಡುತ್ತಾನೋ ಅವನೇ ಸ್ಥಿರ ಚೈತನ್ಯದಲ್ಲಿರುವವನಾಗುತ್ತಾನೆ” ಎಂದು ಹೇಳುತ್ತಾರೆ.

ದುರಂತವಿದೆಯೆಂದು ತಿಳಿಯುತ್ತಲೇ ಆಮೆ ತನ್ನ ಅವಯವಗಳನ್ನು ಒಳಗೆಳೆದುಕೊಂಡು ಮುದುರಿಕೊಳ್ಳುತ್ತದೆ. ಹಾಗೆಯೇ ಪ್ರಜ್ಞಾವಂತನು ಉನ್ನತವಾದ ಗುರಿಯನ್ನಿಟ್ಟುಕೊಂಡು, ಉನ್ನತವಾದ ರಸಾಸ್ವಾದನೆಗಾಗಿ ಅಲ್ಪವಾದ ಇಂದ್ರಿಯ ಭೋಗಗಳನ್ನು ಬಿಟ್ಟು ಬಿಡುತ್ತಾನೆ. ಆತನ ಬುದ್ಧಿ ಎಂದಿಗೂ ಸ್ಥಿರವಾಗಿರುತ್ತದೆ.ಅರ್ಜುನನು ಬಾಲ್ಯದಲ್ಲಿ ಹೀಗೆಯೇ ಮಾಡುತ್ತಿದ್ದನು.ಗುರುಗಳು ನಸುಕಿನಲ್ಲಿ ಕಮಂಡಲದಲ್ಲಿ ನೀರು ತಾರೆಂದು ಹೇಳಿದರೆ ಅತ್ಯಂತ ತಿಳುವಳಿಕೆಯಿಂದ ತ್ವರಿತದಲ್ಲೇ ಆ ಕೆಲಸವನ್ನು ಎಲ್ಲರಿಗೂ ಮುಂಚೆಯೇ ಪೂರ್ತಿಗೊಳಿಸಿ ಬಂದು ಗುರುಗಳ ಹತ್ತಿರ ಹೆಚ್ಚಿನ ಪಾಠಗಳನ್ನು ಕಲಿಯುತ್ತಿದ್ದನು.

ಒಂದು ದಿನ ಊಟದ ಸಮಯದಲ್ಲಿ ಗಾಳಿಗೆ ದೀಪ ಆರಿಹೋಗಲು, ಬೆಳಕಿಲ್ಲದಿದ್ದರೂ ಕೈಯಲ್ಲಿರುವ ಆಹಾರ ಬಾಯಿಯ ಬಳಿಗೇ ಹೋಗುವುದನ್ನು ಗಮನಿಸಿ, ಕತ್ತಲೆಯಲ್ಲೂ ಬಾಣಗಳನ್ನು ಹೊಡೆಯಬಹುದೇ? ಎಂಬ ಸಂಶಯ ವುಂಟಾಗಿದೆ.ಈ ರೀತಿಯಾಗಿ ಆತನು ಬಾಲ್ಯ ಸಹಜವಾದ ಆಟಪಾಠಗಳನ್ನು ತೊರೆದು ಆತ ರಾತ್ರಿಯ ಹೊತ್ತು ಸಹಾ ಅಸ್ತ್ರ ವಿದ್ಯೆಯನ್ನು ಅಭ್ಯಸಿಸುತ್ತಾನೆ. ಆದ್ದರಿಂದಲೇ ಅರ್ಜುನನ ಹೆಸರು ಅಮರವಾಗಿ ನಿಂತಿದೆ. ಆತನ ಶ್ರದ್ಧೆಯನ್ನು ಕಂಡು ದ್ರೋಣನು ವಚನವೀಯುತ್ತಾ “ನಿನ್ನನ್ನು ಲೋಕೋತ್ತಮನಾದ ಧನುರ್ಧಾರಿಯನ್ನಾಗಿ ಮಾಡುತ್ತೇನೆ” ಎಂದು ಪ್ರೋತ್ಸಾಹಿಸುತ್ತಾನೆ.

ಯಾರು ತಪಸ್ಸು ಮಾಡುತ್ತಾರೋ ಅವರಿಗೆ ಫಲಿತಗಳು ನಿಶ್ಚಯವಾಗಿ ಉಂಟಾಗುತ್ತವೆ. ತಪಸ್ಸಾಚರಣೆಯ ಮುಖ್ಯ ಭಾಗವೆಂದರೆ ಇಂದ್ರಿಯ ಭೋಗಗಳನ್ನು ಬಿಟ್ಟು ಬಿಡುವುದು. ಗುರಿ ಸಾಧನೆಯ ನಂತರ ಉಂಟಾಗುವ ಫಲಿತಗಳನ್ನು ನೆನೆಯುತ್ತಾ ವಿದ್ಯಾರ್ಥಿಯರು, ತರುಣರು, ತಾತ್ಕಾಲಿಕವಾದ ಇಂದ್ರಿಯ ಭೋಗಗಳನ್ನು ಬಿಟ್ಟು ಬಿಡಬೇಕು.

ಬಲವಂತವಾಗಿ ಯಾರಾದರೂ ಇಂದ್ರಿಯ ಭೋಗಗಳನ್ನು ತರಲೆಂದು ಪ್ರಯತ್ನಿಸಿದಲ್ಲಿ ಆಮೆಯ ರೀತಿಯಲ್ಲಿ ಇಂದ್ರಿಯಗಳನ್ನು ಒಳಗೆಳೆದುಕೊಳ್ಳಬೇಕು. ಇಂದ್ರೀಯಗಳ ಆಯಾ ಇಂದ್ರಿಯಾರ್ಥಗಳ ಹಿಂದೆ ಹೊರಟು ಹೋದರೆ ಬುದ್ಧಿ ಗುರಿಯ ಮೇಲೆ ನಿಲ್ಲಲಾರದು. ಅಂದರೆ ಬಟ್ಟಬಯಲಾಗಿ ಇಂದ್ರಿಯಗಳನ್ನು ಸ್ವೇಚ್ಛಾಚಾರಕ್ಕೆ ಬಿಟ್ಟರೆ ವಿದ್ಯಾರ್ಥಿಗಳು, ಯುವಕರು ಯಾವುದೇ ಗುರಿಯನ್ನು ಸಾಧಿಸಲಾರರು. ಅದು ಒಂದು ರೀತಿ ಸ್ಟೀರಿಂಗನ್ನು ಹಿಡಿಯದೇ ಓಡಿಸುವ ಕಾರಿನ ಹಾಗೆ. ಇಲ್ಲವೇ ಲಗಾಮು ಬಿಟ್ಟು ರಥವನ್ನು ನಡೆಸಿದಂತೆಯೇ ಆಗುತ್ತದೆ. ಆಗ ಕಾರು ಅಥವಾ ರಥವು ನಿಶ್ಚಯವಾಗಿ ಗುಂಡಿಯಲ್ಲಿ ಬೀಳುತ್ತದೆ. ಆದ್ದರಿಂದ ಇಂದ್ರಿಯಗಳನ್ನು ನಿಗ್ರಹಿಸಿ, ಸರಿಯಾದ ರೀತಿಯಲ್ಲಿ ಅವುಗಳನ್ನು ಬಳಸಿಕೊಳ್ಳುತ್ತಾ ಗುರಿಸಾಧನೆಯಲ್ಲಿ ನಿಲ್ಲುವುದೇ ಪ್ರಸ್ತುತ ಕರ್ತವ್ಯ. ಒಂದು ಆಮೆಯ ಗೊಂಬೆಯನ್ನು ಮೇಜಿನ ಮೇಲಿರಿಸಿ ಆದರಿಂದ ಸ್ಪೂರ್ತಿಯನ್ನು ಪಡೆಯುತ್ತಾ ಗುರಿಸಾಧನೆಯಲ್ಲಿ ಯುವಕರು ಮುಂದೆ ಸಾಗಬೇಕು. ಗೀತೆಯಲ್ಲಿ ಹೇಳಿದ ಉದಾಹರಣೆಯನ್ನು ಪಾಲಿಸಿದಲ್ಲಿ ನಿಶ್ಚಯವಾಗಿ ವಿಜಯಸಾಧನೆಯಲ್ಲಿ ಮುಂದೆ ಸಾಗುತ್ತಾರೆ.

# ಪುರಂದರ ದಾಸರ ರಚನೆಗಳಲ್ಲಿ ಬರುವ ದಾಸ್ಯಭಕ್ತಿ

-ಶ್ರೀಮತಿ. ಸುಧಾಮಧುಸೂದನ್



ಸುಳಾದಿ

ಹರಿದಾಸ ದಾಸತ್ವದ ಪಡೆದ
ನರ ಜೀವನ್ಮುಕ್ತನೆನಿಸಿ ಕೀರ್ತಿ ಪಡೆದ
ಹರಿನಾನೆಂಬವನೆದೆಮೆಟ್ಟಿ ನಡೆದ।
ಹರಿಯಬಾಕುಳಿಗವೃತ್ತಿಯನೆ ಹಿಡಿದ।
ಪುರಂದರ ವಿಠಲರಾಯನ ಎಡದ।
ಚರಣ ನಿರ್ಜರತರು ಛಾಯೆಯ ಹಿಡಿದ

ಇಲ್ಲಿ ಪುರಂದರದಾಸರು ದಾಸತ್ವದ ಬಗ್ಗೆ ಹೇಳಿದ್ದಾರೆ. ಭಕ್ತನು ಹರಿದಾಸನನಾದ ಮೇಲೆ ಏನೆಲ್ಲಾ ರೀತಿಯಾದ ಸಂತೋಷವನು,ಹರಿಸಾನಿಧ್ಯವನ್ನು ಅನುಭವಿಸುವನು. ಯಾವ ರೀತಿ ಹರಿದಾಸ್ಯದಿಂದ ಭಕ್ತನು ಆಗುವನು ಎಂದು ದಾಸರು ಹೇಳುತ್ತಾರೆ.

ಶ್ರೀ ಹರಿಯ ದಾಸ್ಯತ್ತ್ವವನ್ನು ಪಡೆದಂತಹ ಭಕ್ತನು ನಶ್ವರವಾದಂತಹ ಈ ಮನುಷ್ಯಜನ್ಮದಿಂದ ಮುಕ್ತನೆನಿಸಿದಂತೆ ಖ್ಯಾತಿಯನು ಪಡೆಯುವನು ಮತ್ತು ಶ್ರೀಹರಿ ನಾಮವೆಂಬ ಮಂತ್ರದಿಂದ, ಧ್ಯಾನದಿಂದ ತಾನು ಶ್ರೀ ಹರಿಗೆ ಸೇರಿದವನು ಎಂದು ಬಹಳ ವಿಶ್ವಾಸದಿಂದ ಎಲ್ಲಾ ಕಾಮನೆಗಳನ್ನು ತುಳಿದು ಮುಂದೆ ನಡೆವನು.ಹರಿಯು ತನ್ನವನೆಂಬ ಒಂದು ಹೆಮ್ಮೆಯಿಂದ ಎದೆಯನ್ನು ಸೆಟೆದು ತಲೆಎತ್ತಿನಡೆದ ನಂತರ ಶ್ರೀಹರಿಯ ಬಾಕುಳಿಗವೃತ್ತಿ ಅಂದರೆ ಹರಿಸೇವೆಯಾದ ಅರ್ಚನೆ, ಪೂಜೆ, ನೈವೇದ್ಯವನ್ನು ಮಾಡಿ ಶ್ರೀ ಪುರಂದರವಿಠಲ ರಾಯನ ಸುಮಧುರ ಪಾದಗಳನ್ನು ಸದಾ ಆಶ್ರಯಿಸುವನು ಅದು ಶ್ರೀ ಹರಿಯನ್ನು ಬೃಹತ್ ಮರಕ್ಕೆ ಇಲ್ಲಿ ದಾಸರು ಹೋಲಿಸಿದ್ದಾರೆ. ಅಂತಹ ಮರದ ನೆರಳಿನಲ್ಲಿ ಬದುಕುವುದು ಭಕ್ತನ ಭಾಗ್ಯವೇ ಸರಿ. ಅಂತಹ ಸುಂದರಹರಿಚರಣಬ್ಜದ ನೆರಳಿನಲ್ಲಿ ಬದುಕುವನು ಎಂದು ಪುರಂದರದಾಸರು ಹೇಳುತ್ತಾರೆ.

### 1. ದಾಸನ ಮಾಡಿಕೊ ಎನ್ನ।

ದಾಸನ ಮಾಡಿಕೊ ಎನ್ನ। ಸ್ವಾಮಿ।
ಸಾಸಿರ ನಾಮದ ವೆಂಕಟರಮಣ।।
ದುರುಳ ಬುದ್ಧಿಗಳನೆಲ್ಲ ಬಿಡಿಸೊ।
ನಿನ್ನ ಕರುಣ ಕವಚವೆನ್ನ ಹರಣಕ್ಕೆ ತೊಡಿಸೋ।
ಚರಣ ಸೇವೆ ಎನಗೆ ಕೊಡಿಸೋ। ಅಭಯ
ಕರಪುಷ್ಪವೆನ್ನ ಶಿರದಲ್ಲಿ ಮುಡಿಸೋ।
ದೃಢ ಭಕ್ತಿ ನಿನ್ನಲ್ಲಿ ಬೇಡಿ। ನಾ।
ಅಡಿಗೆರೆಗುವೆನಯ್ಯ ಅನುದಿನಪಾಡಿ।।
ಕಡೆಗಣ್ಣಿಲೇಕೆನ್ನ ನೋಡಿ ಬಿಡುವೆ।।
ಕೊಡು ನಿನ್ನ ಧ್ಯಾನವ ಮನಶುಚಿಮಾಡಿ।।
ಮೊರೆಹೊಕ್ಕವರ ಕಾವ ಬಿರುದು । ಎನ್ನ।।
ಮರೆಯದೆ ರಕ್ಷಣೆ ಮಾಡಯ್ಯ ಪೊರೆದು ।।
ದುರಿತಗಳೆಲ್ಲವ ತರಿದು ಸಿರಿ
ಪುರಂದರ ವಿಠಲ ಎನ್ನನು ಪೊರೆದು ।।

ಜೀವನವ ಸಿಹಿ ಕಹಿಗಳನ್ನು ಚೆನ್ನಾಗಿ 'ಅರ್ಥವಿಸಿದ ಜೀವನು ಭಗವಂತನ ದಾಸನಾಗುವುದಕ್ಕಿಂತ ದೊಡ್ಡ ಭಾಗ್ಯ ಪ್ರಪಂಚದಲ್ಲಿ ಬೇರೊಂದಿಲ್ಲವೆಂದರಿತು ಅನನ್ಯ ಭಕ್ತಿಯಿಂದ ಪ್ರಭುವಿನಲ್ಲಿ ಇಂತು ಪ್ರಾರ್ಥಿಸುವರು.

ಪಾಪನಾಶಕ ಗಿರಿಯ ಮೇಲ್ಗಡೆ ಭವತಾಪವ ಡಗಿಸಲು ನಿಂತ ಸಾಸಿರನಾಮದ ವೆಂಕಟರಮಣಾ ನನಗಿನ್ಯಾವುದು ಬೇಡ, ನಿನ್ನ ದಾಸಾನುದಾಸನಾಗುವ ಭಾಗ್ಯವೊಂದನ್ನು ಮಾತ್ರ ಕರುಣಿಸು.ನನ್ನಲ್ಲಿ ಕುಸಂಸ್ಕಾರ ಪ್ರಾಬಲ್ಯದಿಂದಲೂ ಹೇಳಲು ಸಾಧ್ಯವಾದ ಅನೇಕ ದುರ್ಗುಣಂಗಳು ಮನೆಮಾಡಿವೆ.ದ್ವೇಷ, ಬಾಯ್ಬಡಕತನ, ಗರ್ವ ಮುಂತಾದ ಗುಣಗಳಿಂದ ಒಮ್ಮೆಯೂ ನಿನ್ನನು ನಾನು ಧ್ಯಾನಿಸಲಿಲ್ಲ.ನೀನು ಕರುಣಾಕರ ಎನ್ನ ದುಷ್ಟ ಬುದ್ಧಿಗಳನ್ನು ಬಿಡಿಸೋ, ನೀನು ಕರುಣಾಕರ, ಕೃಪಾ ಸಾಗರ, ಆಶ್ರಿತಜನ ಪರಿಪಾಲ, ಭಕ್ತಾಭಿಮಾನಿ, ನನ್ನ ಈ ಶತಾಪರಾಧಗಳನ್ನು ಮನ್ನಿಸಿ, ನನ್ನ ಹರಣಕೆ ಕರುಣೆಯ ಕವಚ ತೊಡಿಸೋ, ನೀನೇ ನಿನ್ನ ಕರುಣ ಕವಚವನ್ನು ನನ್ನ ಪ್ರಾಣಕ್ಕೆ ತೊಡಿಸುವುದರಿಂದ ಎಂತಹ ವಿಪತ್ತಿನಲ್ಲಾದರೂ ಆ ನಿನ್ನ ಕವಚ ನನ್ನನ್ನು ಕಾಪಾಡು

ವುದು ಎಂದು ದಾಸರು ಹೇಳುತ್ತಾರೆ. ನನ್ನ ಪ್ರಾರ್ಥನೆಯೆಲ್ಲಾ ನನ್ನ ಚರಣಕ್ಕೆ ಅರ್ಪಿತವಾಗಲಿ,ಎಂಬ ಭಾವನೆಯಿಂದ ನಾನು ಮಾಡುವೆ. ನಾನು ನಿನ್ನ ಪಾದಂಗಳನ್ನು ಒಂದು ಕ್ಷಣವೂ ಮರೆಯದ ಹಾಗೆ ಪಾದಸೇವೆಯನ್ನು ಕರುಣಿಸು. ನಿನ್ನ ಅಭಯಕರವಾದ ಹಸ್ತವನ್ನು ನನ್ನ ಶಿರದ ಮೇಲೆ ಇಟ್ಟು ಸದಾ ಎನ್ನ ಕಾಪಾಡು ತಂದೆ ನಿನ್ನ ಅಭಯಕರ ಹಸ್ತವನ್ನು ಎನ್ನ ಶಿರದಲ್ಲಿ, ನಿನ್ನ ಕರುಣ ಕವಚವೆನ್ನ ಹರಣದಲ್ಲಿ, ನಿನ್ನ ಚರಣಸ್ಮರಣ ಎನ್ನಮನದಲ್ಲಿ ಕರುಣಿಸು. ಹಾಗೆಯೇ ನನ್ನನ್ನು ನಿನ್ನ ದಾಸನನ್ನಾಗಿ ಮಾಡಿಕೋ ವೆಂಕಟರಮಣಾ ಎಂದು ದಾಸರು ಹೇಳುತ್ತಾರೆ.

ದೃಢಭಕ್ತಿ ನಿನ್ನಲ್ಲಿ ಬೇಡಿ ನಾ
ಅಡಿಗೆರಗುವೆನಯ್ಯ ಅನುದಿನ ಪಾಡಿ।
ಕಡೆಗಣ್ಣಲೇಕೆನ್ನ ನೋಡಿ ಬಿಡುವೈ।
ಕೊಡುನಿನ್ನ ಧ್ಯಾನವ ಮನಶುಚ್ಚಿಮಾಡಿ॥

ದೇವಾ ಅನುದಿನವೂ ನಿನ್ನನ್ನು ಭಕ್ತಿಯಿಂದ ಎರಗುವೆನು ನರಹರಿ ನನ್ನ ಕಾಪಾಡು ನನ್ನನಲ್ಲಿ ದೃಢವಾದ ಭಕ್ತಿಯನ್ನು ಕರುಣಿಸು, ಕಲ್ಮಶವಾಗಿರುವಂತ ನನ್ನ ಮನಸ್ಸನ್ನು ಶುದ್ಧಿಮಾಡು,ನೀನು ಕಣ್ಣಮುಂದೆ ಇದ್ದರೂ ನನಗೆ ಗೋಚರವೇ ಆಗಲೊಲ್ಲದು ಪತಿತಪಾವನ, ಅನಾಥ ಬಂಧು, ದಿಕ್ಕು ತೋರದೆ ನಿನ್ನ ಪಾದವನ್ನು ನಂಬಿದ್ದೇನೆ. ಕಡೆಗಣಿಸಿ ಬಿಡಬೇಡ ತಂದೆ ಎಂದು ದಾಸರು ಶ್ರೀಹರಿಗೆ ಬೇಡುತ್ತಾರೆ. ಈ ಎಲ್ಲಾ ರೀತಿಯಲ್ಲೂ ತನ್ನನ್ನು ಶುದ್ಧಗೊಳಿಸಿ ನಿನ್ನ ದಾಸನನ್ನಾಗಿ ಮಾಡಿರೋ ಎಂದು ವಿನಂತಿಸಿಕೊಳ್ಳುತ್ತಾರೆ.

ಮೊರೆಹಕ್ಕವರ ಕಾವ ಬಿರುದು ಎನ
ಮರೆಯದೆ ರಕ್ಷಣೆ ಮಾಡಯ್ಯ ಪೊರೆದು
ದುರಿತಗಳೆಲ್ಲವ ತರಿದು ಸಿರಿ
ಪುರಂದರ ವಿಠಲ ಎನ್ನನ್ನು ಪೊರೆದು

ದೇವರಿಗೆ ಮೊರೆಹೊಕ್ಕವನಿಗೆ ಯಾವುದೇ ಭಯವಿಲ್ಲ. ಅಭಯದಾಯಕನಾದ ಭಗವಂತನ ವರದ ಹಸ್ತವು ಭಕ್ತನನ್ನು ಕಾಪಾಡಿಯೇ ಕಾಪಾಡುವುದು, ಆರ್ತರಕ್ಷಕನಾದ ಭಗವಂತ ಆರ್ತಧ್ವನಿಯಿಂದ ಪ್ರಾರ್ಥನೆಗೈದ ಒಬ್ಬರನ್ನಾದರೂ ಈತನಕ ಕೈಬಿಟ್ಟಿಲ್ಲ. ಹಾಗೆಯೇ ಸ್ವಾಮಿ ಬರುವ ಕಷ್ಟಗಳನ್ನೆಲ್ಲಾ ಕಳೆದು ಎನ್ನನ್ನು ರಕ್ಷಿಸೋ ಲಕ್ಷ್ಮಿ ಸಮೇತವಾದ ಪುರಂದರ ವಿಠಲ ಎಂದು ದಾಸರು ಈ ಕೀರ್ತನೆಯಲ್ಲಿ ತನ್ನನ್ನು ದಾಸನನ್ನಾಗಿ ಮಾಡಿಕೋ ಎಂದು ಬೇಡಿಕೊಂಡಿದ್ದಾರೆ. ದೇವರ ಅನುಗ್ರಹವಾಗ ಬೇಕೆಂದರೆ ಭಕ್ತನ ಮೊರೆ ಹೇಗಿರಬೇಕೆಂದು ಈ ಕೀರ್ತನೆಯಲ್ಲಿ ವರ್ಣಿಸಿದ್ದಾರೆ.

### 2. ನೀನೇ ಬಲ್ಲಿದನೋ ಹರಿ ನಿನ್ನ ದಾಸರ ಬಲ್ಲಿದರೋ

ನೀನೇ ಬಲ್ಲಿದನೋ ಹರಿ।
ನಿನ್ನ ದಾಸರು ಬಲ್ಲಿದರೋ॥
ನಾನಾ ತೆರೆದಿ ನಿಧಾನಿಸಿ ನೋಡಲು
ನೀನೇ ಭಕ್ತರಾಧೀನನಾದ ಮೇಲೆ
ಜಲಜ ಭವಾಂಡಕ್ಕೆ ಒಡೆಯ ನೀನೆನಿಸುವೆ
ಬಲು ದೊಡ್ಡವನು ನೀನಹುದೋ।
ಅಲಸದೆ ಹಗಲಿರುಳೆನ್ನದೆ ಅನುದಿನ।
ಒಲಿದು ಬಲಿಯಮನೆ ಬಾಗಿಲ ಕಾಯ್ದುಮೇಲೆ
ಪರಮಪುರುಷ ಪರಬೊಮ್ಮ ನೀನೆನುತಲಿ।
ನಿರತ ಶ್ರುತಿಯು ಕೊಂಡಾಡುತಿರೆ॥
ವರಪಾಂಡವರ ಮನೆಯೊಳಗ ಮಾಡ್ಯವರು।
ಕರೆಕರೆದಲ್ಲಿಗೆ ಹೋಗಿ ಕಾಯ್ದ ಮೇಲೆ॥
ತರಳ ಕರೆಯಲು ನೀ ತ್ವರಿತದಿ ಕಂಭದಿ ಬಂದು।
ನರಮೃಗರೂಪದಿಂದವನ ಕಾಯ್ದೆ
ವರಗಳೀವ ಪುರಂದರ ವಿಠಲ ನಿನ್ನ
ಸ್ಮರಿಪರ ಮನದಲ್ಲಿ ಸೆರೆಯ ಸಿಕ್ಕಿದ ಮೇಲೆ॥

ನೀನು ದೊಡ್ಡವನೋ ನಿನ್ನ ದಾಸರು ದೊಡ್ಡವರೋ, ಅನೇಕ ಪುರಾಣೋಕ್ತ ಉದಾಹರಣೆಗಳನ್ನು ತೆಗೆದುಕೊಂಡಲ್ಲಿ ನೀನೇ ಭಕ್ತರ ಅಧೀನನೆಂದು ಸ್ಪಷ್ಟವಾಗುವುದು ಎಂದೆನ್ನುತ್ತಾರೆ ದಾಸರು.

"ನೀನೇ ಬಲ್ಲಿದನೋ ಹರಿ
ನಿನ್ನ ದಾಸರು ಬಲ್ಲಿದರೋ"

ಎಂಬುದಾಗಿ ಹರಿದಾಸರು ಪ್ರಶ್ನಿಸುತ್ತಾರೆ. ಜಗತ್ತಿಗೇ ನೀನು ಒಡೆಯನಂತೆ, ಬಲು ದೊಡ್ಡವನಂತೆ, ವಾಮನನಾಗಿ ಬಲಿಯ ಬಳಿ ದಾನವ ಬೇಡಿದೆಯಂತೆ. ಮೆಟ್ಟೆರಡಕ್ಕೆ ಬ್ರಹ್ಮ ಸೃಷ್ಟಿಯನು ಅಳೆದು ಮೂರನೆಯ ಹೆಜ್ಜೆಯಿಂದ ಬಲಿಯನ್ನು ಪಾತಾಳಕ್ಕೆ ಮೆಟ್ಟಿದೆಯಂತೆ. ಕೊನೆಗೂ ನೀನು ದ್ವಾರಪಾಲಕನಾಗಿ ಯಾಚಕನಾಗಿ ಬಲಿಯ ಮನೆಯ ಬಾಗಿಲಕಾಯ್ದೆಯಂತೆ ಕೃಷ್ಣಾ.

ಯಾವ ಪರಮ ಪುರುಷನನ್ನು ವೇದಗಳು 'ನೇತಿನೇತಿ, ಎಂಬುದಾಗಿ ಸಂಬೋಧಿಸುವವೋ, ಅಂತಹ ಶೃತಿಸ್ತುತ್ಯನಾದ ರತಿಪತಿಪಿತಾಮಹನು ತನ್ನ ಭಕ್ತರಾದ ಪಾಂಡವರ ಸೇವೆ ಅವರು ಕರೆದಲ್ಲಿಗೆಲ್ಲ ಹೋಗಿ, ಗೈದು 'ಭಕ್ತ ಕುಟುಂಬಿ' ಎಂಬ ಬಿರುದನ್ನು ಸಾರ್ಥಕಪಡಿಸಿಕೊಂಡಿರುವನು.

ಶ್ರೀಹರಿಯು ದೀನದಯಾಳು, ಭಕ್ತಪರಾಧೀನ ಬಾಲಕ ಪ್ರಹ್ಲಾದನು ಕರೆದಾಕ್ಷಣ ಕಂಬದಿಂದ ಬಂದು ನರಹರಿಯ ರೂಪ ತಾಳಿದ ವಿವರವನ್ನು ದಾಸರು ವಿವರಿಸುತ್ತಾರೆ.

ದೇವರು ಭಕ್ತನಿಗೆ ಹೇಗೆ ದೊಡ್ಡವನೋ, ಹಾಗೆಯೇ ದೇವರಿಗೆ ತನ್ನ ಭಕ್ತನೇ ದೊಡ್ಡವನು. ಶ್ರೀಹರಿಯು ಭಕ್ತಾದೀನನು ಎಂಬುದಾಗಿ ದಾಸರು ಹೇಳಿದರು. ಶ್ರೀಹರಿಯ ದಾಸ್ಯವನ್ನು ಹೊಂದಿ, ಸ್ಮರಿಸುವವರ ಮನದಲ್ಲಿ ನೆಲೆಸುವ ಭಗವಂತನನ್ನು ಸದಾ ಸೇವಿಸಿ ಕೃತಾರ್ಥರಾಗ ಬೇಕೆಂದು ದಾಸರು ಆಸೆಪಡುತ್ತಾರೆ.

ದಾಸ್ಯ ಭಕ್ತಿಕೀರ್ತನೆಗಳನ್ನು ಶ್ರೀಪುರಂದರದಾಸರು ಇನ್ನು ರಚಿಸಿದ್ದಾರೆ.

1. ದಾಸನೆಂತಾಗುವೆನು ಧರೆಯೊಳಗೆ
2. ದಾಸರ ನಿಂದಿಸಬೇಡ ಮನುಜ
3. ನೀನೆ ಬಲ್ಲಿದನೋ ನಿನ್ನ ದಾಸರು ಬಲ್ಲಿದರೋ
4. ಇರಬೇಕು ಹರಿದಾಸರ ಸಂಗ
5. ಹರಿಕಥಾಮೃತಸೇವೆ ಹರಿದಾಸರಿಗಲ್ಲದೇ - ಇತ್ಯಾದಿ.

# ಸ್ನಾನ ಸಂದೇಶ


ಶ್ರೀಮತಿ. ಕೆ.ವಿ. ಪದ್ಮಾವತಿ

ಜನಸಾಮಾನ್ಯರು ನಡೆಸುವ ಚಟುವಟಿಕೆಗಳಿಗೂ ಆಧ್ಯಾತ್ಮಿಕ ಚೌಕಟ್ಟನ್ನೂ ಬಿಗಿದು ಆಧ್ಯಾತ್ಮಿಕ ಸಾಧನೆಗಳ ಮೆರಗು ತುಂಬುವ ಹಿರಿಮೆ ವೈದಿಕ ಸಂಸ್ಕೃತಿಯದು.

ಪ್ರತಿದಿನ ಅವಶ್ಯವಾಗಿ ನಡೆಸಬೇಕಾದ ಸಂಧ್ಯಾವಂದನೆ, ದೇವಪೂಜೆ ಇತ್ಯಾದಿಗಳಂತೆ 'ನಿತ್ಯಕರ್ಮ'ವಾಗಿಯೂ, ಆಯಾ ಹಬ್ಬಹರಿದಿನಗಳಲ್ಲಿ ತೀರ್ಥಕ್ಷೇತ್ರಗಳಲ್ಲೂ ನಡೆಸಬೇಕಾದ ಶ್ರಾದ್ಧಾದಿಗಳಂತೆ 'ನೈಮಿತ್ತಿಕ ಕರ್ಮ' ವಾಗಿಯೂ ಪರಿಗಣಿತವಾಗಿರುವ ಸ್ನಾನಕ್ಕೆ ಸ್ವಚ್ಛತೆ, ಆರೋಗ್ಯ ಮುಂತಾದ ಲೌಕಿಕ ದೃಷ್ಟಿಯಿಂದಲೂ ಪಾವಿತ್ರ್ಯ ಮಾನಸಿಕ ಪ್ರಸನ್ನತೆ ಇತ್ಯಾದಿ. ಧಾರ್ಮಿಕ, ಆಧ್ಯಾತ್ಮಿಕ ದೃಷ್ಟಿಯಿಂದಲೂ ಮಹತ್ವ ಇದೆ.

ಮಾನಸಿಕ ಅನುಸಂಧಾನ ಹಾಗೂ ಅದಕ್ಕೆ ಪೂರಕವಾಗಿ ವಿಹಿತಗಳಾದ ಮಂತ್ರಗಳ ಪಠಣ ಇವುಗಳಿಂದಾಗಿ ಸ್ನಾನವು ಪಾವಿತ್ರ್ಯ ಪ್ರದವೆನಿಸಬಲ್ಲದು. ಹೊರತು ನೀರು, ಮೃತ್ತಿಕೆ ಇವುಗಳ ಸಂಪರ್ಕ ಮಾತ್ರದಿಂದ ಸ್ನಾನದ ಫಲ ದೊರಕದು. ನಿತ್ಯವೂ ಪ್ರಾತಃಕಾಲದಲ್ಲಿ ಸ್ನಾನ ಮಾಡತಕ್ಕವನನ್ನು ಬಲ, ರೂಪ, ಸ್ವರಶುದ್ಧಿ, ವರ್ಣಶುದ್ಧಿ, ಸುಖಸ್ಪರ್ಶ, ಸುಗಂಧ ಪರಿಶುದ್ಧತೆ, ತೇಜಸ್ಸು, ಸುಕುಮಾರತೆ ಈ ಹತ್ತು ಗುಣಗಳು ತಾವೇ ತಾವಾಗಿ ಸೇವಿಸುತ್ತವೆ ಎಂದು ಮಹಾಭಾರತದಲ್ಲಿ ಹೇಳಿದೆ.

ಮುಖ್ಯಸ್ನಾನ ಹಾಗೂ ಗೌಣಸ್ನಾನ ಎಂಬುದಾಗಿ ಸ್ನಾನ ಎರಡು ಪ್ರಕಾರಗಳನ್ನು ಹೊಂದಿದೆ. ನೀರಿನಿಂದ ನಡೆಸುವ ವಾರುಣ ಸ್ನಾನ ಮುಖ್ಯಸ್ನಾನ ಎನಿಸಿದೆ. ಇದು ಆರು ಪ್ರಭೇದಗಳನ್ನು ಹೊಂದಿದೆ. ಪ್ರಾತಃ ಸ್ನಾನವು ನಿತ್ಯಸ್ನಾನ ಎನಿಸುವುದು. ಗ್ರಹಣ ಕಾಲದಲ್ಲಿ . ಸೂತಕಾದಿಗಳಲ್ಲಿ ನಡೆಸುವ ಸ್ನಾನ 'ನೈಮಿತ್ತಿಕ' ವ್ಯತೀಪಾತ, ಅಮಾವಾಸ್ಯೆ ಮುಂತಾದ ಸಂದರ್ಭಗಳಲ್ಲಿ ನಡೆಸುವ ನದೀ ಸ್ನಾನ ''ಕಾಮ್ಯಸ್ನಾನ' ಧಾರ್ಮಿಕ ಚಟುವಟಿಕೆಗಳನ್ನು ನಡೆಸಲು ಮಾಡುವ ಸ್ನಾನ 'ಕ್ರಿಯಾಂಗ ಸ್ನಾನ' ದೇಹದ ಮಾಲಿನ್ಯವನ್ನು ಪರಿಹರಿಸುವ ಉದ್ದೇಶದಿಂದಲೇ ಅಭ್ಯಂಗ ಪೂರ್ವಕವಾಗಿ ನಡೆಸುವ ಸ್ನಾನ 'ಮಲಕರ್ಷಣ ಸ್ನಾನ' ಎನಿಸಿದೆ. ತೀರ್ಥಾದಿಗಳಲ್ಲಿ ನಡೆಸುವ ಸ್ನಾನ 'ಕ್ರಿಯಾಸ್ನಾನ', ಗೌಣಸ್ನಾನವೂ ಆರು ಪ್ರಭೇದಗಳನ್ನು ಹೊಂದಿದೆ. 'ಆಪೋಹಿಷ್ಠಾ....' ಇತ್ಯಾದಿ ಮಂತ್ರಗಳ ಪಠಣಪೂರ್ವಕವಾಗಿ ನಡೆಸುವ ಸ್ನಾನ ಮಂತ್ರಸ್ನಾನ. ಭಸ್ಮಲೇಪದ ಮೂಲಕ ನಡೆಸುವ ಭಸ್ಮಸ್ನಾನ ಆಗ್ನೇಯ ಸ್ನಾನ. ಬಿಸಿಲಿನಿಂದ ಕೂಡಿದ ಮಳೆಯಿಂದ ನಡೆಸುವ ಸ್ನಾನ ದಿವ್ಯಸ್ನಾನ. ಶ್ರೀ ವಿಷ್ಣುವನ್ನು ಮನಸ್ಸಿನಲ್ಲಿ ಸ್ಮರಿಸುವುದು ಮಾನಸಸ್ನಾನ, ನೀರು ಜೀವವಾಹಿನಿ, ಪ್ರಕೃತಿಗೆ ಹಸಿರನ್ನು ಹೊದಿಸುವ ನೀರು ಬದುಕಿಗೆ ಮೂಲಾಧಾರ. ಶರೀರದ ಕೊಳೆಯನ್ನಷ್ಟೇ ತೊಳೆಯದೆ ಮನಸ್ಸಿಗೆ ಉಲ್ಲಾಸವನ್ನೂ ನೀಡಬಲ್ಲ ಸ್ನಾನವು ನಮ್ಮ ನಿತ್ಯದ ಪ್ರಥಮ ಕಾರ್ಯಗಳಲ್ಲಿ ಪ್ರಮುಖವಾದುದು.



ನದಿ,ಕೆರೆ, ಬಾವಿಗಳಲ್ಲಿ ಸ್ನಾನ ಮಾಡಲು ಸಾಮರ್ಥ್ಯ ವಿಲ್ಲದಿದ್ದಲ್ಲಿ ಬಿಸಿನೀರಿನಿಂದಾದರೂ ಸ್ನಾನ ಮಾಡಬೇಕು. ಕಂಠಸ್ನಾನವನ್ನಾದರೂ, ಕಟಿಸ್ನಾನವನ್ನಾದರೂ, ಪಾದಸ್ನಾನ ವನ್ನಾದರೂ ಮಾಡಬೇಕು. ಒದ್ದೆಬಟ್ಟೆಯಿಂದ ಮೈ ಒರೆಸಿ ಕೊಳ್ಳುವ ಕಾಪಿಲಸ್ನಾನವನ್ನಾಗಲಿ ಜಲವನ್ನು ಪ್ರೋಕ್ಷಿಸುವ ಪ್ರೋಕ್ಷಣ ಸ್ನಾನವನ್ನಾಗಲಿ ನಡೆಸಬೇಕು.

ಬಿಸಿನೀರಿನ ಸ್ನಾನ ಮತ್ತೊಬ್ಬರಿಗೆ ಸೇರಿದ ನೀರಿನ ಸ್ನಾನ ದೈಹಿಕಶುದ್ಧಿಯನ್ನು ತಂದುಕೊಡಬಲ್ಲದೇ ಹೊರತು ಆ ಸ್ನಾನದಿಂದ ಶಾಸ್ತ್ರದಲ್ಲಿ ಹೇಳಿರುವ ಫಲ ದೊರಕದು. ನದಿ, ತೀರ್ಥ, ಸರೋವರಗಳಲ್ಲಿ ನಡೆಸುವ ಸ್ನಾನದಿಂದಷ್ಟೆ ಆ ಫಲ ದೊರಕಬಲ್ಲದು. ಸೂರ್ಯೋದಯಕ್ಕಿಂತ ಮೊದಲಿನ ನಾಲ್ಕು ಗಳಿಗೆಗಳ ಕಾಲ 'ಅರುಣೋದಯ ಕಾಲ' ಎನಿಸಿದೆ. ಆಗ ನೀರು ಗಂಗೆಯ ನೀರಿನಂತೆ ಪವಿತ್ರವಾಗಿದ್ದು ಯತಿಗಳಿಗೆ, ಸಾಧನಾ ಕ್ಷೇತ್ರದಲ್ಲಿ ಪ್ರಯತ್ನಶೀಲರಾದ ಸಾಧಕರಿಗೆ ವಿಹಿತವಾದ ಸ್ನಾನ ಕಾಲವಾಗಿದೆ.

ವಾನಪ್ರಸ್ಥರಿಗೆ ಹೇಗೋ ಹಾಗೆ ಗೃಹಸ್ಥರಿಗೆ ಪ್ರಾತಃ ಕಾಲ ದಲ್ಲೂ ಮಧ್ಯಾಹ್ನದಲ್ಲೂ ಸ್ನಾನವು ವಿಹಿತವಾಗಿದೆ. ಯತಿಗಳಿಗೆ ಮೂರು ಕಾಲದಲ್ಲೂ, ಬ್ರಹ್ಮಚಾರಿಗೆ ಬೆಳಿಗ್ಗೆ ಒಮ್ಮೆ ಮಾತ್ರ ಸ್ನಾನ ನಡೆಸಬೇಕು.

ಆರೋಗ್ಯಕ್ಕೆ ಪುಷ್ಟಿ ನೀಡುವ ಸ್ನಾನದ ಭೌತಿಕ ಪ್ರಯೋಜನಗಳನ್ನು 'ಸುಶ್ರುತ ಸಂಹಿತೆ' ಹೀಗೆ ಸಂಗ್ರಹಿಸಿದೆ. 'ಸ್ನಾನದಿಂದ ನಿದ್ರೆ ದೂರವಾಗುತ್ತದೆ; ದಾಹ ಪರಿಹಾರವಾಗು ತ್ತದೆ. ಬೆವರು, ತುರಿಕೆ, ತೃಷೆಗಳು ಮಾಯವಾಗುತ್ತದೆ. ಆಲಸ್ಯ, ಪಾಪ ದೂರವಾಗುತ್ತದೆ. ಮನಸ್ಸಿಗೆ ನೆಮ್ಮದಿ, ಪುರುಷತ್ವವು ಅಭಿವೃದ್ಧಿಯಾಗುತ್ತದೆ. ನೀರಿಗೆ ಅಸಾಮಾನ್ಯವಾದ ವೈದ್ಯಕೀಯ ಗುಣವಿದೆ. ಮಧುಮೇಹ, ಸಂಧಿವಾತವಂತಹ ಕಾಯಿಲೆಗಳಿಗೆ ಚಿಕಿತ್ಸೆ ನೀಡುವ ದಿನನಿತ್ಯದ ಸ್ನಾನ ಅವಶ್ಯಕ. ಅಷ್ಟೇ ಅಲ್ಲದೆ ವ್ಯಸನಿಗಳನ್ನು ಸಾಮಾನ್ಯ ಸ್ಥಿತಿಗೆ ತರುವಲ್ಲಿ ಮಾನಸಿಕ ಆರೋಗ್ಯವನ್ನು ಕಾಪಾಡುವಲ್ಲಿ ಸ್ನಾನದ ಪಾತ್ರ ಮಹತ್ವದ್ದು. ಸ್ನಾನ ಸ್ವತಂತ್ರ ಸಾಧನೆ ಎನಿಸಿ ಕೆಲವು ಮಾಸಗಳಲ್ಲಿ, ಹಬ್ಬದಿನಗಳಲ್ಲಿ ವಿಶೇಷವಾಗಿ ವಿಹಿತವಾಗಿದೆ.

**ಪೌಷಮಾಸದ ಶುಕ್ಲ ಏಕಾದಶೀ, ದ್ವಾದಶಿಯಂದೋ ಹುಣ್ಣಿಮೆಯಂದೋ ಪ್ರಾರಂಭಿಸಲ್ಪಟ್ಟ ಮಾಘಸ್ನಾನವನ್ನು ಮಾಘ ಮಾಸದ ದ್ವಾದಶಿಯಂದೋ ಹುಣ್ಣಿಮೆಯಂದೋ ಸಮಾಪ್ತಿಗೊಳಿಸಬೇಕು, ಅಥವಾ ಮಕರ ಸಂಕ್ರಮಣದಿಂದ ಪ್ರಾರಂಭಿಸಿ ಕುಂಭ ಸಂಕ್ರಮಣದವರೆಗೆ ಮಾಘಸ್ನಾನ ನಡೆಸಬೇಕು.**



## ಮಾಘಸ್ನಾನ

ಪೌಷಮಾಸದ ಶುಕ್ಲ ಏಕಾದಶೀ, ದ್ವಾದಶಿಯಂದೋ ಹುಣ್ಣಿಮೆಯಂದೋ ಪ್ರಾರಂಭಿಸಲ್ಪಟ್ಟ ಮಾಘಸ್ನಾನವನ್ನು ಮಾಘ ಮಾಸದ ದ್ವಾದಶಿಯಂದೋ ಹುಣ್ಣಿಮೆಯಂದೋ ಸಮಾಪ್ತಿಗೊಳಿಸಬೇಕು, ಅಥವಾ ಮಕರ ಸಂಕ್ರಮಣದಿಂದ ಪ್ರಾರಂಭಿಸಿ ಕುಂಭ ಸಂಕ್ರಮಣದವರೆಗೆ ಮಾಘಸ್ನಾನ ನಡೆಸಬೇಕು.ಸಮುದ್ರ ಸ್ನಾನ ಅತಿ ಪ್ರಶಸ್ತವಾದುದು. ಮಹಾನದಿ ಗಳಲ್ಲಿ ಮೀಯುವಾಗ ಪ್ರಯಾಗ ಸ್ಮರಣೆ ನಡೆಸುತ್ತಿದ್ದರೆ ಗಂಗೆ ಯಲ್ಲಿ ಮುಳುಗಿ ಸ್ನಾನ ಮಾಡಿದಷ್ಟು ಪುಣ್ಯ ಬರುವುದು.

ಸ್ನಾನ ನಡೆಸುವಾಗ ಪುರುಷಸೂಕ್ತ, ಅಘಮರ್ಷಣ ಸೂಕ್ತ ಇತ್ಯಾದಿ ಮಂತ್ರ ಪ್ರತಿಪಾದ್ಯನನ್ನಾಗಿ ಪುಂಡರೀಕಾಕ್ಷ ನನ್ನು ಧ್ಯಾನಿಸಬೇಕು. ಭಕ್ತ ಅಕ್ರೂರನಿಂದ ಈ ವಿಷಯದಲ್ಲಿ ಪ್ರಾತ್ಯಕ್ಷಿಕೆ ಒದಗಿಸಲಾಗಿದೆ. ಬಲರಾಮ ಮತ್ತು ಕೃಷ್ಣರನ್ನು ನಂದವ್ರಜದಿಂದ ಮಧುರೆಗೆ ರಥದ ಮೂಲಕ ಕೊಂಡೊ ಯ್ಯುತ್ತಿದ್ದ ಸಂದರ್ಭ.ದಾರಿಯಲ್ಲಿ ಕಾಳಿಂದೀನದಿ ದೊರಕು ವುದು, ರಾಮ - ಕೃಷ್ಣರು ಇಳಿದು ಆಚಮನ ನಡೆಸಿ ರಥ ಏರಿ ಕುಳಿತುಕೊಳ್ಳುವರು. ಅಕ್ರೂರ ಅವರ ಅನುಮತಿ ಪಡೆದು ಸ್ನಾನದಲ್ಲಿ ತೊಡಗುವನು.ರಥದಲ್ಲಿ ಕುಳಿತಿದ್ದ ಬಲರಾಮ ಶೇಷನಾಗಿಯೂ, ಶ್ರೀಕೃಷ್ಣ ಶೇಷಶಾಯಿನಾರಾಯಣ ನಾಗಿಯೂ, ನೀರಿನಲ್ಲಿ ಕಾಣಿಸುವರು. ಆ ದಿವ್ಯ ದರ್ಶನದಿಂದ

ರೋಮಾಂಚನಗೊಂಡ ಅಕ್ರೂರ ಭಕ್ತ್ಯುದ್ರೇಕಕ್ಕೊಳಗಾದ ಪುಂಡರೀಕಾಕ್ಷನನ್ನು ಪುರುಷಸೂಕ್ತಾದಿ ಪ್ರತಿಪಾದ್ಯನನ್ನಾಗಿ ಸ್ತುತಿಸುತ್ತ ಸ್ನಾನ ನಡೆಸುವವನು.

ಭಾಗವತದ ಸುಮಾರು ಮೂವತ್ತು ಶ್ಲೋಕಗಳ ವ್ಯಾಪ್ತಿಯಲ್ಲಿ ಬೆಳಕು ಚೆಲ್ಲಲಾದ ಅಕ್ರೂರನ ಈ ಸ್ನಾನದ ಪ್ರಾತ್ಯಕ್ಷಿಕೆ ಸಾಧಕರಿಗೆ ಸ್ಫೂರ್ತಿದಾಯಕವೆನಿಸಬಲ್ಲದು. ನಮ್ಮ ದೇಹಕ್ಕೆ ನಡೆಸುವ ಸ್ನಾನವೂ ದೇಹದೊಳಗೆ ವಿರಾಜಿಸುತ್ತಿರುವ ಭಗವಂತನಿಗೆ ಸಲ್ಲಿಸುವ ಅಭಿಷೇಕ. ಇದೇ ಸ್ನಾನ ಸಂದೇಶದ ಸಾರ.

ಈ ನೆಲದ ಆಧ್ಯಾತ್ಮಗುಣ, ವಿಶಿಷ್ಟ ಆಚರಣೆಗಳೇ ಜನಜೀವನಕ್ಕೆ ಅನಿರ್ವಚನೀಯ ಆನಂದದ ಜತೆಗೆ ಮೋಕ್ಷದ ದಾರಿಯನ್ನೂ ದರ್ಶಿಸುತ್ತವೆ. ಹಲವು ಪರ್ವಗಳ ಈ ನಾಡಿನಲ್ಲಿ ಮಾಘಸ್ನಾನದ ಸಂಭ್ರಮ. ಸಾರ್ಥಕತೆಯೇ ಬೇರೆ, ದೇಶದ ಮಹಾನದಿಗಳ ತೀರದಲ್ಲಿ ತಿಂಗಳದುದ್ದಕ್ಕೂ ನಡೆಯುವ ಈ ಉತ್ಸವದಲ್ಲಿ ಜನರು ಪ್ರವಾಹದಂತೆ ಹರಿದು ಬರುತ್ತಾರೆ. ಕಾರಣ, ಮಾಘಸ್ನಾನ, ಸಮಸ್ತ ಪಾಪಗಳನ್ನು ನಾಶಮಾಡುತ್ತದೆ ಎಂಬ ಬಲವಾದ ನಂಬಿಕೆ, ಆಸ್ಥೆಯಿಂದ, ದೇಶಾದ್ಯಂತ ನಡೆಯುವ ಈ ಮಾಘಸ್ನಾನದ ವೈಶಿಷ್ಟಗಳ ಒಂದು ಪಕ್ಷಿನೋಟ.

ಅನ್ಯಮಾಸಗಳಲ್ಲಿ ಜಪ, ತಪ ಹಾಗೂ ದಾನದಿಂದ ಭಗವಾನ್ ವಿಷ್ಣು ಎಷ್ಟು ಪ್ರಸನ್ನನಾಗುತ್ತಾನೋ ಅದಕ್ಕಿಂತ ಹೆಚ್ಚು ಪ್ರಸನ್ನ ಆತ ಮಾಘಸ್ನಾನದಿಂದಾಗುತ್ತಾನೆ. ಹಾಗಾಗಿ, ಈ ಇಡೀ ಮಾಸದಲ್ಲಿ ಕೈಗೊಳ್ಳುವ ಸ್ನಾನ, ದಾನ ಪೂಜಾ ಕೈಂಕರ್ಯಗಳಿಗೆ ವಿಶೇಷ ಮಹತ್ವವಿದೆ ಎನ್ನುತ್ತದೆ ಪದ್ಮ ಪುರಾಣ. ಭಗವಂತನನ್ನು ಓಲೈಸಿಕೊಳ್ಳುವ ಅತ್ಯಂತ ಸುಲಭ ವಿಧಾನ ಮಾಘಮಾಸದ ಪವಿತ್ರಸ್ನಾನ ಎಂದು ಅನೇಕ ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಮಾಘಮಾಸಕ್ಕೆ ಹಿಂದೂ ಸಂಸ್ಕೃತಿಯಲ್ಲಿ ತುಂಬ ಪ್ರಾಶಸ್ತ್ಯ.ಮಾಘಮಾಸವು ವಸಂತ ಋತುವಿನ ಪ್ರಾರಂಭ ಕಾಲ ಎನ್ನಬಹುದು. ಆಗ ತಾನೆ ಮಾರ್ಗಶೀರ್ಷದ ಚಳಿಯು ತಗ್ಗಲಾರಂಭಿಸಿದ್ದು, ಸಂಕ್ರಾಂತನಾದ ಸೂರ್ಯನು ತನ್ನ ಬೆಚ್ಚನೆಯ ರಶ್ಮಿಗಳನ್ನು ಹೆಚ್ಚುಹೆಚ್ಚಾಗಿ ಚಾಚುತ್ತ, ದಿನಗಳ ಅವಧಿಯನ್ನು ಹೆಚ್ಚಿಸುತ್ತ ಹೋಗುವ ಉತ್ತರಾಯಣ ಪುಣ್ಯಕಾಲದ ಪ್ರಾರಂಭದ ಭಾಗ ಇದು.ಈ ಮಾಸದ ಅಧಿದೇವನು ಸೂರ್ಯ. ಇದನ್ನು ಮಾಧವನ ಮಾಸ ಎಂದು ಕರೆದರೂ, ಅಲ್ಲಿ ಮಾಧವನು ಸೂರ್ಯನಾರಾಯಣನಾಗಿಯೇ ಕಂಗೊಳಿಸುವನು. ಮಾಘ ಭಾನುವಾರಗಳು, ತೀರ್ಥಸ್ನಾನ, ಧ್ಯಾನ, ಜಪ, ತಪ, ದಾನ, ಧರ್ಮಗಳಿಗೆ ತುಂಬ ಪ್ರಶಸ್ತ ಎಂದು ಆಸ್ತಿಕರು ನಂಬುತ್ತಾರೆ. ಮಾಘಮಾಸದ ಹುಣ್ಣಿಮೆಗೆ ಧಾರ್ಮಿಕ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯವಿದೆ. ಈ ದಿನವಿಡೀ ಮಹಾವಿಷ್ಣುವು ಚಿನ್ಮಯನಾಗಿ ಗಂಗಾ ಜಲದಲ್ಲಿ ವಾಸಿಸುತ್ತಾನೆಂದು ನಂಬಿಕೆ.ಹಾಗಾಗಿ ಗಂಗಾ ಸ್ನಾನ ಅಥವಾ ಗಂಗಾಸ್ಪರ್ಶವನ್ನಾದರೂ ಮಾಡುವುದು ಪದ್ಧತಿ.

ನದಿಗಳ ತಟಗಳಲ್ಲಿನ ಉತ್ತರಭಾರತದ ಕ್ಷೇತ್ರಗಳಲ್ಲಿ ಗಂಗಾದಿ ತೀರ್ಥಗಳ ಸ್ನಾನವು ಪ್ರಸಿದ್ಧವಾಗಿರುವಂತೆ, ದಕ್ಷಿಣ ಭಾರತದಲ್ಲಿ ಸತ್ಯನಾರಾಯಣಪೂಜೆ, ಕಥಾ ಶ್ರವಣಗಳು ಹೆಚ್ಚು ಪ್ರಸಿದ್ಧ ಪ್ರಯಾಗಕ್ಷೇತ್ರದಲ್ಲಿ ಆಚರಿಸಲಾಗುವ ಮಾಘ - ಉತ್ಸವದಲ್ಲಿ ಜನಸ್ತೋಮವೇ ನೆರೆಯುತ್ತದೆ.


## ಡಯಲ್ ಯುವರ್ ಇ.ಓ.

## ಯಾತ್ರಿಕ ಭಕ್ತರಲ್ಲಿ..... ವಿನಂತಿ

**ತಿರುಪತಿ ತಿರುಮಲೆಯಲ್ಲಿ ತಮ್ಮ ಅನುಭವಕ್ಕೆ ಬಂದ ಕುಂದು ಕೊರತೆಗಳ ಬಗ್ಗೆ ಹೆಚ್ಚು - ಕಡಿಮೆಗಳ ಬಗ್ಗೆ-ಸಲಹೆ ಸೂಚನೆಗಳನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೇರವಾಗಿ ನೀಡಬಹುದು. ಅದಕ್ಕಾಗಿ ಪ್ರತಿ ತಿಂಗಳ ಮೊದಲ ಶುಕ್ರವಾರ ಬೆಳಗ್ಗೆ 8-30 ರಿಂದ 9-30 ಗಂಟೆಯವರೆಗೆ ತಾವು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳೊಡನೆ ದೂರವಾಣಿಯಲ್ಲಿ ಮಾತನಾಡಬಹುದು.**

ದೂರವಾಣಿ ಸಂಖ್ಯೆ -0877-2263261

ಯಾತ್ರಿಕರ ಸೌಕರ್ಯಗಳನ್ನು ಹೆಚ್ಚಿಸಲು

ತಮ್ಮ ಯಾತ್ರೆ ಸುಲಭತರವಾಗಿ ಕೈಗೂಡಲು - ಮಾತನಾಡಿ.

# ವಾತ ರೋಗಗಳಿಗೆ ಶ್ರೇಷ್ಠ ಔಷಧ ಅಜ್ವಾನ



ಅಜ್ವಾನ ಸರ್ವೇಸಾಮಾನ್ಯವಾಗಿ ಲಭಿಸುವ ಆಹಾರ ಪದಾರ್ಥಗಳ, ಪಾಕಶಾಲೆ ತಯಾರಿಕೆಗಳಲ್ಲಿ ಬಳಸುವ ಶಕ್ತಿಯುತವಾದ ಒಂದು ಆಹಾರ ಔಷಧ ದ್ರವ್ಯ. ಇದನ್ನು ತೆಲುಗಿನಲ್ಲಿ 'ವಾಮು' 'ಓಮು' ಎಂದು ಹಲವು ಪ್ರಾಂತ್ಯಗಳಲ್ಲಿ ಕರೆಯುವುದುಂಟು.

ಸಂಸ್ಕೃತದಲ್ಲಿ ಇದನ್ನು ಹಲವಾರು ಹೆಸರುಗಳಿಂದ ಕರೆಯುತ್ತಾರೆ. 'ಯವ' ಎಂಬ ಧಾನ್ಯದಂತಿರುವುದರಿಂದ 'ಯವಾನಿ' ಎಂದೂ, ಮೇಕೆ, ಕುದುರೆಗಳ ಪ್ರೀತಿಪಾತ್ರವಾಗಿರುವುದರಿಂದ 'ಅಜಮೋದ' ಎಂದೂ, ಅಗ್ನಿ ಉದ್ದೀಪನದ ಗುಣವಿರುವುದರಿಂದ 'ಅಗ್ನಿವರ್ಧಿನಿ' ಎಂದೂ ನೋವುಗಳನ್ನು ಶಮನಗೊಳಿಸುವುದರಿಂದ ಶೂಲಹಂತ್ರಿ ಎಂದೂ ಇತ್ಯಾದಿ ಹೆಸರುಗಳು ಇದಕ್ಕುಂಟು.

ಈ ಅಜ್ವಾನವನ್ನು ಆಂಗ್ಲಭಾಷೆಯಲ್ಲಿ carum seeds, ajwain seeds, bishops seeds ಎಂದೂ ವ್ಯವಹರಿಸುತ್ತಾರೆ.

ಏಪಿಯೇಸಿ ಎಂಬ ಸಸ್ಯ ಕುಟುಂಬಕ್ಕೆ ಸೇರಿದ ಈ ಅಜ್ವಾನದ ಶಾಸ್ತ್ರೀಯ ನಾಮಧೇಯ carum capticum

ಈ ಅಜ್ವಾನದಲ್ಲಿರುವ ಔಷಧ ಗುಣಗಳನ್ನು ಪ್ರಸ್ತುತ ಈಗ ತಿಳಿದುಕೊಳ್ಳೋಣ.

ಅಜ್ವಾನವನ್ನು ಚೂರ್ಣರೂಪದಲ್ಲಿ ಬಳಸುವುದಕ್ಕಾಗಿ ಅದನ್ನು ಕುಟ್ಟಿ ಪುಡಿ ಮಾಡಿಟ್ಟುಕೊಳ್ಳಬೇಕು.

### ದದ್ದುಗಳಿಗೆ

50 ಗ್ರಾಂ ಅಜ್ವಾನದ ಪುಡಿಯನ್ನು, 100 ಗ್ರಾಂ ಬೆಲ್ಲದ ಪುಡಿಯಲ್ಲಿ ಕಲಸಿ ನೆನೆಸಿಟ್ಟುಕೊಂಡು ಮುಂಜಾನೆ, ಸಂಜೆ ಅರ್ಧ ಟೀ ಚಮಚ ಪುಡಿಯನ್ನು ಚಪ್ಪರಿಸಿ ಸೇವಿಸಬೇಕು.

### ಚೆನ್ನಾಗಿ ಹಸಿವೆಯಾಗಲು

50 ಗ್ರಾಂ ಅಜ್ವಾನದ ಪುಡಿ, 50 ಗ್ರಾಂ ಸೈಂಧವ ಲವಣ ಪುಡಿ ಅಥವಾ ಉಪ್ಪು ಕಲಸಿಟ್ಟುಕೊಂಡು ದಿನವೂ ಒಂದು ಬಾರಿ ಅನ್ನದ ಮೊದಲ ತುತ್ತಿನಲ್ಲಿ 1-2 ಗ್ರಾಂ ಪುಡಿ ಕಲಸಿ ತಿನ್ನಬೇಕು. ಇದರಿಂದ ಜಠರಾಗ್ನಿ ಪ್ರಚೋದನೆಗೊಂಡು ಚೆನ್ನಾಗಿ ಹಸಿವು ಮೂಡುತ್ತದೆ.

### ಅಪಾನವಾಯು ಸಮಸ್ಯೆಗೆ

100 ಗ್ರಾಂ ಅಜ್ವಾನದ ಪುಡಿಗೆ 25 ಗ್ರಾಂ ಕರಿಯುಪ್ಪು ಕಲಸಿಟ್ಟುಕೊಂಡು ದಿನವೂ ಎರಡು ಬಾರಿ ಭೋಜನಾನಂತರ 2-3 ಗ್ರಾಂ ಪುಡಿಯನ್ನು 100 ಮಿ.ಲೀ. ನೀರಿನಲ್ಲಿ ಕಲಸಿ ಸೇವಿಸಬೇಕು.

### ಮಲಬದ್ಧತೆಯಿಂದುಂಟಾಗುವ ಕೀಲು ನೋವುಗಳಿಗೆ

ಅಜ್ವಾನ, ಕಾರ್ಜಿಕಾಯಿ, ತುಂಡುಗಳು, ಶುಂಠಿ ಪುಡಿಯನ್ನು ಒಂದೊಂದು 50 ಗ್ರಾಂನಂತೆ ಕಲಸಿಟ್ಟುಕೊಂಡು ದಿನವೂ ಎರಡೂ ಬಾರಿ ಬಾರಿಯೊಂದಕ್ಕೆ ಅರ್ಧ ಟೀ ಚಮಚ ಪುಡಿಯನ್ನು 100 ಮಿ.ಲೀ. ಉಗುರುಬೆಚ್ಚಗಿನ ನೀರಲ್ಲಿ ಕಲಸಿ ಸೇವಿಸಬೇಕು.

ಮೂಲ. ಡಾ॥ ಸಿ. ಮಧುಸೂದನ ಶರ್ಮ
- ಅನುವಾದ : ಶ್ರೀಮತಿ.

### ಮೈ - ಕೈನೋವಿಗೆ

25 ಗ್ರಾಂ ಅಜ್ವಾನವನ್ನು 100 ಮಿ.ಲೀ. ಕೊಬ್ಬರಿ ಎಣ್ಣೆಯಲ್ಲಿ ಕಲಸಿ 2-3 ಗಂಟೆ ನೆನೆಸಿ, ಅಜ್ವಾನ ಕಪ್ಪಾಗುವವರೆಗೆ ಕುದಿಸಿ, ಕೆಳಗಿಳಿಸಿ ಬಿಸಿಯಾರಿದ ನಂತರ ಶೋಧಿಸಿಟ್ಟುಕೊಂಡು ದಿನವೂ 1-2 ಸಾರಿ ಮೇಲೆ ಹಚ್ಚಿ ನೋವಿರುವ ಭಾಗದಲ್ಲಿ ತಿಕ್ಕಿದಲ್ಲಿ ಕೀಲು ನೋವು, ಸೊಂಟ ನೋವು, ಮೊಣಕಾಲು ನೋವು, ಭುಜದ ನೋವು, ಸಂದಿ ನೋವು ಮುಂತಾದ ಕೀಲು ನೋವುಗಳನ್ನು ನಾವು ಹೋಗಲಾಡಿಸಬಹುದು.

### ಅಂಗೈ ಅಂಗಾಲಿನ ಅಧಿಕ ಬೆವೆತಕ್ಕೆ

ದಿನವೂ ಒಂದು ಸಾರಿ 1-2 ಗ್ರಾಂ ಅಜ್ವಾನ ಪುಡಿ, ಒಂದು ಟೀ ಚಮಚ ಎಳ್ಳೆಣ್ಣೆ ಕಲಸಿ ಸೇವಿಸುತ್ತಿರಬೇಕು.

### ಅಜೀರ್ಣಕ್ಕೆ

ಅಜ್ವಾನ, ಶುಂಠಿ, ಸೈಂಧವ ಲವಣ, ಕರಿಮೆಣಸಿನ ಚೂರ್ಣ ಒಂದೊಂದು 25 ಗ್ರಾಂ ನಷ್ಟು ಕಲಸಿಟ್ಟುಕೊಂಡು ನಿತ್ಯ ಎರಡು ಬಾರಿ ಊಟದ ನಂತರ 1-2 ಗ್ರಾಂ ಪುಡಿಯನ್ನು 50 ಮಿ.ಲೀ. ನೀರಿನಲ್ಲಿ ಕಲಸಿ ಸೇವಿಸುತ್ತಿದ್ದರೆ ತಿಂದ ಆಹಾರ ಚೆನ್ನಾಗಿ ಜೀರ್ಣಗೊಂಡು ಉದರ ಸಂಬಂಧಿ ಕಾಯಿಲೆಗಳು ಬರದಂತೆ ಕಾಪಾಡುತ್ತದೆ.

### ಗ್ಯಾಸ್ಟ್ರಿಕ್ ಟ್ರಬಲ್‌ಗೆ

ಅಜ್ವಾನ, ಸೋಂಪು, ಕರಿಯುಪ್ಪು, ಮುಂತಾದ ಚೂರ್ಣಗಳನ್ನು ಒಂದೊಂದು

25 ಗ್ರಾಂ ನಂತೆ ಕಲಿಸಿಟ್ಟು ಕೊಂಡು ಮುಂಜಾನೆ - ಸಂಜೆ ಬಾರಿಯೊಂದಕ್ಕೆ 1 ಗ್ರಾಂ ಔಷಧಿಯನ್ನು 50 ಮಿ.ಲೀ. ಉಗುರು ಬೆಚ್ಚಗಿನ ನೀರಿನಲ್ಲಿ ಕಲಿಸಿ ಸೇವಿಸುವುದರಿಂದ ಹೊಟ್ಟೆನೋವು ಹೊಟ್ಟೆಯುರಿ, ಹೊಟ್ಟೆಯುಬ್ಬರ, ಹೊಟ್ಟೆದೋಷಗಳು, ಅಜೀರ್ಣಗಳು ಮುಂತಾದ ಜೀರ್ಣಾಂಗ ದೋಷಗಳು ಕಡಿಮೆಯಾಗುತ್ತವೆ.

**ಮುಖದ ಮೊಡವೆಗಳಿಗೆ**

ದಿನವೂ ಒಂದು ಬಾರಿ ಅರ್ಧ ಟೀ ಸ್ಪೂನ್ ಅಜ್ವಾನದ ಪುಡಿಯನ್ನು ಒಂದು ಟೀ ಚಮಚ ಮೊಸರಿನಲ್ಲಿ ಕಲಿಸಿ, ಮುಖಕ್ಕೆ ಹಚ್ಚಿ ಒಂದು ಗಂಟೆಯ ನಂತರ ಮುಖವನ್ನು ಉಗುರು ಬೆಚ್ಚಗಿನ ನೀರಿನಿಂದ ತೊಳೆಯುತ್ತಿರಬೇಕು.

**ಸಾಮಾನ್ಯ ಶೀತಕ್ಕೆ**

ದಿನವೂ ಎರಡೂ ಬಾರಿ ಒಂದು ಬಾಣಲೆ/ಹೆಂಚಿನಲ್ಲಿ ಹಿಡಿಸುವಷ್ಟು ಅಜ್ವಾನವನ್ನು ಹಾಕಿ ಬಿಸಿಮಾಡಿ, ಬರುವ ಹೊಗೆಯನ್ನು ತೆಗೆದುಕೊಳ್ಳಬೇಕು.

**ಹೊಟ್ಟೆ ದುಬ್ಬರಕ್ಕೆ**

1-2 ಗ್ರಾಂ ಅಜ್ವಾನವನ್ನು ವೀಳ್ಯದೆಲೆಯಲ್ಲಿಟ್ಟು ಮಡಿಚಿ ಅಗೆದು ತಿನ್ನಬೇಕು.

**ಹೊಟ್ಟೆನೋವಿನ ವಿಕಾರಗಳು**

5 ಗ್ರಾಂ ಅಜ್ವಾನವನ್ನು ಕಪ್ಪಾಗಿಸಿ 200 ಮಿ.ಲೀ. ನೀರಿನಲ್ಲಿ ಕಲಿಸಿ 100 ಮಿ.ಲೀ.ನೀರು ಉಳಿಯುವಂತೆ ಮರಳಿಸಿ, ಇಳಿಸಿ, ಬಿಸಿಯಾರಿದ ನಂತರ ಶೋಧಿಸಿ 2 ಅಥವಾ 3 ಭಾಗಗಳನ್ನಾಗಿ ಮಾಡಿ 2-3 ಸಾರಿ ಸೇವಿಸಬೇಕು.

**ಆಯಾಸಕ್ಕೆ**

ಅಜ್ವಾನವನ್ನು ಬಿಸಿ ಮಾಡಿ ಬಟ್ಟೆಯಲ್ಲಿ ಗಂಟು ಕಟ್ಟಿ ಎದೆಯ ಮೇಲೆ ಕಾವು ಕೊಡಬೇಕು.ಹಾಗೆಯೇ 200. ಮಿ.ಲೀ. ನೀರಿನಲ್ಲಿ ಎರಡು ಟೀ ಚಮಚ ಅಜ್ವಾನವನ್ನು ಮರಳಿಸಿ ಬರುವ ಹಬೆಯನ್ನು ತೆಗೆದುಕೊಳ್ಳುತ್ತಿರಬೇಕು.

ತೆಳುವಾದ ಬಟ್ಟೆಯಲ್ಲಿ ಹಿಡಿಸುವಷ್ಟು ಅಜ್ವಾನವನ್ನು ಮೂಟೆಗಟ್ಟಿ ವಾಸನೆಯನ್ನು ತೋರಿಸುತ್ತಾ ಇದ್ದಲ್ಲಿ ಚಿಕ್ಕ ಮಕ್ಕಳಲ್ಲಿ ಮೂಗು ಕಟ್ಟುವುದರಿಂದ ಉಸಿರು ತೆಗೆದು ಕೊಳ್ಳುವುದು ಕಷ್ಟವಾಗುವ ಸಮಸ್ಯೆ ಕಡಿಮೆಯಾಗುತ್ತದೆ.

**ಗಂಟಲು ನೋವು ಹಾಗೂ ಕೆರೆತಕ್ಕ**

ನಿತ್ಯ ಎರಡು ಬಾರಿ ಒಂದು ಬಾರಿಗೆ 200 ಮಿ.ಲೀ. ನೀರಿನಲ್ಲಿ ಒಂದು ಟೀ ಸ್ಪೂನ್ ಅಜ್ವಾನ ಹಾಕಿ ಸ್ವಲ್ಪ ಹೊತ್ತು ನೆನೆಸಿ 100 ಮಿ.ಲೀ. ನೀರು ಉಳಿಯುವಂತೆ ಮರೆಳಿಸಿ ಕೆಳಗಿಳಿಸಿ ಉಗುರುಬೆಚ್ಚಗಿರುವಾಗ ಶೋಧಿಸಿ ಒಂದು ಗ್ರಾಂ ಉಪ್ಪು ಕಲಿಸಿ ಮುಕ್ಕಳಿಸುತ್ತಿರಬೇಕು.



**ಕಿವಿನೋವಿಗೆ**

30 ಮಿ.ಲೀ ಹಾಲಿನಲ್ಲಿ 2-3 ಗ್ರಾಂ ಅಜ್ವಾನ ಪುಡಿ ಹಾಕಿ ಕಲಿಸಿ ಮರಳಿಸಿ, ಬಿಸಿಯಾರಿದ ನಂತರ ಸೋಸಿ ನಿತ್ಯ 2-3 ಬಾರಿ 3 ರಿಂದ 4 ಹನಿ ನೋವಾದ ಕಿವಿಗೆ ಹಾಕಬೇಕು. ಔಷಧಿಯನ್ನು ದಿನವೂ ತಯಾರಿಸಿ ಬಳಸಬೇಕು.

40 ಮಿ.ಲೀ. ಎಣ್ಣೆಯಲ್ಲಿ ಅರ್ಧಟೀ ಚಮಚ ಅಜ್ವಾನ ಒಂದೆರಡು ಬೆಳ್ಳುಳ್ಳಿ ಎಸಳುಗಳನ್ನು ಜಜ್ಜಿ ಹಾಕಿ ಕುದಿಸಿ ಅವು ಕೆಂಪಾಗುವವರೆಗೆ ಕಾಯಿಸಿ, ಬಿಸಿಯಾರಿದ ಬಳಿಕ ಶೋಧಿಸಿ ದಿನವೂ ಎರಡೂ - ಮೂರು ಬಾರಿ ಬಾರಿಯೊಂದಕ್ಕೆ 2-3 ಹನಿ ನೋವಿರುವ ಕಿವಿಗೆ ಹಾಕುತ್ತಾ ಇದ್ದಲ್ಲಿ ಕಿವಿನೋವು, ಕಿವಿ ಪೋಟು ಬರುವುದು, ಕಿವಿಯಿಂದ ಕೀವು ಸೋರುವುದು, ಕಿವಿಯಲ್ಲಿ ತಿಂಡಿಯಂತಹ ಕಿವಿಗೆ ಸಂಬಂಧಿಸಿದ ಸಮಸ್ಯೆಗಳು ದೂರಾಗುತ್ತವೆ.

**ಮೊಡವೆಗಳಿಗೆ**

ಅಜ್ವಾನ, ಅರಸಿನ ಪುಡಿ ಒಂದೊಂದು 5 ಗ್ರಾಂನಂತೆ ಕಲಿಸಿಟ್ಟು ಕೊಂಡು ದಿನವೂ ಒಂದೆರಡು ಬಾರಿ ಹಿಡಿಸುವಷ್ಟು ನೀರು ಅಥವಾ ಕೊಬ್ಬರಿಯೆಣ್ಣೆಯಲ್ಲಿ ಕಲಿಸಿ ಮೊಡವೆಗಳ ಮೇಲೆ ಲೇಪಿಸುತ್ತಿದ್ದರೆ ಅದರಿಂದುಂಟಾಗುವ ನೋವು, ಬಾಧೆ, ಸಳೆತ, ಉರಿ, ದದ್ದು, ತುರಿಕೆಗಳು ತಗ್ಗುತ್ತವೆ.

**ನಿದ್ರೆಯಲ್ಲಿನ ಮೂತ್ರ ವಿಸರ್ಜನೆಗೆ**

ಆಜ್ವಾನ ಪುಡಿ 25 ಗ್ರಾಂ,ಕರಿಯೆಳ್ಳು ಪುಡಿ ಮಾಡಿದ ಚೂರ್ಣ 50 ಗ್ರಾಂ, ಬೆಲ್ಲದ ಪುಡಿ 75 ಗ್ರಾಂ ಕಲಿಸಿಟ್ಟುಕೊಂಡು ಬೆಳಗ್ಗೆ, ಸಂಜೆ ಬಾರಿಯೊಂದಕ್ಕೆ ಅರ್ಧ ಟೀ ಚಮಚದಿಂದ ಒಂದು ಚಮಚದವರೆಗೆ ಸೇವಿಸುತ್ತಿರಬೇಕು.

ಈ ಔಷಧಿಯನ್ನು ಹೀಗೆ ಸೇವಿಸುವುದರಿಂದ ಯಾವುದೇ ಕಾರಣವಿಲ್ಲದೇ ಅನಿಶ್ಚಿತವಾಗಿ ಹರಿಯುವ ಮೂತ್ರ ವಿಸರ್ಜನೆಯ ಸಮಸ್ಯೆ ಸಹಾ ಬಗೆಹರಿಯುತ್ತದೆ.

ತಿರುಮಲ ತಿರುಪತಿ ದೇವಸ್ಥಾನಗಳು

# ದೇವುನಿಕಡಪ
# ಶ್ರೀ ಲಕ್ಷ್ಮಿ ವೇಂಕಟೇಶ್ವರಸ್ವಾಮಿಯವರ
# ಬ್ರಹ್ಮೋತ್ಸವಗಳು

**05-02-2019**
**ರಿಂದ**
**14-02-2019 ರ ವರೆಗೆ**

**05-02-2019**
**ಮಂಗಳವಾರ**
ಹಗಲು: ಧ್ವಜಾರೋಹಣ
ರಾತ್ರಿ: ಚಂದ್ರಪ್ರಭವಾಹನ

**06-02-2019**
**ಬುಧವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ದೊಡ್ಡಶೇಷವಾಹನ

**07-02-2019**
**ಗುರುವಾರ**
ಹಗಲು: ಚಿಕ್ಕಶೇಷವಾಹನ
ರಾತ್ರಿ: ಸಿಂಹವಾಹನ

**08-02-2019**
**ಶುಕ್ರವಾರ**
ಹಗಲು: ಕಲ್ಪವೃಕ್ಷ ವಾಹನ
ರಾತ್ರಿ: ಹನುಮಂತವಾಹನ

**09-02-2019**
**ಶನಿವಾರ**
ಹಗಲು: ಮುತ್ತಿನಚಪ್ಪರವಾಹನ
ರಾತ್ರಿ: ಗರುಡವಾಹನ

**10-02-2019**
**ಭಾನುವಾರ**
ಹಗಲು: ಕಲ್ಯಾಣೋತ್ಸವ
ರಾತ್ರಿ: ಗಜವಾಹನ

**11-02-2019**
**ಸೋಮವಾರ**
ಹಗಲು: ರಥೋತ್ಸವ
ರಾತ್ರಿ: ಧೂಳಿ ಉತ್ಸವ

**12-02-2019**
**ಮಂಗಳವಾರ**
ಹಗಲು: ಸರ್ವಭೂಪಾಲವಾಹನ
ರಾತ್ರಿ: ಅಶ್ವವಾಹನ

**13-02-2019**
**ಬುಧವಾರ**
ಹಗಲು: ವಸಂತೋತ್ಸವ, ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ, ಹಂಸವಾಹನ

**14-02-2019**
**ಗುರುವಾರ**
ರಾತ್ರಿ: ಪುಷ್ಪಯಾಗ







# ಶ್ರೀ ಪದ್ಮಾವತಿ ಅಮ್ಮನವರ





ದೊಡ್ಡಶೇಷವಾಹನದಲ್ಲಿ
ಸಿಂಗಾರದ ಸಿರಿಮಾತೆ ಶ್ರೀಪದ್ಮಾವತಿ !



ಮುತ್ತಿನ ಹಾರಗಳ ನಡುವೆ ಮುತ್ತಿನಾರತಿಯ ಪ್ರಕಾಶದಲ್ಲಿ
ಧಗ ಧಗಿಸುತ್ತಿರುವ ಶ್ರೀ ಅಲಮೇಲುಮಂಗ !



ಭದ್ರಗಜದ ಮೇಲೆ ಮಂಗಳನೀರಾಜನ ಸ್ವೀಕರಿಸುತ್ತಿರುವ
'ಗಜಲಕ್ಷ್ಮಿ' ಶ್ರೀ ಅಲಮೇಲುಮಂಗ !



ಆನಂದಾಮೃತವನ್ನು ಹಂಚುತ್ತಿರುವ
ಆನಂದಮಯಿ ಶ್ರೀ ಅಲಮೇಲು ಮಂಗ !



ಶ್ರೀ ಪದ್ಮಾವತಿ ಉತ್ಸವ ಸಂದರ್ಭದಲ್ಲಿ ಪಾಲ್ಗೊಂಡ ತೆಲುಗು ರಾಜ್ಯದ ರಾಜ್ಯಪಾಲರು
ಮಾನ್ಯ ಶ್ರೀ ಇ.ಎಸ್.ಎಲ್. ನರಸಿಂಹನ್ ದಂಪತಿಗಳು



ತಿರುಮಲೇಶನು ತನ್ನ ಪ್ರಿಯತಮೆಗೆ ಜನ್ಮದಿನದಂದು ಕಳುಹಿಸಿದ ಕಾಣಿಕೆ
ಅದೇ! ಪಂಚಮಿತೀರ್ಥದಂದಿನ ರೇಷ್ಮೆಯ ಹಾರ !

ತಿರುಚಾನೂರಿನಲ್ಲಿ 04-12-2018 ರಿಂದ 12-12-2018 ರ ವರೆಗೆ ನಡೆದ ಬ್ರಹ್ಮೋತ್ಸವದ ಛಾಯಾಮಾಲಿಕೆ



# ಬ್ರಹ್ಮೋತ್ಸವ ಸಂಭ್ರಮ





ಕಲ್ಪವೃಕ್ಷದ ಛಾಯೆಯಲ್ಲಿಯ ವರಪ್ರದಾಯಿನಿ
'ವರಲಕ್ಷ್ಮಿ'ಗಿದೋ ದಿವ್ಯಾರತಿ !




ತಿರುಚಾನೂರು ಬ್ರಹ್ಮೋತ್ಸವದಲ್ಲಿ
ಶ್ರೀ ಜಿಯ್ಯಂಗಾರರ ಪಾಶುರ ಪ್ರಬಂಧ ಗೋಷ್ಠಿ !



ಸೂರ್ಯ ಪ್ರಭೆಯಲ್ಲಿ ವಿರಾಜಿಸುತ್ತಿರುವ
ವೇಂಕಟೇಶನ ಪಟ್ಟದರಾಣಿ ಶ್ರೀಪದ್ಮಾವತಿ !



ಬ್ರಹ್ಮಾಂಡ ನಾಯಕಿಯ ಬ್ರಹ್ಮೋತ್ಸವದಲ್ಲಿ
ಭಕ್ತ ವೃಂದದ ಸಡಗರ ಸಂಭ್ರಮಗಳು !



ಸಿರಿದೇವಿಗೆ ಸಪ್ತಗಿರೀಶನು ಕಳಿಸಿರುವ
'ಬಾಗಿನ' ದೊಂದಿಗೆ ತಿ.ತಿ.ದೇ ಅರ್ಚಕ - ಅಧಿಕಾರಿಗಳ ಗಣ !



'ಪಂಚಮಿತೀರ್ಥ' ದಂದು ಪದ್ಮಸರೋವರದಲ್ಲಿ
ಮಜ್ಜನಗೈಯುತ್ತಿರುವ ಶ್ರೀ ಸುದರ್ಶನ ಭಗವಂತನು !

ತಿರುಮಲ ತಿರುಪತಿ ದೇವಸ್ಥಾನಗಳು

# ತಿರುಪತಿ
# ಶ್ರೀ ಕಪಿಲೇಶ್ವರ ಸ್ವಾಮಿಯವರ
# ವಾರ್ಷಿಕ ಬ್ರಹ್ಮೋತ್ಸವ

25-02-2019 ರಿಂದ
06-03-2019 ರ ವರೆಗೆ



25-02-2019 ಸೋಮವಾರ
ಹಗಲು: ಧ್ವಜಾರೋಹಣ,
ರಾತ್ರಿ: ಹಂಸವಾಹನ.

26-02-2019 ಮಂಗಳವಾರ
ಹಗಲು: ಸೂರ್ಯಪ್ರಭವಾಹನ,
ರಾತ್ರಿ: ಚಂದ್ರಪ್ರಭವಾಹನ

27-02-2019 ಬುಧವಾರ
ಹಗಲು: ಭೂತವಾಹನ
ರಾತ್ರಿ: ಸಿಂಹವಾಹನ.

28-02-2019 ಗುರುವಾರ
ಹಗಲು: ಮಕರವಾಹನ,
ರಾತ್ರಿ: ಶೇಷವಾಹನ.

01-03-2019 ಶುಕ್ರವಾರ
ಹಗಲು: ತಿರುಚ್ಚಿ ಉತ್ಸವ
ರಾತ್ರಿ: ಅಧಿಕಾರ ನಂದಿವಾಹನ.

02-03-2019 ಶನಿವಾರ
ಹಗಲು: ವ್ಯಾಘ್ರವಾಹನ
ರಾತ್ರಿ: ಗಜವಾಹನ

03-03-2019 ಭಾನುವಾರ
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಅಶ್ವವಾಹನ.

04-03-2019 ಸೋಮವಾರ
ಹಗಲು: ರಥೋತ್ಸವ
ರಾತ್ರಿ: ನಂದಿವಾಹನ(ಮಹಾಶಿವರಾತ್ರಿ)

05-03-2019 ಮಂಗಳವಾರ
ಹಗಲು: ಪುರುಷಾಮೃಗವಾಹನ
ರಾತ್ರಿ: (ಕಲ್ಯಾಣೋತ್ಸವ) ತಿರುಚ್ಚಿ ಉತ್ಸವ

06-03-2019 ಬುಧವಾರ
[illegible]
[illegible]
[illegible]



# ಸೂರ್ಯ ಸಿದ್ಧಾಂತದ ಅಧಿಷ್ಠಾತಾ ಭಗವಾನ್ ಸೂರ್ಯ

ಶ್ರೀಮತಿ. ಎಸ್. ಕಲ್ಯಾಣಿ

ಓಂ ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ।
ಆಪ್ರಾ ದ್ಯಾವಾ ಪೃಥಿವೀ ಅಂತರಿಕ್ಷಂ ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ ॥

ಸೂರ್ಯೋಪಸ್ಥಾನದ ಈ ಋಕ್ ಭುವನಭಾಸ್ಕರ ಭಗವಾನ್ ಸೂರ್ಯನ ಮಹಿಮೆಯಲ್ಲಿ ಮುಗಿಯುತ್ತದೆ. ಇದರ ತಾತ್ಪರ್ಯ:- ಯಾರು ತೇಜೋಮಯಿ ಕಿರಣಗಳ ಪುಂಜನೋ, ಮಿತ್ರ, ವರುಣ ಹಾಗೂ ಅಗ್ನಿ ಮುಂತಾದ ದೇವತೆಗಳು ಮತ್ತು ಸಮಸ್ತ ವಿಶ್ವದ ಜೀವಿಗಳ ನೇತ್ರನೋ ಮತ್ತು ಸ್ಥಾವರ - ಜಂಗಮಾತ್ಮಕ ಸಮಸ್ತ ಜೀವನಕಾಮಗಳ ಅಂತರ್ಯಾಮಿ ಆತ್ಮನೋ, ಅಂತಹ ಭಗವಾನ್ ಸೂರ್ಯ ಆಕಾಶ, ಪೃಥ್ವೀ ಮತ್ತು ಅಂತರಿಕ್ಷ ಲೋಕವನ್ನು ತನ್ನ ಬೆಳಕಿನಿಂದ ಬೆಳಗುತ್ತಾ ಆಶ್ಚರ್ಯರೂಪವಾಗಿ ಉದಿತನಾಗುತ್ತಿದ್ದಾನೆ.

ಋಷಿ ವಸಿಷ್ಠರು ಅವನನ್ನು ಸ್ತುತಿಸುತ್ತಾ: “ಯಾರು ಜ್ಞಾನಿಗಳ ಅಂತರಾತ್ಮನೋ,ಜಗತ್ತನ್ನು ಬೆಳಗುತ್ತಾನೋ, ಪ್ರಪಂಚದ ಹಿತೈಷಿಯೋ,ಸ್ವಯಂಭೂ ಹಾಗೂ ಸಹಸ್ರ ಉದ್ಧೀಪ್ತ ನೇತ್ರಗಳಿಂದ ಸುಶೋಭಿತನೋ, ಆ ಅಮಿತ ತೇಜಸ್ವೀ ಸುರಶ್ರೇಷ್ಠ ಭಗವಾನ್ ಸೂರ್ಯನಿಗೆ ನಮಸ್ಕರಿಸುತ್ತೇನೆ” ಎನ್ನುತ್ತಾರೆ.

ವಿವಸ್ವತೇ ಜ್ಞಾನ ಭೃದಂತರಾತ್ಮನೇ
ಜಗತ್ಪ್ರದೀಪಾಯ ಜಗದ್ಧಿತೈಷಿಣೇ।
ಸ್ವಯಂಭುವೇ ದೀಪ್ತ ಸಹಸ್ರಚಕ್ಷುಷೇ
ಸುರೋಕ್ತ ಮಾಯಾ ಮಿತ ತೇಜಸೇ ನಮಃ

ಭುವನ ಭಾಸ್ಕರ ಭಗವಾನ್ ಸೂರ್ಯನಾರಾಯಣ ಪ್ರತ್ಯಕ್ಷ ದೇವತೆ, ಪ್ರಕಾಶರೂಪದಲ್ಲಿದ್ದಾನೆ. ಉಪನಿಷದ್‌ಗಳಲ್ಲಿ ಭಗವಾನ್ ಸೂರ್ಯನ ಮೂರು ರೂಪಗಳ ವಿವೇಚನೆಯಾಗಿದೆ 1) ನಿರ್ಗುಣನಿರಾಕಾರ 2) ಸಗುಣ ನಿರಾಕಾರ 3) ಸಗುಣ ಸಾಕಾರ. ‘ಆದಿತ್ಯಂ ಬ್ರಹ್ಮೇತಿ’

ಚಾಕ್ಷುಷೋಪನಿಷತ್ತಿನಲ್ಲಿ ಸಾಂಕೃತಮುನಿ ಆದಿತ್ಯ ಲೋಕಕ್ಕೆ ಹೋಗಿ ಭಗವಾನ್ ಸೂರ್ಯನಿಂದ ಚಾಕ್ಷುಷ್ಮತೀ ವಿದ್ಯೆಯನ್ನು ಪಡೆದರೆಂದು ವರ್ಣನೆ ಬಂದಿದೆ. ಹೀಗೆಯೇ ಋಷಿ ಪ್ರವರರಾದ ಯಾಜ್ಞವಲ್ಕ್ಯರೂ ಸಹ ಆದಿತ್ಯಲೋಕಕ್ಕೆ ಹೋಗಿ ಅವನನ್ನು ದರ್ಶಿಸಿ ಆತ್ಮತತ್ತ್ವವನ್ನು ಉಪದೇಶ ಪಡೆದರು. ಹನುಮಂತನೂ ಸಹ ಅವನ ಮೂಲಕ ತತ್ತ್ವಜ್ಞಾನ ಪಡೆದಿದ್ದು ಪ್ರಸಿದ್ಧವಾಗಿಯೇ ಇದೆ.‘ಭಾನುಸೋಂಪಢನ್ ಹನುಮಾನ್ ಗಯೆ‘ಉಕ್ತಿ ಕೇಳಿದ್ದೇವೆ. ಭಗವಾನ್ ಸೂರ್ಯ ಸ್ವತಃ ಪರಮಾತ್ಮ ರೂಪಿ ಹಾಗೂ ಭಕ್ತರಿಗೆ ಸಗುಣಸಾಕಾರ ರೂಪವನ್ನು ಧರಿಸಿ ದರ್ಶಿಸುತ್ತಾನೆ.ವಿವಿಧ ವಿದ್ಯೆಗಳ ಉಪದೇಶ ನೀಡುತ್ತಾನೆ. ಸ್ವತಃ ಗ್ರಹಾಧಿಪತಿಯ ರೂಪದಲ್ಲಿ ಪ್ರತಿಷ್ಠಾಪಿಸಲ್ಪಟ್ಟು ಜ್ಯೋತಿಶ್ಚಕ್ರದ ಪ್ರವರ್ತನೆ ಮತ್ತು ನಿಯಮವನ್ನು ಮಾಡುತ್ತಾನೆ.



ಭಗವಾನ್ ವಿಷ್ಣುವಿನ ಸ್ಥಳ ವೈಕುಂಠ, ಭೂತಭಾವನ ಶಂಕರನ ಸ್ಥಳ ಕೈಲಾಸ, ಚತುರ್ಮುಖ ಬ್ರಹ್ಮನಿಗೆ ಬ್ರಹ್ಮ ಲೋಕ ಮತ್ತು ಭಗವತಿ ಜಗನ್ಮಾತೆಗೆ ಮಣಿದ್ವೀಪಗಳಿವೆಯೋ ಅದರಂತೆಯೇ ಆದಿತ್ಯ ನಾರಾಯಣನ ಸ್ಥಳ ಆದಿತ್ಯಲೋಕ ಸೂರ್ಯಾಮಂಡಲವಾಗಿದೆ.ಭಗವಾನ್ ಸೂರ್ಯನೇ ಕಾಲಚಕ್ರದ

ಪ್ರಣೇತನು.ಸೂರ್ಯನಿಂದಲೇ ಹಗಲು - ರಾತ್ರಿ, ಘಳಿಗೆ, ಕ್ಷಣ, ತಿಂಗಳು, ಪಕ್ಷ, ಋತು, ಅಯನ ಹಾಗೂ ಸಂವತ್ಸರ ಇತ್ಯಾದಿಗಳ ವಿಭಾಗಗಳಾಗಿವೆ. ಈತ ಇಡೀ ಜಗತ್ತನ್ನು ಬೆಳಗುವವನು. ಇವನಿಲ್ಲದಿದ್ದರೆ ಎಲ್ಲವೂ ಕತ್ತಲು ಸೂರ್ಯನೇ ಬದುಕು, ತೇಜಸ್ಸು, ಓಜಸ್ಸು, ಬಲ, ಯಶಸ್ಸು, ಚಕ್ಷು, ಶ್ರೋತ್ರ, ಆತ್ಮ ಮತ್ತು ಮನಸ್ಸು "ಆದಿತ್ಯೋ ವೈ ತೇಜ ಓಜೋ ಬಲಂ ಯಶಶ್ಚಕ್ಷುಃ ಶ್ರೋತ್ರೇ ಆತ್ಮಾಮನಃ" ಎನ್ನುತ್ತದೆ ನಾರಾಯಣೋಪನಿಷತ್.

ಇವನ ಹುಟ್ಟಿನ ಬಗ್ಗೆ ಪರಂಪರೆಯಲ್ಲಿ, ವಿಷ್ಣುವಿನ ನಾಭಿ ಕಮಲದಿಂದ ಬ್ರಹ್ಮನು ಜನ್ಮವೆತ್ತಿದ್ದೆಂದು ಹೇಳಲ್ಪಟ್ಟಿದೆ. ಬ್ರಹ್ಮನ ಮಾನಸಪುತ್ರನೇ ಮರೀಚಿ, ಮಹರ್ಷಿ ಮರೀಚಿಗಳಿಂದ ಕಶ್ಯಪರ ಜನ್ಮ. ಈ ಕಶ್ಯಪರೇ ಸೂರ್ಯನ ತಂದೆ. ಇವನ ತಾಯಿ ಅದಿತಿ, ಈಕೆ ದಕ್ಷ ಪ್ರಜಾಪತಿಯ ಮಗಳು. ಹಾಗಾಗಿಯೇ ಇವನು ಆದಿತಿ ನಂದನ ಹಾಗೂ ಮರೀಚಿ ಸೂನುವೆಂತಲೂ ಕರೆಸಿಕೊಳ್ಳುತ್ತಾನೆ. ಭಗವಾನ್ ಸೂರ್ಯ ಇಡೀ ಗ್ರಹಗಳಿಗೆ ರಾಜ. ಹೇಗೆ ಮನೆಯ ಮಧ್ಯ ಭಾಗದಲ್ಲಿರುವ ಪ್ರಜ್ವಲಿಸುವ ದೀಪವು ಮೇಲೆ - ಕೆಳಗೆ ಇಡೀ ಮನೆಯನ್ನು ಬೆಳಗುತ್ತದೋ ಅದರಂತೆಯೇ ಅಖಿಲ ಜಗತ್ತಿನ ಅಧಿಪತಿ ಸೂರ್ಯನ ತನ್ನ ಸಹಸ್ರಾರು ಕಿರಣಗಳಿಂದ ಲೋಕಗಳನ್ನು ಬೆಳಗುತ್ತಿರುತ್ತಾನೆ. ಪರಮ ದಿವ್ಯ ತೇಜಃ ಪುಂಜವೇ ಸೂರ್ಯನ ಸ್ವರೂಪ. ಸೂರ್ಯನ ತೇಜೋ ಮಂಡಲ ಎರಡು ಭಾಗಗಳಾಗಿ ವಿಭಜಿಸಲ್ಪಟ್ಟಿದೆ. ಒಂದು ತೇಜಸ್ಸಿನ ಶಕ್ತಿ ಸಂಜ್ಞೆ ಎಂತಲೂ ಮತ್ತೊಂದು ಅಧೋ ಗಾಮಿ ಎನ್ನುತ್ತಾರೆ. ಪೃಥ್ವಿಯಿಂದ ಪಾತಾಳದವರೆಗೆ ಉದ್ದೀಪನಗೊಳಿಸುತ್ತದೆ. ಆ ತೇಜಸ್ಸಿನ ಶಕ್ತಿಯ ಹೆಸರು ಛಾಯೆ. ಪುರಾಣಗಳಲ್ಲಿ ಸಂಜ್ಞೆ ಮತ್ತು ಛಾಯೆಗಳೆರಡೂ



ಭಗವಾನ್ ಸೂರ್ಯನ ಇಬ್ಬರು ಪತ್ನಿಯರೆಂದು ತಿಳಿಸಲ್ಪಟ್ಟಿದೆ. ಇವೆರಡೂ ಅವನ ಶಕ್ತಿಯ ರೂಪದಲ್ಲಿ ನಿರಂತರ ಗತಿಶೀಲವಾಗಿ ರುತ್ತದೆ.

ಸೂರ್ಯಲೋಕದಲ್ಲಿ ಭಗವಾನ್ ಸೂರ್ಯನ ಮುಂದೆ ಇಂದ್ರಾದಿ ಸಮಸ್ತ ದೇವತೆಗಳು - ಋಷಿಗಣ ಸ್ಥಿತವಾಗಿರುತ್ತದೆ. ಅಲ್ಲದೆ ಗಂಧರ್ವ ಹಾಗೂ ಅಪ್ಸರೆಯರು ನೃತ್ಯ - ಗಾನಗಳಿಂದ ಅವನನ್ನು ಸ್ತುತಿಸುತ್ತಿರು ತ್ತಾರೆ. ಮೂರೂ ಸಂಧ್ಯೆಗಳು ಮೂರ್ತಿವತ್ತಾಗಿ ಅಲ್ಲಿ ಉಪಸ್ಥಿತವಾಗಿವೆ. ಭಗವಾನ್ ಸೂರ್ಯ ಏಳು ಛಂದೋಮಯ ಅಶ್ವಗಳಿಂದ ಕೂಡಿದ್ದಾನೆ. ಹಾಗಾಗಿ ಅವನು ಸಪ್ತಾಶ್ವ ತಿಲಕ ಎನಿಸಿ ಕೊಂಡಿದ್ದಾನೆ. ಆತ ಘಳಿಗೆ, ಕ್ಷಣ, ಋತು, ಸಂವತ್ಸರಾದಿ ಕಾಲಗಳ ಅವಯವಗಳ ಮೂಲಕ ಉಂಟಾದ ದಿವ್ಯ ರಥದ ಮೇಲೆ ಆರೂಢ ನಾಗಿ ಸುಶೋಭಿತನಾಗಿದ್ದಾನೆ. ಗರುಡನ ತಮ್ಮ ಅರುಣ ಅವನಿಗೆ ಸಾರಥಿಯಾಗಿ ಕೆಲಸ ಮಾಡುತ್ತಾನೆ.ಅವನ ಎರಡೂ ಪಕ್ಕುಗಳಲ್ಲಿ ಬಲಗಡೆಗೆ ರಾಜ್ಞೀ (ಸಂಜ್ಞಾ) ಮತ್ತು ಎಡಗಡೆಗೆ ನಿಕ್ಷುಭಾ (ಛಾಯಾ) ಎಂಬಿಬ್ಬರು ಪತ್ನಿಯರಿದ್ದಾರೆ. ಅವರೊಂದಿಗೆ ಪಿಂಗಳ ನೆಂಬ ಲೇಖಕನೂ, ದಂಡನಾಯಕನೆಂಬ ದ್ವಾರಪಾಲಕನೂ ಮತ್ತು ಕಲ್ಮಾಷವೆಂಬೆರಡು ಪಕ್ಷಿಗಳು ಬಾಗಿಲಲ್ಲಿ ನಿಂತಿರುತ್ತವೆ. ದಿಂಡಿ ಅವನ ಪ್ರಮುಖ ಸೇವಕ, ಅವನು ಮಾತ್ರ ಎದುರೇ ನಿಂತಿರುತ್ತಾನೆ.

ಭಗವಾನ್ ಸೂರ್ಯನಿಗೆ ಒಟ್ಟು ಹತ್ತು ಸಂತಾನಗಳು. ವಿಶ್ವ ಕರ್ಮನ ಮಗಳು ಸಂಜ್ಞಾ (ಅಶ್ವಿನೀ) ಎಂಬ ಪತ್ನಿಯಿಂದ ವೈವಸ್ವತ ಮನು, ಯಮ,ಯಮೀ (ಯಮುನಾ), ಅಶ್ವಿನೀ ಕುಮಾರ ದ್ವಯರು ಮತ್ತು ರೇವಂತ ಹಾಗೂ ಛಾಯಾಗಳಿಂದ ಶನಿ, ತಪತೀ, ವಿಶ್ವಿ (ಭದ್ರಾ) ಮತ್ತು ಸಾವರ್ಣಿ ಮನುಗಳಾದರು. ಇವನ ಪರಿವಾರದ ಈ ಕಥೆ ಪುರಾಣಾದಿಗಳಲ್ಲಿ ಅನೇಕ ರೀತಿ ಸೂಕ್ಷ್ಮ ಹಾಗೂ ವಿಸ್ತಾರವಾಗಿ ಬಂದಿದೆ.ಅದರ ಸಾರಾಂಶ ಹೀಗಿದೆ: -

ವಿಶ್ವಕರ್ಮನ (ತ್ವಷ್ಟಾ) ಮಗಳು ಸಂಜ್ಞಾ (ತ್ವಾಷ್ಟ್ರೀ) ಳೊಂದಿಗೆ ಸೂರ್ಯನ ಮದುವೆಯಾದಾಗ ಅವನ ಮೂರು ಮಕ್ಕಳು ವೈವಸ್ವತ ಮನು, ಯಮ ಹಾಗೂ ಯಮೀಗಳು ಹುಟ್ಟಿದರು. ನಂತರ ಅವನ ತೇಜಸ್ಸನ್ನು ತಡೆಯಲಾರದೆ ಸಂಜ್ಞಾ ತನ್ನದೇ ರೂಪ ಆಕೃತಿ ಹಾಗೂ ಬಣ್ಣದ ತನ್ನ ಛಾಯೆಯನ್ನು ಅಲ್ಲಿ ಸ್ಥಾಪಿಸಿ ತನ್ನ ತಂದೆಯ ಮನೆಗೆ ಬಂದು 'ಉತ್ತರ ಕುರುವಿಗೆ ಹೋಗಿ ಅವಿತು ವಡವಾ (ಅಶ್ವ) ರೂಪ ಧರಿಸಿ ತನ್ನ ಶಕ್ತಿವೃದ್ಧಿಗೆ ಕಠೋರ ತಪಸ್ಸು ಮಾಡತೊಡಗಿದಳು. ಇತ್ತ ಸೂರ್ಯನು ಛಾಯೆಯನ್ನೇ ಪತ್ನಿ ಎಂದು ತಿಳಿದು ಅದರಿಂದ ಅವರಿಗೆ ಸಾವರ್ಣಿ ಮನು, ಶಸಿ, ತಪತಿ ಹಾಗೂ ವಿಶ್ವ ಈ ನಾಲ್ಕು

ಮಕ್ಕಳಾದರು. ಇವರನ್ನು ಅವಳು ಹೆಚ್ಚು ಪ್ರೀತಿಸುತ್ತಿದ್ದಳು. ಆದರೆ ಸಂಜ್ಞೆಯ ಮಕ್ಕಳಾದ ವೈವಸ್ವತ ಮನು, ಯಮ ಹಾಗೂ ಯಮಿಯರನ್ನು ಸದಾ ತಿರಸ್ಕಾರ ಮಾಡುತ್ತಿದ್ದಳು.

ತಾಯಿ ಛಾಯೆಯ ತಿರಸ್ಕಾರದಿಂದ ದುಃಖಗೊಂಡು ಒಂದು ದಿನ ಯಮನು ತಂದೆ ಸೂರ್ಯನಿಗೆ : - "ಅಪ್ಪಾ! ಈ ಛಾಯೆ ನಮ್ಮ ತಾಯಿ ಇದ್ದಂತಿಲ್ಲ. ಏಕೆಂದರೆ, ಇವಳು ಯಾವಾಗಲೂ ನಮ್ಮನ್ನು ಉಪೇಕ್ಷೆಯಿಂದ ನೋಡಲಿಚ್ಛಿಸುತ್ತಾಳೆ.ಸಾವರ್ಣಿಮನು ಮುಂತಾದವರನ್ನು ಹೆಚ್ಚು ಪ್ರೀತಿಸುತ್ತಾಳೆ. ಅವಳು ನನಗೆ ಶಾಪವನ್ನೂ ಕೊಟ್ಟಿದ್ದಾಳೆ. ಮಕ್ಕಳನ್ನು ಪಡೆದ ತಾಯಿಗೆ ಅವರಿಂದ ಎಷ್ಟೇ ಕಷ್ಟವಾಗಲಿ, ತನ್ನ ಮಕ್ಕಳಿಗೆ ಎಂದೂ ಶಾಪಕೊಡುವುದಿಲ್ಲ.ಯಮನ ಮಾತು ಕೇಳಿ ಕೋಪಗೊಂಡ ಸೂರ್ಯ ಛಾಯಾಳನ್ನು ಏಕೆ ಹೀಗೆಂದು ಕೇಳಿದ:"ಹಾಗಿದ್ದ ಮೇಲೆ ನೀನು ಯಾರೆಂಬುದನ್ನು ನಿಜ ಹೇಳು?" ಇದರಿಂದ ಛಾಯಾ ಭಯಾಗೊಂಡಳು. ಎಲ್ಲ ರಹಸ್ಯವನ್ನು ಹೇಳಿ "ತಾನು ಸಂಜ್ಞೆಯಲ್ಲ. ಆದರೆ ಅವಳ ನೆರಳು ಎಂದು" ಹೇಳಿದಳು.

ಸೂರ್ಯನು ಕೂಡಲೇ ಸಂಜ್ಞಾಳನ್ನು ಹುಡುಕಿಕೊಂಡು ವಿಶ್ವಕರ್ಮನ ಮನೆಗೆ ಬಂದನು. ಆಗ ಆತ - ಭಗವಾನ್! ತಮ್ಮ ತೇಜಸ್ಸನ್ನು ತಡೆಯಲಾರದೆ ಸಂಜ್ಞಾ ಕುದುರೆಯ ರೂಪವನ್ನು ಧರಿಸಿ ಉತ್ತರ ಕುರುವಿನಲ್ಲಿ ತಪಸ್ಸು ಮಾಡುತ್ತಿದ್ದಾಳೆ ಎಂದು ತಿಳಿಸಿದ. ವಿಶ್ವಕರ್ಮ ಸೂರ್ಯನ ಇಚ್ಛೆಯಂತೆ ಅವನ ತೇಜಸ್ಸನ್ನು ಶುದ್ಧಗೊಳಿಸಿ ಕಡಿಮೆ ಮಾಡಿದ. ಈಗ ಸೌಮ್ಯ ಶಕ್ತಿಯಿಂದ ತುಂಬಿದ ಭಗವಂತ ಸೂರ್ಯ ಕುದುರೆಯ ರೂಪತಾಳಿ ಸಂಜ್ಞಾ ಅಶ್ವಿನೀ ಬಳಿಗೆ ಸೇರಿದ. ಅಶ್ವಿನಿಯು ಪರ ಪುರುಷನ ಸ್ಪರ್ಶದ ಅನುಮಾನದಿಂದ ಸೂರ್ಯನ ತೇಜಸ್ಸನ್ನು ತನ್ನ ಮೂಗಿನ ರಂಧ್ರಗಳ ಮೂಲಕ ಹೊರಗೆ ತಳ್ಳಿದಳು. ಆದರಿಂದ ಇಬ್ಬರು ಅಶ್ವಿನೀ ಕುಮಾರರು ಹುಟ್ಟಿಕೊಂಡರು. ಇವರೇ ದೇವತೆಗಳ ವೈದ್ಯರಾದರು. ತೇಜಸ್ಸಿನ ಕೊನೆಯ ಅಂಶದಿಂದ ರೇವಂತನೆಂಬ ಮಗ ಹುಟ್ಟಿದ. ಇವನೇ ಗುಹ್ಯಗಳು ಮತ್ತು ಕುದುರೆಗಳ ಅಧಿಪತಿಯಾದ.ಹೀಗೆ ಭಗವಾನ್ ಸೂರ್ಯನ ವಿಶಾಲ ಕುಟುಂಬ ಯಥಾ ಸ್ಥಳದಲ್ಲಿ ಪ್ರತಿಷ್ಠಿತವಾಯಿತು. ಇನ್ನು ವೈವಸ್ವತ ಮನು ವರ್ತಮಾನ (ಏಳನೆಯ) ಮನ್ವಂತರದ ಅಧಿಪತಿಯಾದ ಯಮ ಯಮರಾಜ ಹಾಗೂ ಧರ್ಮರಾಜನ ರೂಪದಲ್ಲಿ ಜೀವಿಗಳಿಗೆ ಶುಭಾಶುಭಕರ್ಮಗಳ ಫಲಗಳನ್ನು ಕೊಡುವವನಾದ,ಯಮೀ ಯಮುನಾ ನದಿಯ ರೂಪದಲ್ಲಿ ಜೀವಿಗಳ ಉದ್ಧಾರದಲ್ಲಿ ತೊಡಗಿದ್ದಾಳೆ. ರೇವಂತನು ಸದಾ ಸೂರ್ಯನ ಸೇವೆಯಲ್ಲಿರುತ್ತಾನೆ. ಸೂರ್ಯಪುತ್ರ ಶನಿ ಗ್ರಹಗಳಲ್ಲಿ ಪ್ರತಿಷ್ಠಿತನಾಗಿದ್ದಾನೆ. ಸೂರ್ಯ ಕನ್ಯೆ ತಪತಿಯ ವಿವಾಹ ಸೋಮವಂಶದ ಅತ್ಯಂತ ಧರ್ಮಾತ್ಮ ರಾಜ ಸಂವರಣನ ಜತೆಯಲ್ಲಾಯಿತು. ಇವನಿಂದ ಕುರುವಂಶದ ಸ್ಥಾಪಕ ರಾಜರ್ಷಿ ಕುರು ಹುಟ್ಟಿದ ಇವರಿಂದಲೇ ಕೌರವರು ಜನ್ಮತಾಳಿದ್ದು. ವಿಶ್ವಿಭದ್ರಾ ಎನ್ನುವ ಹೆಸರಿನಿಂದ ನಕ್ಷತ್ರಲೋಕದಲ್ಲಿ ಸ್ಥಾಪಿತಳಾದಳು. ಸಾವರ್ಣಿಮನು ಎಂಟನೆಯ ಮನ್ವಂತರದ ಅಧಿಪತಿಯಾಗುತ್ತಾನೆ. ಹೀಗೆ ಭಗವಾನ್ ಸೂರ್ಯನ ವಿಸ್ತಾರ ಅನೇಕ ರೂಪಗಳಲ್ಲಾಯಿತು. ಇವನು ಆರೋಗ್ಯದ ಅಧಿದೇವತೆ: 'ಆರೋಗ್ಯಂ ಭಾಸ್ಕರಾದಿಚ್ಛೇತ್'.

## ಶ್ರೀ ವೆಂಕಟೇಶ



ನಮೋ ವೆಂಕಟೇಶ
ನಮೋ ತಿರುಮಲೇಶ
ನಮೋ ಶೇಷಾದ್ರಿವಾಸ

ನಮೋ ಗರುಡಾದ್ರಿವಾಸ
ನಮೋ ತಿರುಮಲವಾಸ
ನಮೋ ನಾರಾಯಣಾದ್ರಿವಾಸ


ನಮೋ ವೆಂಕಟಗಿರಿವಾಸ
ನಮೋ ಪದ್ಮಾವತಿಪ್ರಿಯ
ನಮೋ ಲಕ್ಷ್ಮೀ ಪ್ರಿಯ

ನಮೋ ಭಕ್ತರ ಪ್ರಿಯ
ನಮೋ ಅಶಕ್ತರ ಪ್ರಿಯ
ನಿನ್ನ ನೆನೆದರೆ ಶ್ರೀ ವೆಂಕಟೇಶ

ನಮಗಿಲ್ಲ ಎಂದೂ ನಾಶ
ನಿನ್ನ ಆರಾಧಿಸಿದರೆ ಶ್ರೀ ವೆಂಕಟೇಶ
ಓದಬೇಕೇ ಬೇರೆ ಕೋಶ?

ನಿನ್ನೊಲುಮೆ ಎನಗಿರಲಿ ಶ್ರೀ ವೆಂಕಟೇಶ
ನಿನ್ನ ಸೇವೆಯ ಮಾಡುವ ಭಾಗ್ಯ ಎನಗಿರಲಿ ಶ್ರೀ ವೆಂಕಟೇಶ

- ಕೆ.ವಿ. ಲಕ್ಷ್ಮಣಮೂರ್ತಿ



# ಅಪರೋಕ್ಷ ಜ್ಞಾನದ ಅಪ್ರತಿಮ ದಾರ್ಶನಿಕರು - ಆಚಾರ್ಯ ಮಧ್ವರು

- ಡಾ|| ಗುರುರಾಜ ಪೋಶೆಟ್ಟಿಹಳ್ಳಿ

ಆಚಾರ್ಯ ಪುರುಷರಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದವರು ಶಂಕರ, ರಾಮಾನುಜ ಮತ್ತು ಮಧ್ವರು. ವಿಶ್ವಮಾನ್ಯವಾದ ಸಂದೇಶ ಹೊತ್ತು ಬಂದ ಈ ಮೂವರಲ್ಲಿ ಮಧ್ವರು ಕನ್ನಡದ ಕೊಡುಗೆಯೆಂಬುದು ಹೆಮ್ಮೆಯ ಸಂಗತಿ, ಶ್ರೀ ಮಧ್ವಾಚಾರ್ಯರು ದ್ವೈತ ಸಿದ್ಧಾಂತ ಪ್ರತಿಪಾದಕರು. ಸೃಷ್ಟಿ, ಭಗವಂತನ ಆರಾಧನೆ ಇತ್ಯಾದಿ ಕುರಿತು ಅವರ ಚಿಂತನೆಗಳು ಬೋಧಪ್ರದ. ತಮ್ಮ ಇನ್ನೊಂದು ಪ್ರತಿಕೃತಿಯಂತಿರುವ ದಿವ್ಯಜ್ಞಾನ ಸಂಪತ್ತನ್ನು ಸಜ್ಜನರ ವಿನಿಯೋಗಕ್ಕೆ ನೀಡಿ, ಭಗವತ್ಕೈಂಕರ್ಯಕ್ಕಾಗಿ ಮಾಘ ಶುದ್ಧ ನವಮಿಯಂದು ಬದರಿಗೆ ತೆರಳಿದರು. ಶ್ರೀ ಮಧ್ವನವಮಿ (ಫೆ - 14) ಹಿನ್ನಲೆಯಲ್ಲಿ ಈ ಅವಲೋಕನ. ಅವರ ತತ್ವವಾದವನ್ನು ಉಳಿಸಿ ಬೆಳೆಸಿಕೊಂಡು ಹೋಗುವುದೇ ವಿಚಾರ ಪ್ರಿಯರು ಮಧ್ವರಿಗೆ ಸಲ್ಲಿಸಬಹುದಾದ ಗೌರವ.

ಶ್ರೀ ಮಧ್ವರು ಬುದ್ಧಿ ಪ್ರಪಂಚದ ವಿದ್ಯಾಗುರು, ಭಕ್ತಿ ಮಾರ್ಗದ ಭೂಮಾಪುರುಷ. ಧರ್ಮಮಾರ್ಗದ ಧೀಮಂತ. ಸ್ವರೂಪತಃ ಸಿದ್ಧಪುರುಷ ಋಜುಯೋಗಿ, ವೇದಪ್ರಸಿದ್ಧ ಪವನಪುತ್ರ, ಸದಾ ದೇವರ ಒಡನಾಡಿ. ಜೀವಕುಲದ ಜೀವನಾಡಿ, ಹನುಮ ಭೀಮರ ಅವತಾರಿ, ವಿಷ್ಣುಧರ್ಮದ ರುವಾರಿ. ವಿಶ್ವಕ್ಕೇ ಕೈವಾರಿ, ಶ್ರೀ ಮಧ್ವರು ಧರ್ಮದ ವ್ಯಕ್ತ ಹಾಗೂ ಅವ್ಯಕ್ತ ಶಕ್ತಿಯ ಪ್ರತೀಕರು. ಅನಂತ ಗುಣಗಳ ಪ್ರತಿಮೆ, ವ್ಯಕ್ತಿ ಎನಿಸಿದ ಪ್ರಾಣತತ್ತ್ವ, ಸಮಗ್ರ ಶಕ್ತಿಗಳ ಸಂಕೇತರು. ಹೀಗೆ ಆಚಾರ್ಯಮಧ್ವರದ್ದು ಭಾರತೀಯ ಇತಿಹಾಸದಲ್ಲಿ ಅಪೂರ್ವವಾದ ಬಹುಮುಖ ಪ್ರತಿಭೆಯ ವ್ಯಕ್ತಿತ್ವ. ಅವರು ತತ್ವಶಾಸ್ತ್ರದಲ್ಲಿ ಅದ್ವಿತೀಯ ವಿದ್ವಾಂಸರಾಗಿದ್ದರು. ಜ್ಯೋತಿಷ್ಯ, ವಾಙ್ಮಯದ ಅಪೂರ್ವ ಸಂಶೋಧಕರಾಗಿದ್ದರು. ಜ್ಯೋತಿಷ್ಯ, ಶಿಕ್ಷಾ ಕಲ್ಪ ಮುಂತಾದ ವೇದಾಂಗಗಳಲ್ಲಿ ಪಗಲ್ಭ ಪಂಡಿತರಾಗಿದ್ದರು, ಶಿಲ್ಪಶಾಸ್ತ್ರದಲ್ಲಿ ಪರಿಣಿತರಾಗಿದ್ದರು. ಕರ್ನಾಟಕ ಸಂಗೀತಕ್ಕೆ ಮೂಲ ರೂಪವನ್ನು ಕೊಟ್ಟ ಆಚಾರ್ಯ ಪುರುಷರಾಗಿದ್ದರು, ವಾಗ್ಗೇಯಕಾರರಾಗಿದ್ದರು, ಮಹಾವಾಗ್ಮಿಗಳಾಗಿದ್ದರು. ಜತೆಗೆ ಸರ್ವಾಂಗ ಸುಂದರವಾದ, ಪ್ರಮಾಣ ಬದ್ಧ ಮೈಕಟ್ಟನ್ನು ಪಡೆದ ದೃಢಕಾಯರೂ ಆಗಿದ್ದರು. ಸ್ವತಃ ಇದಾವುದನ್ನು ಅಂಟಿಸಿಕೊಳ್ಳದ ಬದುಕಿನ ನಿರ್ಲಿಪ್ತ ಧೀರ ಸನ್ಯಾಸಿಗಳಾಗಿದ್ದರು.

ಚೇತನಾಚೇತನ ಜಗಕ್ಕೆಲ್ಲ ಒಡೆಯ ವಾಯು ಜೀವೋತ್ತಮ. ತ್ರೇತೆಯಲ್ಲಿ ಹನುಮನಾಗಿ ದ್ವಾಪರದಲ್ಲಿ ಭೀಮಸೇನನಾಗಿ ಹಾಗೂ ಕಲಿಯುಗದಲ್ಲಿ ಶ್ರೀ ಮಧ್ವಾಚಾರ್ಯರಾಗಿಯೂ ಅವತರಿಸಿದ ಈ ಮಹಿಮರು ಜ್ಞಾನಬಲ ದೈಸಿರಿಗಳ ಅದ್ಭುತ ಸಂಗಮ. ಭಕ್ತಿಪಂಥ ಪ್ರವರ್ತಕ ಮನೀಷಿಗಳು.

ಇನ್ನು ನಾಸ್ತಿಕವಾದಗಳು, ಅವೈದಿಕವಾದಗಳು, ವೇದ ವಿರುದ್ಧವಾದಗಳು, ಮಾಯಾವಾದ ಮೊದಲಾದ ದುರ್ಮತಗಳೂ ಸಜ್ಜನರ ಮತಿಯನ್ನು ಕಲಿಷಿತಗೊಳಿಸಿದ್ದವು. ಹೀಗಿರಲು ಎಲ್ಲಕ್ಕೂ ಉತ್ತರ ರೂಪವಾಗಿ ಅವತರಿಸಿ ಬಂದವರು ಶ್ರೀ ಮಧ್ವಾಚಾರ್ಯರು. ಇವರು ಜಗತ್ತು ಕಂಡ ಅಸದೃಶ ದಾರ್ಶನಿಕರು, ದರ್ಶನೀಯರು.

ಮಧ್ಯಗೇಹ ವೇದವತಿ ದಂಪತಿಗಳ ಸತ್ಪುತ್ರರಾಗಿ ಭುವಿಗವತರಿಸಿದ ಶ್ರೀ ಮಧ್ವರು.

ಉಡುಪಿ ಸಮೀಪದ ಪಾಜಕ ಕ್ಷೇತ್ರ, ನಿವಾಸಿಗಳಾದ ಮಧ್ಯಗೇಹ ವೇದವತಿ ದಂಪತಿಗಳು ಸತ್ಪುತ್ರನಾಗಬೇಕೆಂಬ ಉದ್ದೇಶದಿಂದ 12 ವರ್ಷಗಳ ಕಾಲ ಕಠಿಣ ವ್ರತಗಳನ್ನು ಆಚರಿಸುತ್ತ ಶ್ರೀ ಅನಂತೇಶ್ವರ ದೇವರನ್ನು ಆರಾಧಿಸುತ್ತಿದ್ದರು. ಈ ದಂಪತಿಗಳಿಗೆ ಹಿಂದೆ ಹುಟ್ಟಿದ ಈರ್ವರು ಪುತ್ರರು ಅಸುನೀಗಿದ್ದರು. ಕಲ್ಯಾಣಿದೇವಿ ಎಂಬಾಕೆ ಪುತ್ರಿ ಇದ್ದಳು.

ಮಧ್ಯಗೇಹರು ಶ್ರೀ ಅನಂತೇಶ್ವರದಲ್ಲಿ ಪುರಾಣ ಪ್ರವಚನ ಮಾಡುತ್ತಿದ್ದರು. ಜನರು ಮಾತ್ರವಲ್ಲದೆ ದೇವತೆಗಳೂ ಕೂಡ ಕೇಳಿ ಸಂತೋಷಗೊಳ್ಳುತ್ತಿದ್ದರು. ಯಾಕೆಂದರೆ ಶ್ರೀ ಅನಂತೇಶ್ವರನೆಡೆಗೆ ದೇವತೆಗಳು ಬರುವುದು ಸಹಜವಾಗಿತ್ತು.

ಪಾಂಡವರು ಸ್ವರ್ಗವನ್ನು ಹೊಂದಿ 4300 ವರ್ಷಗಳು ಕಳೆದಾಗ ಶ್ರೀಮನ್ನಾರಾಯಣನು ಮುಖ್ಯಪ್ರಾಣ ದೇವರನ್ನು ಕರೆದು ಭೂಮಿಯಲ್ಲಿ ಅವತರಿಸಿ ತತ್ತ್ವಜ್ಞಾನವನ್ನು ತನ್ನ ಗುಣಗಳನ್ನು ಸಜ್ಜನರಿಗೆ ಬೋಧಿಸುವಂತೆ ಅಜ್ಞಾಪಿಸಿದರು. ದೇವತೆಗೂ ಇದನ್ನು ಅನುಮೋದಿಸಿ ಸಜ್ಜನರನ್ನು ಉದ್ಧರಿಸುವಂತೆ ಪ್ರಾರ್ಥಿಸಿದರು. ಅದೇ ಸಂದರ್ಭದಲ್ಲಿ ಸಾಧಕರಾದ ವಿಷ್ಣು ಭಕ್ತರು ವೇದ - ಉಪನಿಷತ್ ಬ್ರಹ್ಮಸೂತ್ರ ಮಹಾಭಾರತ ಪುರಾಣ ಇವುಗಳ ಸರಿಯಾದ ಅರ್ಥವನ್ನು ಯತಾರ್ಥ ಜ್ಞಾನವನ್ನು ಕರುಣಿಸುವಂತೆ ಶ್ರೀ ಅನಂತೇಶ್ವರ ಸ್ವಾಮಿಯಲ್ಲಿ ಪ್ರಾರ್ಥಿಸುತ್ತಿದ್ದರು.

ಅಚ್ಚರಿಯ ಘಟನೆಗೆ ಸಾಕ್ಷಿಯಾದ ಜನಸ್ತೋಮ

ಒಮ್ಮೆ ಶ್ರೀದೇವರ ಸಾನಿಧ್ಯದಲ್ಲಿ ಮಕರ ಸಂಕ್ರಮಣೋತ್ಸವ ನಡೆಯುತ್ತಿತ್ತು. ಆಗ ಇದ್ದಕ್ಕಿದ್ದಂತೆ ಶ್ರೀ ಅನಂತೇಶ್ವರದಲ್ಲಿ ಸ್ವಾಮಿಯು ಓರ್ವ ವ್ಯಕ್ತಿಯ ಮೇಲೆ ಆಕರ್ಷಣೆಯಾದ, ದೇವರಾಕರ್ಷಣೆಯಾದ ಆ ವ್ಯಕ್ತಿಯು ಓಡುತ್ತ ಅಲ್ಲಿದ್ದ ಧ್ವಜಸ್ತಂಭದ ಮೇಲೆ ಸರಸರನೇ ಏರಿದ. ತುತ್ತತುದಿಯಲ್ಲಿ ನಿಂತು ನರ್ತನ ಮಾಡತೊಡಗಿದ ದೃಶ್ಯವನ್ನು ಎಲ್ಲರೂ ಬೆರಗಾಗಿ ನೋಡುತ್ತಿದ್ದರು. ಆಗ ಎರಡೂ ಕೈಗಳನ್ನೂ ಎತ್ತಿ ಹಿಡಿದು ಏರುದನಿಯಲ್ಲಿ ಎಲ್ಲರಿಗೂ ಕೇಳಿಸುವಂತೆ ಹೀಗೆ ಹೇಳಿದ... 'ಕೇಳಿರಪ್ಪಾ ಕೇಳಿರಿ,ಜಗತ್ತಿಗೆ ಹಿತವನ್ನು ಬಯಸುವ ಸರ್ವಜ್ಞನಾದ ಮಹಾನುಭಾವನೊಬ್ಬ ಅತಿ ಶೀಘ್ರವಾಗಿ ಇಲ್ಲೇ ಸಮೀಪದಲ್ಲಿ ಅವತರಿಸಲಿರುವನು. ತತ್ವಜ್ಞಾನವನ್ನು ಉಪದೇಶಿಸಿ ನಿಮ್ಮಲ್ಲರನ್ನು ಅಜ್ಞಾನಾಂಧಕಾರದಿಂದ ಪಾರು ಮಾಡುವನು, ದುಃಖದಿಂದ ಬಿಡಿಸಲಿರುವನು. ಇಷ್ಟಾರ್ಥಗಳನ್ನು ಈಡೇರಿಸಲಿಕ್ಕಿದ್ದಾನೆ. ಇದು ಸತ್ಯ, ಇದು ಸತ್ಯ, ಕೇಳಿರಪ್ಪಾ ಕೇಳಿರಿ, ಎಂದು ಸುರಿ ಧ್ವಜಸ್ತಂಭದಿಂದ ಇಳಿದು ಬಂದ. ಈ ಸಂದೇಶವನ್ನು ಕೇಳಿದ ಜನರು ಇದು ಶ್ರೀ ಅನಂತೇಶ್ವರನ ಸಂದೇಶವೆಂದು ನಂಬಿ, ನಮ್ಮೆಲ್ಲರ ಸಕಲ ಇಷ್ಟಾರ್ಥಗಳು ಈಡೇರುವ ಕಾಲ ಸನ್ನಿಹಿತವಾಯಿತೆಂದು ಆನಂದದಿಂದ ಮುಳುಗಿದರು.

ಕಾಲಾಂತರದಲ್ಲಿ ಗರ್ಭಿಣಿಯಾದ ವೇದವತಿಯು ಆಶ್ವೀಜಮಾಸ ವಿಜಯದಶಮಿಯಂದು ಮಗುವೊಂದಕ್ಕೆ ಜನ್ಮವಿತ್ತಳು. ಅದೇ ಸಂದರ್ಭದಲ್ಲಿ ಭಗವಂತನ ಆಜ್ಞೆ ದೇವತೆಗಳ ಪ್ರಾರ್ಥನೆ ಇವುಗಳಿಂದಾಗಿ ಶ್ರೀ ವಾಯುದೇವರು ಭುವಿಗಿಳಿದು ಶ್ರೀ ಅನಂತೇಶ್ವರನಿಗೆ ವಂದಿಸಿ ಪಾಜಕಕ್ಕೆ ಬಂದರು. ಮಧ್ಯಗೇಹರ ಮನೆಯನ್ನು ಪ್ರವೇಶಿಸಿದರು. ಆಗ ತಾನೆ ವೇದವತಿ ಹಡೆದಿದ್ದಳು. ವಾಯುದೇವರು ಆ ಮಗುವಿನ ದೇಹದಲ್ಲಿದ್ದ 'ಮಣಿಭದ್ರ' ಎಂಬ ಜೀವವನ್ನು ಹೊರಗಿಡಿಸಿ ತಾನು ಪ್ರವೇಶಿಸಿದರು.

ಕುಬೇರನ ಭಕ್ತನೂ, ವಾಯುದೇವರ ಶಿಷ್ಯನೂ ಆದ ಮಣಿಭದ್ರನು ಶ್ರೀ ವಾಯುದೇವರ ಆಜ್ಞಾನುಸಾರ ತನ್ನ ಲೋಕಕ್ಕೆ ತೆರಳಿದನು. ಅದೇ ದೇಹದಲ್ಲಿದ್ದ 'ಲಾತವ್ಯ' ಎಂಬ ಋಜುಗಳು ಶ್ರೀ ವಾಯುದೇವರಿಂದ ಬೀಳ್ಕೊಂಡು ತಮ್ಮ ಲೋಕಕ್ಕೆ ತೆರಳಿದರು. ಮೊದಲನೇ ಅವತಾರದಲ್ಲಿ ಹನುಮಂತನಾಗಿ ಶ್ರೀರಾಮನ ಸೇವೆಯನ್ನು ಕೈಗೊಂಡರೆ,ದ್ವಿತೀಯ ಅವತಾರದಲ್ಲಿ ಭೀಮನಾಗಿ ಶ್ರೀಕೃಷ್ಣನ ಸೇವೆಯನ್ನೂ ಅದರ ಫಲವಾಗಿ ಜಗದ್ಗುರುಗಳಾದ ವಾಯುದೇವರೇ ಅವರಲ್ಲಿ ಅವತರಿಸಿದರು. ಮಧ್ಯಗೇಹ ದಂಪತಿಗಳು ಆ ಶಿಶುವಿಗೆ 'ವಾಸುದೇವ' ಎಂದು ನಾಮಕರಣ ಮಾಡಿದರು.

'ವಾ' ಎಂದರೆ ಜ್ಞಾನ, ಅಸುದೇವ ಎಂದರೆ ಮುಖ್ಯಪ್ರಾಣ, ವಾಸುದೇವ ಎಂದರೆ ಜ್ಞಾನ ಕಾರ್ಯಕ್ಕಾಗಿ ಅವತರಿಸಿದ ಮುಖ್ಯಪ್ರಾಣ ಎಂದರ್ಥ. ಮಗುವು ಹಾಲು ಕುಡಿಯಲು ಗೋದಾನ ಮಾಡಿದ ಮೂಡಿಲ್ಲಾಯ ಎಂಬುವರು ದಾನದ ಫಲವಾಗಿ ತನ್ನ ಮಗನ ಮಗನಾಗಿ ಹುಟ್ಟಿ ಮಧ್ವಶಾಸ್ತ್ರ ಓದಿ ಮೋಕ್ಷವನ್ನೇ ಪಡೆದರು.


ವಾಸುದೇವ ಮಗುವಾಗಿದ್ದಲೇ ಹುರುಳಿ ತಿಂದು ಜೀರ್ಣಿಸಿಕೊಂಡನು. ಮೂರು ವರ್ಷದಲ್ಲಿ ತಂದೆ, ತಾಯಿಗಳಿಂದ ಕಣ್ತಪ್ಪಿಸಿಕೊಂಡು ಏಕಾಂಗಿಯಾಗಿ ಅರಣ್ಯ ಪ್ರದೇಶವನ್ನು ದಾಟಿ, ಉಡುಪಿಯ ಅನಂತೇಶ್ವರನ ಬಳಿ ತೆರಳಿದನು. ತಂದೆ ಮಾಡಿದ ಸಾಲವನ್ನು ಹುಣಸೆ ಬೀಜಗಳನ್ನು ಕೊಡುವ ಮೂಲಕ ತೀರಿಸಿದನು. ಆ ಮಗುವನ್ನು ಮಣಿಮಂತನು ಹಾವಾಗಿ ಕಚ್ಚಲು ಬಂದಾಗ ಹೆಬ್ಬೆಟ್ಟಿನಿಂದ ತುಳಿದು ಕೊಂಡನು. ಐದನೆಯ ವರ್ಷದಲ್ಲಿ ಅಕ್ಷರಾಭ್ಯಾಸವಾಯಿತು. ಉಪನಯನವೂ ಆಯಿತು. ಹತ್ತು ವರ್ಷಗಳಲ್ಲಿ ಗುರುಕುಲವಾಸವೇ ಮುಗಿಯಿತು. ಹನ್ನೊಂದನೆಯ ವರ್ಷಕ್ಕೆ ಸನ್ಯಾಸಾಶ್ರಮವನ್ನು ಸ್ವೀಕರಿಸಿ ವಾಸುದೇವನೇ ಪೂರ್ಣ ಪ್ರಜ್ಞನಾದನು.

ಹನ್ನೊಂದನೆಯ ವರ್ಷದ ಪೂರ್ಣಪ್ರಜ್ಞರಿಗೆ ಗಂಗಾಸ್ನಾನ ಮಾಡಲು ತವಕ ಉಂಟಾದಾಗ ಗಂಗಾದೇವಿಯೇ ಮಧ್ವಸರೋವರಕ್ಕೆ ಆಗಮಿಸಿದಳು. ವಾದಿಸಿಂಹ ಹಾಗೂ ಬುದ್ಧಿ ಸಾಗರರೆಂಬ ಅದ್ವೈತ ಪಂಡಿತರನ್ನು ವಾದದಲ್ಲಿ ಸೋಲಿಸಿದರು. ದಕ್ಷಿಣ ಭಾರತದಲ್ಲಿ ದಿಗ್ವಿಜಯಕ್ಕಾಗಿ ಹೊರಟರು. ಸರ್ವಮೂಲಗ್ರಂಥಗಳಲ್ಲಿ ಮೊದಲನೆಯದಾದ ಗೀತಾಭಾಷ್ಯವನ್ನು

ಬದರಿಕಾಶ್ರಮದಲ್ಲಿ ನಾರಾಯಣನಿಗೆ ಸಮರ್ಪಣೆ ಮಾಡಿದರು. ಅನಂತರ ದೊಡ್ಡ ಬದರಿಕಾಶ್ರಮಕ್ಕೆ ತೆರಳಿ ಬ್ರಹ್ಮ ಸೂತ್ರಗಳ ಅಪೂರ್ವ ಪ್ರಮೇಯಗಳನ್ನು ವೇದವ್ಯಾಸದೇವರ ಬಳಿ ಉಪ ದೇಶ ಪಡೆದುಕೊಂಡರು. ಪುನಃ ಆಗಮಿಸಿ ಬ್ರಹ್ಮಸೂತ್ರಭಾಷ್ಯ ಮೊದಲಾದ ಅನೇಕ ಗ್ರಂಥಗಳನ್ನು ರಚನೆ ಮಾಡಿದರು. ಅದ್ವೈತ ಮತ ಮೊದಲಾದ ಎಲ್ಲ ದುರ್ಮತಗಳನ್ನು ನಿರ್ಮೂಲಗೊಳಿಸಿ, ವೈಷ್ಣವಸಿದ್ಧಾಂತವನ್ನು ಪ್ರತಿಷ್ಠಾಪನೆ ಮಾಡಿದರು. ವಿಷ್ಣುವೇ ಸರ್ವೋತ್ತಮನಾಗಿದ್ದಾನೆ. ವಾಯುದೇವರು ಜೀವೋತ್ತಮ ರಾಗಿದ್ದಾರೆ, ಪಂಚಭೇದಗಳು ಸತ್ಯವಾಗಿವೆ. ಪ್ರತಿಯೊಬ್ಬ ರಲ್ಲಿಯೂ ತಾರತಮ್ಯವಿದೆ. ಮೋಕ್ಷದಲ್ಲೂ ಕೂಡ ತಾರ ತಮ್ಯವಿದೆ. ಸಮಗ್ರ ವೇದದಿಂದ ಪರಮಮುಖ್ಯ ವೃತ್ತಿಯಿಂದ ಪ್ರತಿಪಾದ್ಯನಾದವನು ಮಹಾವಿಷ್ಣು ಮಾತ್ರ. ಇವೇ ಮೊದಲಾದ ತತ್ವಗಳನ್ನು ಜಗತ್ತಿನಲ್ಲಿ ಸ್ಥಾಪನೆ ಮಾಡಿದರು. ಈ ತತ್ತ್ವವಾದ ವನ್ನು ನಾನು ಹುಟ್ಟು ಹಾಕಿದ್ದಲ್ಲ. ಎಲ್ಲವೂ ಕೂಡ ಶ್ರುತಿ ಸ್ಮೃತಿ, ಬ್ರಹ್ಮ ಮೀಮಾಂಸಶಾಸ್ತ್ರ ಹಾಗೂ ಪುರಾಣಗಳಲ್ಲಿ ಪ್ರತಿಪಾದನೆ ಮಾಡಿದ್ದೇ ಆಗಿದೆ ಎಂದು ಸಾಬೀತು ಮಾಡಿದರು. ಇಂಥ ಶ್ರೇಷ್ಠ ರಾದ ಮಧ್ವಾಚಾರ್ಯರೇ ನಮ್ಮ ಗುರುಗಳು, ಎಂದೆಂದೂ ಇವರೇ ನಮ್ಮ ಉದ್ಧಾರಕರು.

**ವಿಶ್ವಮಾನ್ಯ**

ಹದಿಮೂರನೆಯ ಶತಮಾನದಲ್ಲಿ ಹುಟ್ಟಿದ ಮಧ್ವಾ ಚಾರ್ಯರ ಕೊಡುಗೆ ದಾರ್ಶನಿಕ ಪ್ರಪಂಚದಲ್ಲಿ ಹೊಸ ಅಲೆಯನ್ನು ಸೃಷ್ಟಿಸಿತು. ಅತ್ಯಂತ ಸರಳ ರೀತಿಯಲ್ಲಿ ಜನ ಸಾಮಾನ್ಯರಿಗೂ ಮನವರಿಕೆಯಾಗುವ ಪರಸ್ಪರ ಮನಗಳನ್ನು ಬೆಸೆಯುವ, ಸುಲಭದಲ್ಲಿ ಮುಕ್ತಿಪಥ ತೋರುವ ತತ್ತ್ವವಾದವನ್ನು ಜಗತ್ತಿಗೆ ನೀಡಿದರು. ವೇದ, ಉಪನಿಷತ್ತುಗಳು, ರಾಮಾಯಣ, ಇತಿಹಾಸ ಪುರಾಣಗಳು, ಬ್ರಹ್ಮ ಸೂತ್ರಗಳು ಹೀಗೆ ನಮ್ಮ ಪ್ರಾಚೀನ ಸಂಸ್ಕೃತ ಸಾಹಿತ್ಯದ ಗುರಿ ಒಂದೇ, ನೆಲೆ ಒಂದೇ, ಅದು ಭಗವಂತನ ಸರ್ವೋತ್ತಮ ವ್ಯಕ್ತಿತ್ವವನ್ನು ವಿಶದ ಪಡಿಸುವುದು. ಸಜ್ಜನರಿಗೆ ಸುಖದ ದಾರಿಯನ್ನು ತೋರುವುದು.



ಅದೃಶ್ಯರಾಗಿ ಉಡುಪಿ ಕ್ಷೇತ್ರದಲ್ಲಿ ಶ್ರೀಕೃಷ್ಣ ಶ್ರೀ ಅನಂತೇಶ್ವರನ ಸೇವೆಯನ್ನೂ ದೃಶ್ಯರಾಗಿ ಎಲ್ಲರ ಕಣ್ಣಿಗೆ ಗೋಚರಿಸುತ್ತ ಬದರಿಯಲ್ಲಿ ಶ್ರೀ ವೇದವ್ಯಾಸರ ಹಾಗೂ ಶ್ರೀ ನಾರಾಯಣರ ಸೇವೆಯನ್ನೂ ಗೈದವರು. ದೇವಮಾನದ ನೂರು ವರ್ಷಕಾಲ (36 ಸಾವಿರ ವರ್ಷಗಳ ಕಾಲ) ಶ್ರೀ ಮಧ್ವಾ ಚಾರ್ಯರು ಉಡುಪಿಯಲ್ಲಿ ಅದೃಶ್ಯರೂಪದಿಂದಲೂ, ಬದರಿ ಯಲ್ಲಿ ದೃಶ್ಯ ರೂಪದಿಂದಲೂ ಭಕ್ತರನ್ನು ಅನುಗ್ರಹಿಸುತ್ತಿರುವರು.

ಉಡುಪಿಯಿಂದ 12 ಕಿ.ಮೀ. ದೂರದಲ್ಲಿದೆ. ಶ್ರೀ ಮಧ್ವಾಚಾರ್ಯರ ಜನ್ಮಸ್ಥಳ ಪಾಜಕದಲ್ಲಿ. ಶ್ರೀ ಮಧ್ವಾಚಾರ್ಯರ ಪಾದದ ಗುರುತು, ಮಧ್ವರು ತಾಯಿಗೆ ಕೊಟ್ಟ ವಚನದಂತೆ ರಾತ್ರೋರಾತ್ರಿ ಗೋಚರಿಸಿದ ದೋಣಿ ತೀರ್ಥ, ಮಧ್ವವನ, ಅನಂತಪದ್ಮನಾಭ ದೇಗುಲ, ಶ್ರೀ ಮಧ್ವಾಚಾರ್ಯರ ಆಲಯಗಳಿವೆ, ಪ್ರಸ್ತುತ ಪಾಜಕ ಕ್ಷೇತ್ರದ ಉಸ್ತುವಾರಿಯನ್ನು ಕಾಣಿಯೂರು ಮಠದ ಶ್ರೀ ವಿದ್ಯಾವಲ್ಲಭ ತೀರ್ಥರು ವಹಿಸಿಕೊಂಡಿದ್ದಾರೆ.

**ಐದು ತೀರ್ಥಗಳು**

ಕುಂಜಾರು ಗಿರಿಯಲ್ಲಿ ಪರಶುರಾಮರಿಂದ ನಿರ್ಮಿತ ವಾದ ಪರಶುತೀರ್ಥ, ಧನುಶ್‌ತೀರ್ಥ, ಬಾಣತೀರ್ಥ ಗದಾ ತೀರ್ಥವಿದೆ. ನಾರಾಯಣ ನಡ್ಡಿಲ್ಲಾಯ ಹಾಗೂ ವೇದವತಿ ದಂಪತಿಗಳ ಮಗನಾಗಿ ಜನಿಸಿದ ಮುಖ್ಯಪ್ರಾಣ ನಿರ್ಮಿಸಿದ ವಾಸುದೇವ ತೀರ್ಥವು ಕುಲದೇವತೆಯ ಮಂದಿರದ ಹಿಂಭಾಗ ದಲ್ಲಿದೆ.

**ಬಾಲಲೀಲೆಯ ಕುರುಹುಗಳು**

ಸರ್ಪ ರೂಪದಲ್ಲಿ ಮಣಿಮಂತನೆಂಬ ಅಸುರ ವಾಸು ದೇವನನ್ನು ಕಚ್ಚಲು ಬಂದಾಗ ತನ್ನ ಪುಟ್ಟಪಾದಗಳಿಂದ ವಾಸುದೇವನು ಅದನ್ನು ಸಂಹರಿಸಿದ ಬಂಡೆಗಳ್ಳಿನಲ್ಲಿ ಸರ್ಪ ಹಾಗೂ ವಾಸುದೇವನ ಹೆಜ್ಜೆಯ ಗುರುತುಗಳಿವೆ. ಅಲ್ಲಿ ಪುಟ್ಟ ಸ್ಮಾರಕವೊಂದನ್ನು ಕಟ್ಟಲಾಗಿದೆ. ತಾಯಿಯ ಕರೆಗೆ ಓಗೊಟ್ಟ ವಾಸುದೇವ, ಬೆಟ್ಟದಿಂದ ಕೆಳಗೆ ಜಿಗಿದಾಗ ಅವನ ಪಾವನ ಪಾದದ ಹೆಗ್ಗುರುತು ಮೂಡಿತು. ಅಲ್ಲಿಯೇ ಶ್ರೀ ವಾದಿರಾಜರು ಮಧ್ವರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಿದ್ದಾರೆ.

ಬಾಲಕ ವಾಸುದೇವನು ಹಾಲು ಮೊಸರುಗಳ ಪಾತ್ರೆಯ ಮೇಲೆ ಇಟ್ಟ ಹಾಸುಗಲ್ಲುಗಳನ್ನು ಇಂದಿಗೂ ಇಲ್ಲಿ ತೋರಿ ಸುತ್ತಾರೆ.ಬಾಲಕ ವಾಸುದೇವನು ತಂದೆಯ ಸಾಲವನ್ನು ತೀರಿ ಸಲು ಹುಣಸೇಮರದ ಬೀಜಗಳನ್ನು ಸಾಲ ಕೊಟ್ಟವನಿಗೆ ಹೆಕ್ಕಿ ನೀಡಿದ ಘಟನೆಯನ್ನು ಇಲ್ಲಿ ವಿವರಿಸುತ್ತಾರೆ. ಆ ಹುಣಸೇಮರದ ಪರಂಪರೆಯ ಮರವೊಂದು ಅಂದಿನ ಘಟನೆಗೆ ಮೂಕ ಸಾಕ್ಷಿಯಂತೆ ಇದೆ.

ಹತ್ತು ಹಲವು ಸಿದ್ಧಾಂತಗಳು ಭೂಮಂಡಲದಲ್ಲಿ ಬೇರು ಬಿಟ್ಟಾಗ ನೀನು ಪ್ರತಿಪಾದಿಸುವ ಹೊಸ ಸಿದ್ದಾಂತವು ಹೇಗೆ ಜನಪ್ರಿಯವಾಗಬಲ್ಲದು? ಎಂಬ ತಂದೆಯ ಶಂಕೆಗೆ ವಾಸುದೇವನು ಕೈಯಲ್ಲಿರುವ ಒಣಗಿದ ವಟವೃಕ್ಷದ ಪುಟ್ಟ ಕೋಲು ನೆಟ್ಟು ' ಇದು ಹೆಮ್ಮರವಾಗಿ ಬೆಳೆದಲ್ಲಿ ನನ್ನ ಸಿದ್ಧಾಂತವು ವಿಶ್ವವನ್ನು ಬೆಳಗುವುದು' ಎಂದು ಸಂದೇಶ ನೀಡಿದನೆಂಬ ಕಥೆಯಿದೆ. ಹಾಗೆ ನೆಟ್ಟ ಮರವು, ಬೃಹದಾಕಾರದಲ್ಲಿ ಬೆಳೆದಿರುವು ದನ್ನು ಇಲ್ಲಿ ನೋಡಬಹುದು.

## ಕುಂಜಾರುಗಿರಿ

ಉಡುಪಿಯಿಂದ 11 ಕಿ.ಮೀ. ದೂರದಲ್ಲಿದೆ, ಇದನ್ನು ಕುಂಜಾರು (ಆನೆ) ಗಿರಿ, ದುರ್ಗಾಬೆಟ್ಟ ಮತ್ತು ವಿಮಾನಗಿರಿ ಎಂತಲೂ ಕರೆಯುತ್ತಾರೆ. ಇಲ್ಲಿರುವ ದುರ್ಗಾದೇವಿಯನ್ನು ಪರಶುರಾಮ ಪ್ರತಿಷ್ಠಾಪಿಸಿದ ಎಂಬ ಐತಿಹ್ಯವಿದೆ. ದುರ್ಗಾ ದೇವಿಯನ್ನು ಯೋಗಮಾಯಾ ಸ್ವರೂಪಿಣಿ ಎಂದೂ ಬಣ್ಣಿಸು ತ್ತಾರೆ. ನಾರಾಯಣಾಚಾರ್ಯರ ಸುಮಧ್ವ ವಿಜಯ ಮತ್ತು ವಾದಿ ರಾಜರ ತೀರ್ಥ ಪ್ರಬಂಧ ಗ್ರಂಥಗಳಲ್ಲಿ ಕುಂಜಾರುಗಿರಿಯ ಉಲ್ಲೇಖವಿದೆ. ಕಟೀಲಿನ ದುರ್ಗೆ 'ಜಲದುರ್ಗೆ' ಎನಿಸಿದರೆ, ಕುಂಜಾರು ಬೆಟ್ಟಗಳಲ್ಲಿರುವ ದುರ್ಗೆ 'ಗಿರಿದುರ್ಗೆ'ಯಾಗಿದ್ದಾಳೆ. ಬಪ್ಪನಾಡಿಯಲ್ಲಿರುವ ದುರ್ಗೆಯನ್ನು 'ಸ್ಥಲದುರ್ಗೆ' ಎನ್ನುತ್ತಾರೆ. ಪರಶುರಾಮರ ಆಲಯವನ್ನೂ ನೋಡಬಹುದು.

## ವಡಭಾಂಡೇಶ್ವರ ದೇಗುಲ

ಬಲರಾಮರಿಗೆ ಮೀಸಲಾದ ಕ್ಷೇತ್ರ. ಈ ಸ್ಥಳದಲ್ಲೇ ಮಧ್ವಾ ಚಾರ್ಯರಿಗೆ ಗೋಪಿಚಂದನದಲ್ಲಿ ಗುಪ್ತನಾಗಿದ್ದ ಶ್ರೀ ಕೃಷ್ಣನ ವಿಗ್ರಹ ಗೋಚರಿಸಿತು ಎನ್ನಲಾಗಿದೆ. ಹಡಗಿನ ಕ್ಯಾಪ್ಟನ್ ಒಬ್ಬ ನಿಂದ ಕೃಷ್ಣನ ವಿಗ್ರಹವನ್ನು ಪಡೆದ ಸ್ಥಳ ಎಂದೂ ಹೇಳ ಲಾಗುತ್ತದೆ. ಅದಕ್ಕೆ ಪೂರಕವೆನ್ನುವಂತೆ, ಒಂದು ಪುಟ್ಟ ಆಲಯವನ್ನು ಟ್ಯಾಂಕಿನ ಎದುರು ಕಟ್ಟಲಾಗಿದೆ. ಇದು ಮಲ್ಪೆ ಯಿಂದ ಅರ್ಧ ಕಿ.ಮೀ. ದೂರದಲ್ಲಿದೆ.

ಸಮುದ್ರ ಪ್ರೀತಿಯು ಆಚಾರ್ಯರಿಗೆ ನೀಲಮೇಘ ಶ್ಯಾಮನನ್ನು ನೀಡಿತು. ಈ ಮುಕುಂದನನ್ನು ಸ್ವೀಕರಿಸಿದ ಮಧ್ವರು ಸ್ತೋತ್ರದೊಂದಿಗೆ ಉಡುಪಿಗೆ ತಂದು ಮತ್ತೆ ಪ್ರತಿಷ್ಠಾಪಿಸಿ ತನ್ನ ಮಂಗಳ ಧ್ವನಿಗೆ ಪ್ರತಿಮಾ ರೂಪವನ್ನು ನೀಡಿದರು. ಕೃಷ್ಣನೆಷ್ಟು ಪ್ರಿಯನೋ ಮಧ್ವರ ದ್ವೈತವೂ ಮಧುರವಾಗಲು ಅಷ್ಟೇ ಸಹಕಾರಿಯಾಯಿತು. ವೈದಿಕದ ವಿಸ್ತೃತವಾದ ಪೂಜಾವಿಧಾನ, ಹಾಗೂ ಮಣ್ಣಿನ ಆರಾಧನಾ ಸೊಗಡಿನ ಮೌಲ್ಯಗಳನ್ನು ಜೋಡಿಸಿಕೊಂಡು ಶ್ರೀಕೃಷ್ಣ ಮಠದಲ್ಲಿ ನಿತ್ಯ ಉಪಾಸನಾ ಶೈಲಿ ರೂಪುಗೊಂಡಿತು. ಈ ಪೂಜಾಕ್ರಮ ನಿಬ್ಬೆರಗುಗೊಳಿಸುವಷ್ಟು ವೈವಿಧ್ಯಮಯ ಮತ್ತು ವಿಸ್ತತ ಹರವುಳ್ಳದ್ದು.



ಅಧ್ಯಯನ ಅಧ್ಯಾಪನ, ಧರ್ಮ ಪ್ರಸಾರ ಅನ್ನ ದಾಸೋಹ ಪ್ರಧಾನವಾಗಿ ನಿತ್ಯೋತ್ಸವ ನಡೆಸುವತ್ತಾ ಉಡುಪಿ ಧರ್ಮ ಸಂಸ್ಕೃತಿ ವಿಜೃಂಭಿಸುವ ಕ್ಷೇತ್ರವಾಗುವುದಕ್ಕೆ ಆಚಾರ್ಯ ಮಧ್ವರ ಅಂದಿನ ಕನಸು ಕಾರಣವಲ್ಲವೇ?

## ಅಷ್ಟಮಠಗಳು

ಉಡುಪಿಯಲ್ಲಿ ರುಕ್ಮಿಣಿ ಕರಾರ್ಚಿತ ಶ್ರೀಕೃಷ್ಣನನ್ನು ಪ್ರತಿ ಷ್ಠಾಪಿಸಿ ದ್ವಾರಕಾಧೀಶನ ಪೂಜೆಗಾಗಿ ಎಂಟು ಯತಿಗಳನ್ನು ನೇಮಿಸಿ ಪರ್ಯಾಯ ಕ್ರಮದಲ್ಲಿ ಅರ್ಚಿಸಲು ಆದೇಶಿಸಿದರು. ಆಚಾರ್ಯರು ಮಠಸಂಸ್ಥಾನಗಳನ್ನು ಕಟ್ಟಿದವರಲ್ಲ, ಅವರು ತನ್ನ ಸನ್ಯಾಸಿ ಶಿಷ್ಯರಿಗೆ ನೀಡಿದ ಆಸ್ತಿಯೆಂದರೆ ದೇವರ ಪ್ರತಿಮೆ, ದಂಡ, ಜೋಳಿಗೆ ಮಾತ್ರ, ಮುಂದೆ ಶಿಷ್ಯ ಸಂಪತ್ತು ಬೆಳೆದಂತೆಲ್ಲ ಮಠಗಳು ರೂಪುಗೊಂಡವು. ಅಹಿಂಸೆ, ಇಂದ್ರಿಯ ನಿಗ್ರಹ, ಭೂತದಯೆ, ಕ್ಷಮೆ, ಜ್ಞಾನ, ಸ್ವಧರ್ಮಾಚರಣೆ ಸತ್ಯ ಸಂಧತೆ ಮತ್ತು ಧ್ಯಾನಗಳೆಂಬ ಎಂಟು ಪ್ರಸ್ಥಾನಗಳ ಮೂಲಕ ಕೃಷ್ಣ ಪೂಜೆ ನಡೆಯಲು ಮಧ್ವರು ಅಷ್ಟಮಠಗಳನ್ನು ಸ್ಥಾಪಿಸಿದರು. ಅಷ್ಟಯತಿಗಳನ್ನು (ತನ್ನ ಶಿಷ್ಯರು) ಅಷ್ಟಮಠಕ್ಕೆ ನಿಯೋಜಿಸಿ ಪರ್ಯಾಯದಲ್ಲಿ ಶ್ರೀ ಕೃಷ್ಣ ಪೂಜಾ ಕೈಂಕರ್ಯಕ್ಕೆ ವ್ಯವಸ್ಥೆ ಗೊಳಿಸಿದರು.

ಮಧ್ವರ ಬಂಡೆ - ಆಚಾರ್ಯರ ಜ್ಞಾನ ದೇಹಬಲಕ್ಕೆ ಪುರಾವೆ

ಸನಾತನ ಸಂಸ್ಕೃತಿಯ ರಕ್ಷಣೆಗೆ ಬುದ್ಧಿ ಬಲದಂತೆ ದೇಹಬಲವೂ ಅಗತ್ಯ ಎಂದು ದೃಢವಾಗಿ ನಂಬಿದ್ದ ಆಚಾರ್ಯ ಮಧ್ವರು ಬಾಲ್ಯದ ಆಟ ಪಾಠ ಊಟಗಳಲ್ಲಿ ತೋರಿದ ಪವಾಡಗಳೆಲ್ಲ ದೇಹಬಲ ಪ್ರತಿಪಾದ್ಯವೇ ಆಗಿತ್ತು. ಮುಂದೆ ತನ್ನ ತತ್ತ್ವವಾದದ ಮಂಡನೆಯಲ್ಲಿ ವಾದವನ್ನೇ ಪ್ರಧಾನವಾಗಿರಿಸಿ ಕೊಂಡು ನೂತನ ಚಿಂತನೆಧಾರೆಯನ್ನು ಸ್ಥಾಪಿಸುವಲ್ಲಿ ಜ್ಞಾನದ ಬೆಂಬಲವನ್ನು ಪಡೆದರು.

ಹೀಗೆ ಜ್ಞಾನ ದೇಹಬಲದ ಆಧಾರದಲ್ಲಿ ಅದ್ಭುತ ಆತ್ಮ ವಿಶ್ವಾಸವನ್ನು ಸಾಧಿಸಿದ ಆಚಾರ್ಯರು ಭಾರತದ ಉದ್ದಗಲ ಎರಡು ಬಾರಿ ಪರ್ಯಟನೆ ನಡೆಸಿದರು. ಅಂತರ್ಮುಖಿಯಾಗದೆ ಸಮಾಜಮುಖಿಯಾಗಿದ್ದ ಪೂರ್ಣಪ್ರಜ್ಞರ ಬದುಕು ಸವಾಲುಗಳನ್ನು ಸ್ವೀಕರಿಸುತ್ತಾ, ಉತ್ತರಿಸುತ್ತಾ ತನ್ನ ಅನುಭೂತಿಯನ್ನು ಸರಳವಾಗಿ ಪ್ರತಿಪಾದಿಸುತ್ತಾ, ಸಂಸ್ಕೃತಿ ಜ್ಞಾನವನ್ನು ಸಾಮಾನ್ಯನೂ ತಿಳಿಯುವಂತೆ ಮಾಡಿತು.

ಈ ಹಂತ ಬಹುಶಃ ಜನಸಾಮಾನ್ಯರ ಕಷ್ಟಸುಖಗಳಿಗೆ ಸ್ಪಂದಿಸುವ ಆಚಾರ್ಯರ ಸಹಜ ಮನಃಸ್ಥಿತಿ ಅರಳಿದ ಕಾಲವಿರಬೇಕು. ಪ್ರಾಯಃ 40 ವರ್ಷ ಹರೆಯ, ತುಂಬು ಯೌವ್ವನದ ಕೊನೆಯ ಹಂತ, ಸಂಚಾರ ಪ್ರಿಯರಾಗಿದ್ದ ಅವರು ಭದ್ರಾ ನದಿಯ ಪ್ರದೇಶಕ್ಕೆ ಬಂದಿದ್ದಾರೆ. ಅದು ಕಳಸ ಕುಗ್ರಾಮದಲ್ಲಿ ಭದ್ರಾ ನದಿ ರಭಸದಿಂದ ಹರಿಯುವ ಪ್ರದೇಶ. ನದಿ ಬಂಡೆಯಲ್ಲಿ ಅನತಿ ದೂರದಲ್ಲಿ ಹೆಬ್ಬಂಡೆಯೊಂದಿದೆ. ಇದನ್ನು ನದಿಯ ಮಧ್ಯೆ ಇಟ್ಟು ಬಿಟ್ಟರೆ ಭದ್ರೆಯ ರಭಸ ಕಡಿಮೆಯಾಗಿ ನದಿಯ ಕೆಳ ಭಾಗದ ಕೃಷಿಕರಿಗೆ ಅನಾಯಾಸವಾಗಿ ಭದ್ರೆಯ ಪೂರ್ಣ ಪ್ರಯೋಜನ ಪಡೆಯಬಹುದು.

ಇಲ್ಲದ್ದಿದರೆ ಕೃಷಿನಾಶ, ಗದ್ದೆಗಳಲ್ಲಿ ಹೂಳು ತುಂಬುವುದನ್ನು ತಡೆಯಬಹುದು. ಆದರೆ ಫಲಾನುಭವಿ ಜನಸ್ತೋಮ ಈ ಕಲ್ಲನ್ನು ನದಿ ಮಧ್ಯಕ್ಕೆ ಸಾಗಿಸಲಾರ ಕೈಚೆಲ್ಲಿ ನಿಂತಿದ್ದಾರೆ. ಸಜ್ಜನರ ಉದ್ಧಾರವಾದಂತಹ ಲೋಕದೃಷ್ಟಿಯ ಆಚಾರ್ಯರು ಕೈಚೆಲ್ಲಿ ನಿಂತ ಜನರಿಂದ ವಿವರ ತಿಳಿದು ತಾನೇ ಆ ಬಂಡೆಯನ್ನು ಕೈಯಲ್ಲಿ ಎತ್ತಿ ನದಿಗೆ ಒಯ್ದು ನದಿಯ ಪಥದಲ್ಲಿ ಸರಿಯಾದ ಸ್ಥಳದಲ್ಲಿ ಸ್ಥಾಪಿಸಿದರು. ಇದೇ 'ಮಧ್ವಬಂಡೆ.'

ಭದ್ರಾನದಿಯಲ್ಲಿ ಈ ಮಧ್ವಬಂಡೆಯನ್ನು ಇಂದಿಗೂ ಕಾಣಬಹುದು. ಚಿಕ್ಕಮಂಗಳೂರು ಜಿಲ್ಲೆಯ ಕಳಸ ಪೇಟೆಯಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿ ಭದ್ರಾನದಿಯಲ್ಲಿ 800 ವರ್ಷ ಪುರಾತನ ಇತಿಹಾಸವಿರುವ ಈ ಮಧ್ವ ಬಂಡೆಯಲ್ಲಿ ಶ್ರೀ ಮಧ್ವಾಚಾರ್ಯರ ರೇಖಾಚಿತ್ರವೂ ಇದೆ. 'ಶ್ರೀ ಮಧ್ವಾಚಾರ್ಯೈ ರೇಕ ಹಸ್ತೇನ ಆನೀಯ ಸ್ಥಾಪಿತಾ ಶಿಲಾ' ಎಂಬ ವಾಕ್ಯವೂ ಕೆತ್ತಲ್ಪಟ್ಟಿದೆ. ಈಗ ಮಾತ್ರ ಭದ್ರಾನದಿ ಅಗಲವಾಗಿದೆ. ಶಿಲೆ ಮಾತ್ರ ಸಾಕ್ಷಿಯಾಗಿ ನಿಂತಿದೆ.ಆದರೆ ಭೌಗೋಳಿಕ ಸ್ವರೂಪ ಬದಲಾವಣೆಯ ಸಹಜ ಪ್ರಾಕೃತಿಕ ಪ್ರಕ್ರಿಯೆಯ ಜ್ಞಾನವಿದ್ದರೆ ಈ ಘಟನೆ ನಡೆದುದು ಸ್ಪಷ್ಟವಾಗುತ್ತದೆ. ಬಂಡೆಯನ್ನು ನೆಲೆಗೊಳಿಸಿರುವುದರಿಂದ ನದಿಯ ತಳಭಾಗವು ಕೊರೆಯಲ್ಪಟ್ಟು ತಟಾಕವೊಂದು ನಿರ್ಮಾಣವಾಗಿದೆ. ಅದೇ 'ಲಕ್ಷ್ಮೀ ತೀರ್ಥ', ಈ ತೀರ್ಥ ಸ್ನಾನ ಸರ್ವರೋಗನಿವಾರಕ ವೆಂಬುದು ಸ್ಥಳಿಯರ ನಂಬಿಕೆ.

ಚಿಕ್ಕಮಗಳೂರು ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ 81 ನೇ ಶಾಸನವಾಗಿ ಈ ಮಧ್ವಬಂಡೆಯ ಬರಹವನ್ನು ದಾಖಲಿಸಲಾಗಿದೆ. ಎಪಿಗ್ರಾಫಿಕಾ ಕರ್ನಾಟಕದಲ್ಲೂ ಈ ಉಲ್ಲೇಖವಿದ್ದು ಬಂಡೆಯ ಗಾತ್ರದ ವಿವರಣೆ ಇದೆ. 20 ಅಡಿ ಉದ್ದ, 16 ಅಡಿ ಅಗಲ,10 ಅಡಿ ಎತ್ತರ, ತೂಕವು 50 ಟನ್ನುಗಳು, ಜನೋಪಯೋಗಿ ಕಾರ್ಯ ಮಾಡಿರುವ ಆಚಾರ್ಯರ ಸಾಧನೆಗೆ ಈ ಶಾಸನ, ಬಂಡೆ ಸಾಕ್ಷಿಯಾಗಿದೆ. ಈ ಕೃತಿ 'ಮಧ್ವರ ಜನೋಪಕಾರ' ವೆಂದೇ ಮಧ್ವ ಪರ್ಯಟನೆ ಗ್ರಂಥದಲ್ಲಿ ದಾಖಲಾಗಿದೆ.

**ಮಧ್ವನಮನ**

ಪ್ರಥಮೋ ಹನೂಮನ್ನಾಮ ದ್ವಿತೀಯೋ ಭೀಮ ಏವ ಚ ।
ಪೂರ್ಣಪ್ರಜ್ಞಸ್ತೃತೀಯಸ್ತು ಭಗವತ್ಕಾರ್ಯಸಾಧಕಃ॥

- ಖಿಲವಾಯುಸ್ತುತಿ

ನಮಸ್ತೇ ಪ್ರಾಣೇಶ ಪ್ರಣತವಿಭವಾಯಾವನಿಮಗಾಃ।
ನಮಃ ಸ್ವಾಮೀನ್ ರಾಮಪ್ರಿಯತಮ ಹನೂಮನ್ ಗುರುಗುಣ॥
ನಮಸ್ತುಭ್ಯಂ ಭೀಮ ಪ್ರಭಲತಮ ಕೃಷ್ಣೇಷ್ಟ ಭಗವನ್।
ನಮಃ ಶ್ರೀಮನ್ಮಧ್ವ ಪ್ರದಿಶ ಸುದೃಶ ನೋ ಜಯ ಜಯ ॥

ಅಭ್ರಮಂ ಭಂಗರಹಿತಂ ಅಜಡಂ ವಿಮಲಂ ಸದಾ।
ಆನಂದತೀರ್ಥಮತುಲಂ ಭಜೇ ತಾಪತ್ರಯಾಪಹಂ।
ಬ್ರಹ್ಮಾಂತಾ ಗುರುವಃ ಸಾಕ್ಷಾದಿಷ್ಟಂ ದೈವಂ ಶ್ರಿಯಃಪತಿಃ
ಆಚಾರ್ಯಾಃ ಶ್ರೀಮದ್ವಾಚಾರ್ಯಾಸ್ಸಂತು ಮೇ ಜನ್ಮ ಜನ್ಮನಿ॥

ಬದರಿಕಾಶ್ರಮಕೆ ಪುನರಪಿಯೈದಿ ವ್ಯಾಸಮುನಿ। ಪದಕೆರಗಿ ಅಖಿಳ ವೇದಾರ್ಥಗಳನು
ಪದುಮನಾಭದಿ ಮುಖದಿ ತಿಳಿದು ಬ್ರಹ್ಮತ್ವ। ಯೈದಿದ ಮಧ್ವಮುನಿರಾಯಗಭಿವಂದಿಪೆ॥

ಶ್ರೀ ಶ್ರೀಪಾದರಾಜರು

ಆರುನಾಲ್ಕು ತತ್ತ್ವದಭಿಮಾನಿಗಳಿಗೊಡೆಯ
ಮಾರುತನ ಮೂರನೆಯ ಅವತಾರನೆ ।
ಆರೈದು ಮೇಲೆರಡು ಅಧಿಕ ಲಕ್ಷಣವುಳ್ಳ
ಮೂರುತಿಯಒಪ್ಪುತಿಹ ಮುನಿವರೇಣ್ಯ ॥

- ಶ್ರೀ ವ್ಯಾಸರಾಜರು

ಒಂದು ಬಾರಿ ಸ್ಮರಣೆ ಸಾಲದೆ ।
ಆನಂದತೀರ್ಥರ ಪೂರ್ಣಪ್ರಜ್ಞರ ಸರ್ವಜ್ಞರಾಯರ ಮಧ್ವರಾಯರ ॥

ಶ್ರೀವಾದಿರಾಜರು

ವೇದಶಾಸ್ತ್ರಗಳಿಂದ ಮಾಯಿಗಳ ಖಂಡಿಸಿ
ಸಾಧಿಸಿ ಹರಿಸರ್ವೋತ್ತಮನೆಂದು।
ಮೋದಭರಿತವಾದ ದಿವ್ಯ ಶಾಸ್ತ್ರವ ಮಾಡಿದ
ಮೋದತೀರ್ಥ ಪುರಂದರವಿಠಲದಾಸ॥

- ಶ್ರೀ ಪುರಂದರದಾಸರು

ಮಧ್ವರಾಯರ ದಾಸನಾದವನೇ ನಿರ್ದೋಷ
ಮಧ್ವರಾಯರ ಬಂಟ ಜಗಕೆ ನೆಂಟ ।
ಮಧ್ವರಮಣ ವಿಜಯವಿಠಲ ಕಿಂಕರರಾದ
ಮಧ್ವರ ಕಾರುಣ್ಯ ಪಡೆದವನೆ ಧನ್ಯ॥

- ಶ್ರೀ ವಿಜಯರಾಯರು

ಮುನಿಕುಲೋತ್ತಮ ಶಿರೋರತುನ ಕಾಂಚನವರ್ಣ
ಘನಜ್ಞಾನ ಪರಿಪೂರ್ಣ ಶುಭಗುಣಾರ್ಣ

ಅನಿಮಿಷರ ಗುರುವೆ ಅನಿಮಿತ್ತ ಬಂಧೂ ದಯಾಸಿಂಧೂ
ಸನಕಾದಿವಂದ್ಯನೆ ಸರ್ವಜ್ಞರಾಯ॥

- ಶ್ರೀ ಗೋಪಾಲದಾಸರು

ಶ್ರೀಮಾರುತಾತ್ಮ ಸಂಭೂತ ಹನುಮ
ಭೀಮ ಮಧ್ವಾಖ್ಯ ಯತಿನಾಥ ಮೂಲ
ರಾಮಕೃಷ್ಣಾರ್ಪಿತ ಸುಚೇತಾ
ಮಮ ಸ್ವಾಮಿ ಚೈತ್ರೈ ಮಾತಾ॥

ಶ್ರೀ ಜಗನ್ನಾಥದಾಸರು



**ಕುಮಾರಧಾರತೀರ್ಥ**

ಆಲಯದಿಂದ ಐದು ಮೈಲಿ ದೂರದಲ್ಲಿ ಈ ತೀರ್ಥವಿದೆ. ಈ ತೀರ್ಥದ ಬಗೆಗಿನ ಐತಿಹ್ಯಗಳನ್ನು ಗಮನಿಸಬಹುದು. ಪರ್ವ ಕಾಲದಲ್ಲಿ ಈ ತೀರ್ಥಸ್ನಾನ ಮಾಡಿದವರು ಯಾರೇ ಆದರೂ ಖಚಿತವಾಗಿ ಪರಮ ಪದವನ್ನು ಪಡೆಯುವರೆಂದು ವರಾಹ ಪುರಾಣವು ತಿಳಿಸುತ್ತದೆ.

ಒಂದಾನೊಂದು ಕಾಲದಲ್ಲಿ ಈ ತೀರ್ಥದಲ್ಲಿ ಸ್ನಾನ ಮಾಡಿದ ವೃದ್ಧರೆಲ್ಲ ಯುವಕರಾಗಿ ಮಾರ್ಪಾಡು ಹೊಂದುತ್ತಿದ್ದರಿಂದ ಈ ತೀರ್ಥವು ಕುಮಾರಧಾರ ತೀರ್ಥವೆಂಬ ಹೆಸರನ್ನು ಪಡೆದಿದೆ. ಒಂದು ದಿನ ವೆಂಕಟೇಶ್ವರ ಸ್ವಾಮಿಯು ತರುಣನಂತೆ ವೇಷಧರಿಸಿ ಬೆಟ್ಟದಲ್ಲಿ ತಿರುಗಲು ಹೊರಟನು. ಕೃಶಕಾಯನಾಗಿದ್ದ ಒಬ್ಬ ಮುದುಕ - ಅವನಿಗೆ ಗುಳಿಬಿದ್ದ ಕಣ್ಣುಗಳು, ದೃಷ್ಟಿಹೀನ ನೇತ್ರಗಳು,ನಡುಗುವ ಕಾಲುಗಳು, ಬಾಗಿದ ಬೆನ್ನು, ಹಸಿವು ಬಾಯಾರಿಕೆಗಳಿಂದ ಬಳಲಿದ ದೇಹದ - ಒಬ್ಬ ಮುದುಕನು ಕಂಡು ಬಂದ. ಕಾಡಿನಲ್ಲಿ ದಾರಿ ತಪ್ಪಿದವನಂತೆ ಕಾಣುತ್ತಿದ್ದ ಆತನ ಆರ್ತನಾದದಿಂದ ತನ್ನ ಮಗನನ್ನು ಸಹಾಯಕ್ಕೆಂದು ಕರೆಯುತ್ತಿದ್ದ. ತನ್ನನ್ನು ಏಕಾಂಗಿಯಾಗಿ ಬಿಟ್ಟು ತನ್ನ ಮಗನು ಹೊರಟು ಹೋದನೋ ಎಂಬ ಚಿಂತೆಯೂ ಇದ್ದಿತು. ಆಗಾಗ ತನ್ನ ಮಗನನ್ನು ಜೋರಾಗಿ ಕರೆಯುವುದರಿಂದ ಅವನ ನಾಲಿಗೆ ಒಣಗಿ ಹೋಗಿದ್ದಿತು. ಅವನನ್ನು ಈ ಸ್ಥಿತಿಯಲ್ಲಿ ಕಂಡಂತಹ ಸ್ವಾಮಿಯು ಅವನು ಪುನಃ ಕರೆಯುತ್ತಿದ್ದದ್ದು ಯಾರು ಎಂದು ಕೇಳಿದನು. ಕೌಂಡಿಣ್ಯನು ತನ್ನ ಮಗನೆಂದೂ, ದಾರಿ ತಪ್ಪಿ ಹೋಗಿದ್ದಾನೆಯೆಂದೂ ವೃದ್ಧನು ಮಾರುತ್ತರ ನೀಡಿದನು. ತನ್ನನ್ನು ತನ್ನ ಆಶ್ರಮ ಸೇರಿಸಲು ಸಹಾಯ ಮಾಡಬೇಕೆಂದು ಅವನು ಅಪರಿಚಿತನನ್ನು ಬೇಡಿದನು. ದೈನಂದಿನ ಕಾಲ ಕೃತ್ಯ ಕರ್ತವ್ಯಗಳನ್ನು ಮಾಡಲಾಗದ ಶುಷ್ಕ ದೇಹದವನಾದ ತನ್ನಂತಹ ವೃದ್ಧನನ್ನು ಸಂಪತ್ತು ಸಂಬಂಧೀಕರಿಲ್ಲದಂತೆ ಯಾಕಾದರೂ ಭಗವಂತನು ಬದುಕಿಸಿರುವನೋ ಎಂದು ಗಟ್ಟಿಯಾಗಿಯೇ ಆಲೋಚಿಸಿದನು. ಹಾಸ್ಯ ಮಾಡುವ ಧೋರಣೆಯಲ್ಲಿ ಭಗವಂತನು ಆ ಮುದುಕನು ಇಳಿವಯಸ್ಸಿನ ಬಡ ದೇಹದೊಡನೆ ಬದುಕಿರಬೇಕೆಂದು ಅಪೇಕ್ಷೆಪಡುವನೇ ಎಂದು ವಿಚಾರಿಸಿದನು. ದೇವ ಪಿತೃಗಳ ಬಗ್ಗೆ ತನ್ನ ಕರ್ತವ್ಯಗಳನ್ನು ನೆರವೇರಿಸುವ ಅಪೇಕ್ಷೆಯಿಂದ ಬದುಕಲಿಷ್ಟಪಡುವನೇ ಹೊರತು ಅನ್ಯಥಾ ಅಲ್ಲ ಎಂದು ಮುದುಕನು ಉತ್ತರಿಸಿದನು. ಈ ಉತ್ತರವನ್ನು ಕೇಳಿದ ಭಗವಂತನು ಆ ವೃದ್ಧನ ಕೈ ಹಿಡಿದು ಸ್ವಲ್ಪ ದೂರದ ಕೊಳಕ್ಕೆ ಕರೆದು ಕೊಂಡು ಹೋಗಿ ಆ ನೀರಿನಲ್ಲಿ ಸ್ನಾನ ಮಾಡುವಂತೆ ತಿಳಿಸಿದನು. ವೃದ್ಧನು ವಿಧೇಯನಾಗಿ ಸ್ನಾನ ಮಾಡಿದನು. ನೀರಿನಲ್ಲಿ ಮುಳುಗಿ ಮೇಲಕ್ಕೆ ಬರಲು ವೃದ್ಧನು ಹದಿನಾರು ವರ್ಷದ ತರುಣನಾಗಿ ಮಾರ್ಪಟ್ಟಿದ್ದನು. ಸಾವಿರ ನೇತ್ರದ ಸಾವಿರ ಶಿರಗಳ, ಸಾವಿರ ಕೈಗಳ ದೇವರು ಅವನ ಮುಂದೆ ಪ್ರತ್ಯಕ್ಷನಾದನು. ದೇವ ದುಂದುಭಿ ಮೊಳಗುತ್ತಿರುವಂತೆಯೇ ದೇವತೆಗಳು ಹೂಮಳೆಗರೆದರು.ತನ್ನ ದೈನಂದಿನ ಕರ್ತವ್ಯಗಳಲ್ಲಿ ನಿರತನಾಗಬೇಕೆಂದು ದೇವರು ಬ್ರಾಹ್ಮಣನಿಗೆ ತಿಳಿಸುತ್ತ ಈ ಕರ್ತವ್ಯಗಳನ್ನು ತೃಪ್ತಿಕರವಾಗಿ ನಿರ್ವಹಿಸಲು ತಕ್ಕ ಸಂಪತ್ತುನ್ನು ಅನುಗ್ರಹಿಸಿದನು.ಇಲ್ಲಿನ ನೀರು ವೃದ್ಧನಾಗಿದ್ದವನನ್ನು ತರುಣನನ್ನಾಗಿ ಪರಿವರ್ತಿಸಿದ್ದರಿಂದ ಮುಂದೆ ಈ ತೀರ್ಥವು ಕುಮಾರಧಾರಾ ತೀರ್ಥವೆಂದು ಹೆಸರಾಯಿತು.ಈ ತೀರ್ಥದಲ್ಲಿ ದಿನಕ್ಕೆ ಮೂರು ಬಾರಿ ಸ್ನಾನ ಮಾಡುತ್ತಾ ಮೂರು ತಿಂಗಳು ಕಳೆದವರು ಖಚಿತವಾಗಿ ತಮ್ಮಲ್ಲಿ ಪಾಪಗಳಿಂದ ಮುಕ್ತರಾಗಿ ಮೋಕ್ಷವನ್ನು ಪಡೆಯುವರೆಂದು ನಂಬಲಾಗಿದೆ.



# ಶ್ರೀ ವರಾಹಾವತಾರ

ಭಗವದವತಾರಗಳು ಎಷ್ಟೋ ದಿವ್ಯೋಪೇತ ವಾಗಿರುತ್ತವೆ. ಎಷ್ಟೋ ಮಹಿಮೆಯನ್ನೊಳಗೊಂಡಿರುತ್ತವೆ. ಎಷ್ಟೋ ದಿವ್ಯವಾದ ಕಾರ್ಯಗಳನ್ನು ಮಾಡುತ್ತವೆ. ನಿಜದಲ್ಲಿ ಭಗವದವತಾರಗಳು ಬಹಳ ರಹಸ್ಯವಾದುವುಗಳು ಎಷ್ಟು ಪ್ರಯತ್ನಿಸಿದರೂ ಅವು ದೊರಕವು. ಆದ್ದರಿಂದಲೇ ಶ್ರೀಮದ್ಭಾಗವತದಲ್ಲಿ ಅವತಾರಗಳನ್ನು ಕುರಿತು ವರ್ಣಿಸುತ್ತಾ "ಜನ್ಮ ಗುಹ್ಯ ಭಗವತೋ" ಎಂದು ವರ್ಣಿಸಲಾಗಿದೆ. ಯಾವ ಮಾನವನು ಈ ದಿವ್ಯವಾದ ಭಗವದ್ರೂಪಗಳ ಲೀಲೆಗಳನ್ನು, ಕಾರ್ಯಗಳನ್ನು ಉದಯ - ಸಂಧ್ಯಾಕಾಲದಲ್ಲಿ ಪಠಿಸುತ್ತಾನೋ ಆತನು ಸಮಸ್ತ ದುಃಖಗಳಿಂದ ವಿಮುಕ್ತನಾಗುತ್ತಾನೆ. ಈ ಭೌತಿಕ ಜಗತ್ತು ದುಃಖಾಲಯವು ಆದರೆ ಅದರಲ್ಲಿರುವ ಭಕ್ತರಿಗಾಗಿಯೇ ಭಗವಂತನು ತನ್ನ ಲೀಲಾ ಪ್ರದರ್ಶನವನ್ನು ಮಾಡುತ್ತಾನೆ. ಭಕ್ತರು ಈ ಲೀಲೆಗಳನ್ನು ನೆನೆಯುತ್ತಾ ಸಮಸ್ತ ದುಃಖಗಳಿಂದ ದೂರವೇ ಇದ್ದು ಬಿಡುತ್ತಾರೆ. ಭಗವಂತನು ಅವತರಿಸಿದಾಗ ಎರಡು ಕಾರ್ಯಗಳನ್ನು ಮಾಡುತ್ತಾನೆ. ಅದರಲ್ಲಿ ಮೊದಲನೇಯದು "ಪರಿತ್ರಾಣಾಯ ಸಾಧೂನಾಂ- ಸಾಧುಜನರನ್ನು ರಕ್ಷಿಸುವುದು" ಎರಡನೇಯದು "ವಿನಾಶಾಯ ಚ ದುಷ್ಕೃತಾಂ - ದುಷ್ಟರನ್ನು ನಾಶಗೊಳಿಸುವುದು" ಭಗವದವತಾರಗಳು ಇಂತಹ ಮಹತ್ತರವಾದ ಪ್ರಭಾವಗಳನ್ನು ಹೊಂದಿರುತ್ತವೆ. ಹಾಗಾಗಿಯೇ ಅವನ್ನು ಸ್ಮರಿಸುತ್ತಲೇ ಮಾನವರು ಸಮಸ್ತ ದುಃಖಗಳಿಂದ ಶಮನಗೊಳ್ಳುತ್ತಾರೆ. ಇನ್ನೊಂದು ಮುಖ್ಯವಾದ ವಿಷಯವೇನೆಂದರೆ ಯಾವುದೋ ಮಹತ್ತರವಾದ ಕಾರ್ಯವಿಲ್ಲದೇ ಭಗವಂತನು ಅವತರಿಸನು. ಈ ರೀತಿಯಾಗಿ ಅವತರಿಸಿದ ಬಳಿಕ ಭಗವದವತಾರವು ಎಸಗುವ ಕಾರ್ಯವೂ ಸಹಾ ಅಸಾಧಾರಣವಾಗಿಯೇ ಇರುತ್ತದೆ. ಭೂಮಿಯನ್ನು ರಸಾತಲದಿಂದ ಉದ್ಧರಿಸುವ ಮಹತ್ಕಾರ್ಯವೆಸಗಲೆಂದೇ ವರಾಹವತಾರವು ಅವತರಣಿಸಿದೆ. ರಸಾತಲದಂತಹ ಅಸಹ್ಯಕರವಾದ ಸ್ಥಾನದಿಂದ ಭೂಮಿಯನ್ನು ಉದ್ಧರಿಸುವ ಪರಿಸ್ಥಿತಿಗಳೇರ್ಪಟ್ಟಿದ್ದರಿಂದಲೇ ಭಗವಂತನಿಗೆ ವರಾಹಾವತಾರವು ಧರಿಸಬೇಕಾಗಿ ಬಂದಿದೆ. ಭಗವಂತನು ಸೂಕರರೂಪವನ್ನು ಧರಿಸಿದ ಮಾತ್ರಕ್ಕೇ ಆತನ ಘನತೆಯೇನೂ ಕಡಿಮೆಯಾಗುವುದಿಲ್ಲ. ಆದ್ದರಿಂದಲೇ ಶ್ರೀಮದ್ಭಾಗವತವು ಶ್ರೀವರಾಹಮೂರ್ತಿಯನ್ನು 'ಯಜ್ಞೇಶಃ' ಎಂದು ವರ್ಣಿಸಿದೆ. ಶ್ರೀ ಮದ್ಭಾಗವತದಲ್ಲಿ ಶ್ರೀವರಾಹಾವತಾರವು ಎರಡನೇ ಅವತಾರವಾಗಿ ಪರಿಗಣಿಸಲ್ಪಟ್ಟಿದೆ. ಈ ವರಹಾವತಾರದ ವರ್ಣನೆಯನ್ನು ಕೇಳಿದವನು. ಪಠಿಸುವವನೂ, ಸನ್ಮಾನಿಸುವವನು ಬ್ರಹ್ಮಹತ್ಯಾದಿ ಸಮಸ್ತ ಪಾತಕಗಳಿಂದ ವಿಮುಕ್ತನಾಗುತ್ತಾನೆ. ಅಷ್ಟೊಂದು ಪರಮ ಪಾವನವಾದ ವರಾಹಾವತಾರವು ಹೇಗೆ ಆವಿರ್ಭವಿಸಿದೆ ಎಂದು ತಿಳಿಸುವುದೇ 'ಈ ಶ್ರೀವರಾಹಾವತಾರ ಕಥೆ'.

ಭಗವಂತನ ಆಜ್ಞೆ ಮೇರೆಗೆ ಬ್ರಹ್ಮನು ಜೀವ ಸೃಷ್ಟಿ ಮಾಡಲು ನಾನಾ ರೀತಿಯಲ್ಲಿ ಪ್ರಯತ್ನಿಸಿದ್ದಾನೆ. ಆದರೆ ಅವೆಲ್ಲಾ ವಿಫಲವಾಗಿವೆ. ಆಗ ಆತನು ತನ್ನ ದೇಹದಿಂದ ಎರಡು ಸ್ತ್ರೀ ಪುರುಷ ರೂಪಗಳನ್ನು ಸೃಷ್ಟಿಸಿದ್ದಾನೆ. ಆ ರೂಪಗಳಲ್ಲಿ ಪುರುಷರೂಪವೇ ಸ್ವಾಯಂಭುಮನು. ಸ್ತ್ರೀರೂಪವೇ ಶತರೂಪೆ ಅವರಿಬ್ಬರೂ ವೈವಾಹಿಕ ಬಂಧನದಲ್ಲಿ ಸಂಧಿಸಿದ್ದಾರೆ. ಜೀವಸೃಷ್ಟಿ ಮಾಡಬೇಕೆಂದು ಬ್ರಹ್ಮನು ಅವರಿಬ್ಬರಿಗೆ ಆಜ್ಞಾಪಿಸಿದ್ದಾನೆ. ಆದರೆ ಜೀವಿಗಳಿಗೆಲ್ಲಾ ನೆಲೆಯೊದಗಿಸುವ ಭೂಮಿ ರಸಾತಲದಲ್ಲಿ ಮುಳುಗಿ ಹೋಗಿದೆ. ಅದನ್ನು ಹೊರಕ್ಕೆ ತೆಗೆಯುವುದಾಗಿ ಬ್ರಹ್ಮನು ತೀವ್ರವಾಗಿ ಆಲೋಚಿಸಿದ್ದಾನೆ. ಆತನ ಆ ಬಗೆಯಲ್ಲಿ ಆಲೋಚಿಸುತ್ತಲೇ ಆತನ ನಾಸಿಕದಿಂದ ಒಂದು ಚಿಕ್ಕ ವರಾಹರೂಪವು ಹೊರಬಿದ್ದಿದೆ. ಅದರ ಗಾತ್ರ ಅಂಗುಷ್ಟದಷ್ಟೇ ಇದೆ. ಆದರೆ ಅದು ಶೀಘ್ರದಲ್ಲಿ ಅತಿದೊಡ್ಡದ್ದಾಗಿ ಬೆಳೆದು ಆನೆಗಾತ್ರದಲ್ಲಿ ಆಕಾಶವೆಲ್ಲಾ ಹರಡಿ ನಿಂತಿದೆ. ಅನೂಹ್ಯವಾಗಿ ತನ್ನ ಮೂಗಿನ ಹೊಳ್ಳೆಯಿಂದ ಹೊರಗೆ ಬಂದು ಆಕಾಶ ಮಾರ್ಗದಲ್ಲಿ ನಿಂತ ಆ ಮಹಾವರಾಹದ

ಮೂಲ. ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ: ಡಿ.ಎಸ್. ಬದ್ರಿನಾಥ್

ಕುರಿತು ಬ್ರಹ್ಮದೇವನು,ಮರೀಚಾದಿ ವಿಪ್ರರೊಂದಿಗೆ, ಸನಕಸನಂದಾದಿ ಪುತ್ರರೊಂದಿಗೂ ಮನುವಿನೊಂದಿಗೂ ಚರ್ಚಿಸುತ್ತಾನೆ. ಈ ರೂಪವು ವಿಷ್ಣು ಭಗವಂತನದೋ ಅಥವಾ ಮತ್ತ್ಯಾರದ್ದೋ ಎಂದು ಬ್ರಹ್ಮ ಚರ್ಚಿಸುವ ಸಮಯದಲ್ಲಿ ಆದಿವರಾಹವು ತೀವ್ರವಾಗಿ ಘರ್ಜಿಸಿದೆ. ಆ ಶಬ್ದವು ಸಕಲ ದಿಕ್ಕುಗಳಲ್ಲಿ ಪ್ರತಿಧ್ವನಿಸಿದೆ. ಆ ಘರ್ಜನೆಯನ್ನು ಜನಲೋಕ, ತಪೋಲೋಕ, ಸತ್ಯಲೋಕದ ವಾಸಿಗಳು ಆಲಿಸಿ ದಿವ್ಯವಾದ ಮಂತ್ರೋಚ್ಚಾರಣೆಯನ್ನು ಮಾಡಿದ್ದಾರೆ. ದಿವ್ಯ ಮಂತ್ರೋಚ್ಚಾರಣೆಯಿಂದ ಸಂತೋಷಿಸಿದ ಶ್ರೀವರಾಹಮೂರ್ತಿ ಮರಳಿ ಮತ್ತೊಮ್ಮೆ ಘರ್ಜಿಸಿದೆ ವೇಗವಾಗಿ ನೀರಿನಲ್ಲಿ ಪ್ರವೇಶ ಮಾಡಿದ್ದಾನೆ.

ಆಕಾಶದಿಂದ ಒಂದೇ ಸಮನೆ ನೀರಿನಲ್ಲಿ ಶ್ರೀವರಾಹನು ಧುಮುಕುತ್ತಲೇ ಸಮುದ್ರದ ನೀರು ಎರಡು ಹೋಳಿನಂತೆ ತುಂಡಾಗಿದೆ. ಆಗ ಎರಡೂ ಬದಿಯಲ್ಲಿ ಎದ್ದ ಮಹೋತ್ತರವಾದ ತರಂಗಗಳು "ಓ ಯಜ್ಞೇಶ್ವರಾ! ನನ್ನನ್ನು ಎರಡು ತುಂಡನ್ನಾಗಿ ಮಾಡದಿರು" ಎಂದು ಆರ್ದ್ರನಾಗಿ ಸಮುದ್ರನು ತನ್ನ ಎರಡು ಕೈಗಳನ್ನೆತ್ತಿ ಮುಗಿದು ಪ್ರಾರ್ಥಿಸುವಂತೆ ತೋರಿದೆ. ಶ್ರೀವರಾಹವು ತನ್ನ ಮುಂಗೈಗಳಿಂದ ಸಮುದ್ರ ನೀರನ್ನು ಸರಿಸುತ್ತಾ ಸಮುದ್ರದ ತಳಭಾಗಕ್ಕೆ ಹೋಗಿ,ಅಲ್ಲಿ ಭೂಮಿಯನ್ನು ಅನ್ವೇಷಿಸಿ, ಕಾಣಸಿಗುತ್ತಲೇ ಅದನ್ನು ತನ್ನ ಮೂತಿಯ ಮೇಲಿಟ್ಟು ಕೊಂಡು ಹೊರಗೆ ತೆಗೆದುಕೊಂಡು ಬಂದಿದ್ದಾನೆ. ಭೂಮಿಯು ರಸಾತಲದಲ್ಲಿ ಬಿದ್ದು ಹೋಗಿದೆಯೆಂದು ಸಾಮಾನ್ಯರು ಹೇಳಿದರೂ ಆಚಾರ್ಯರು ಅದನ್ನು ಅಂಗೀಕರಿಸಲಿಲ್ಲ. ಏಕೆಂದರೆ ಭೂಮಿಯು ರಸಾತಲವೆಂಬ ಅಧೋಲೋಕಕ್ಕಿಂತ ಎರಡು ಪಟ್ಟು ದೊಡ್ಡದು. ಅಂತಹದ್ದರಲ್ಲಿ ಭೂಮಿ ರಸಾತಲದಲ್ಲಿ ಮುಳುಗುವ ಸಾಧ್ಯತೆಯೇ ಇರುವುದಿಲ್ಲ.

ವಿಷಯವು ವಿಷ್ಣುಧರ್ಮ ಗ್ರಂಥದಲ್ಲಿ ಹೇಳಲ್ಪಟ್ಟಿದೆ. ಆದರೆ ನಿಜದಲ್ಲಿ ಭೂಮಿಯು ಬಿದ್ದದ್ದು ಗರ್ಭೋದಕವೆಂಬ ಸಮುದ್ರದಲ್ಲೆಂದು ಆಚಾರ್ಯರು ವಿವರಿಸುತ್ತಾರೆ. ಭಗವಂತನು ಆ ಧರಿಣಿಯನ್ನು ತನ್ನ ಬಿಳಿದಂತಗಳ ಮೇಲೆ ನಿಲ್ಲಿಸಿಕೊಂಡು ಹೊರಗೆ ತೆಗೆದುಕೊಂಡು ಬಂದಿದ್ದಾನೆ. ಆ ಸಮಯದಲ್ಲೇ ಹಿರಣ್ಯಕ್ಷನೆಂಬ ರಕ್ಕಸನ ಸಂಹಾರ ವಾಯ್ತೆಂದು ಸಹಾ ಹೇಳಲಾಗುತ್ತದೆ.ಆದರೆ ಈ ವರಾಹಾವತಾರವು ಸ್ವಾಯಂಭುವ ಪ್ರಳಯ ಸಮಯದಲ್ಲಾದದ್ದು. ಆ ಸಮಯದಲ್ಲಿ ಜನಲೋಕ, ಮಹರ್ಲೋಕ, ಸತ್ಯಲೋಕಗಳನ್ನು ಹೊರತು ಪಡಿಸಿ ಎಲ್ಲಾ ಲೋಕಗಳು ಪ್ರಳಯ ಜಲದಲ್ಲಿ ಮುಳುಗಿ ಹೋಗಿವೆ.ಆದ್ದರಿಂದಲೇ ವರಹಾವತಾರ ದರ್ಶನವು ಕೇವಲ ಉನ್ನತ ಲೋಕವಾಸಿಗಳಿಗೆ ಮಾತ್ರವೇ ಲಭಿಸಿದೆ. ಭೂಮಿಯನ್ನು ತನ್ನ ದಂತದ ಮೇಲಿರಿಸಿ ಹೊರಗೆ ಬಂದ ಭಗವಂತನನ್ನು ಋಷಿಗಳೆಲ್ಲರೂ ಸ್ತುತಿಸಿದ್ದಾರೆ. ನೀರಿನಿಂದ ಹೊರಗೆ ಬರುತ್ತಲೇ ಭಗವಂತನ ತನ್ನ ಮೈಮೇಲಿನ ನೀರನ್ನೊಮ್ಮೆ ಕೊಡವಿ ಕೊಂಡಿದ್ದಾನೆ. ಇದರಿಂದ ಸಿಡಿದ ನೀರಿನ ಬಿಂದುಗಳು ಸರ್ವತ್ರ ಹರಡಿವೆ. ಉನ್ನತ ಲೋಕವಾಸಿಗಳು ಈ ನೀರಿನ ಬಿಂದುಗಳಿಂದ ನೆನೆದು ಮತ್ತಷ್ಟು ಪವಿತ್ರರಾದೆವೆಂದು ಭಾವಿಸಿದ್ದಾರೆ.

ಗರ್ಭೋದಕ ಜಲದಿಂದ ಭೂಮಿಯನ್ನು ಉದ್ಧರಿಸಿದ ಶ್ರೀವರಾಹಸ್ವಾಮಿ ತನ್ನ ದಂತಗಳಿಂದ ಭೂಮಿಯನ್ನು ಹಿಡಿದು ಅದು ನೀರ ಮೇಲೆ ತೇಲುತ್ತಾ ನಿಲ್ಲುವಂತೆ ಮಾಡಿದ್ದಾನೆ. ಜೀವಿಗಳ ನಿವಾಸಾರ್ಥವಾಗಿ ಈ ರೀತಿಯಲ್ಲಿ ಭೂಮಿಯನ್ನು ಮತ್ತೆ ಯಥಾ ಸ್ಥಾನದಲ್ಲಿ ನಿಲ್ಲಿಸಿ ಆ ದೇವ ದೇವನು ಪರಂಧಾಮಕ್ಕೆ ಹೊರಟು ಹೋಗಿದ್ದಾನೆ. ದುಃಖ ನಿವೃತ್ತಿಗೆ ಭಾಗವತ ಶ್ರವಣವೊಂದೇ ಮಾರ್ಗವು. ಕಾಮಿತ ಪ್ರದವಾದ ಶ್ರೀಹರಿ ಚರಿತ್ರೆಯನ್ನು ಕೇಳಿದರೆ, ಪಠಿಸಿದರೆ ಹೃದಯಾಂತರ್ಯಾಮಿಯಾದ ಜನಾರ್ದನನು ಅತ್ಯಂತ ಪ್ರಸನ್ನನಾಗುತ್ತಾನೆ.

ವಾಸ್ತವದಲ್ಲಿ ವರಾಹಾವತಾರವು ಎರಡು ಸಾರಿ ಅವತರಣಿಕೆಯಾಗಿದೆ. ಸ್ವಾಯಂಭುವ ಕಲ್ಪದಲ್ಲಿ ಅವತರಿಸಿದ ಯಜ್ಞವರಾಹಮೂರ್ತಿ ಧರಣಿಯನ್ನು ವಿಶ್ವಜಲದಿಂದ ಉದ್ಧರಿಸಿದ್ದಾನೆ. ಚಾಕ್ಷುಷ ಕಲ್ಪದಲ್ಲಿ ಅವತರಿಸಿದ ಯಜ್ಞ ವರಾಹ ಮೂರ್ತಿ ಆದಿದೈತ್ಯನಾದ ಹಿರಣ್ಯಾಕ್ಷನನ್ನು ವಧಿಸಿದ್ದಾನೆ. ಹಿರಣ್ಯಾಕ್ಷನು ದಿತಿ -ಕಶ್ಯಪರ ಸಂತಾನ.ಒಂದು ಸಾರಿ ದಿತಿಯು ಸಂಧ್ಯಾಕಾಲದಲ್ಲಿ ಕಾಮಪೀಡಿತಳಾಗಿ ಕಶ್ಯಪರ ಸಂಗಕ್ಕಾಗಿ ಬಂದಿದ್ದಾಳೆ. ಆಗ ಕಶ್ಯಪರು ಸಂಧ್ಯಾವೇಳೆಯ ಪೂಜೆಯಲ್ಲಿ ನಿರತರಾಗಿದ್ದಾರೆ. ಸಂಗಮಿಸಲು ಅದು ಸರಿಯಾದ ಸಮಯವಲ್ಲವೆಂದು ಕಶ್ಯಪರು ಆಕೆಗೆ ಅದೆಷ್ಟೋ ಹಿತವಚನ ಹೇಳಿದ್ದಾರೆ. ಆದರೂ ಆಕೆಯು ಕೇಳಲಿಲ್ಲ. ಎಲ್ಲವೂ ದೈವಲೀಲೆಯೆಂದು ಭಾವಿಸುತ್ತಾ ಕಶ್ಯಪರು ಆಕೆಗೆ ಸಂಘಸುಖ ನೀಡಿದ್ದಾರೆ. ದುಷ್ಟ ಕಾಲದಲ್ಲಿ ಜರುಗಿದ ಸಂಗಮದ ಫಲವಾಗಿ ದಿತಿಯ ಗರ್ಭದಲ್ಲಿಬ್ಬರು ದೈತ್ಯರು ಸೇರಿಕೊಂಡಿದ್ದಾರೆ. ಅವರು ಗರ್ಭ ಪ್ರವೇಶ ಮಾಡುತ್ತಲೇ ಸೃಷ್ಟಿಯಲ್ಲಿ



ಅನೇಕ ಉತ್ಪಾತಗಳು ಸಂಭವಿಸಿವೆ. ಅದನ್ನು ಗಮನಿಸಿದ ದಿತಿ ಅವರನ್ನು ಹೊರಗೆ ಬಾರದೇ ಇರಿಸಲು ನೂರು ವರ್ಷ ಗರ್ಭವನ್ನು ಹೊತ್ತಿದ್ದಾಳೆ. ತಾನು ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತ ವನ್ನು ಆಕೆ ಬಯಸಿದ್ದಾಳೆ.ಆಗ ಕಶ್ಯಪರು ಆಕೆಗೆ ವರದಾನ ಮಾಡುತ್ತಾ ಅವರಿಬ್ಬರು ಮಕ್ಕಳು ಶ್ರೀ ಜಗನ್ನಾಥನ ಕೈಯಿಂದ ಮರಣಿಸುತ್ತಾರೆಂದು ಹೇಳಿದ್ದಾರೆ. ಅದೇ ಅಲ್ಲದೇ ಆ ಪುತ್ರರಲ್ಲಿ ಒಬ್ಬನ ಪುತ್ರನು ಪರಮಭಾಗವತನಾಗುತ್ತಾನೆಂದೂ ಸಹ ವರ ವಿತ್ತಿದ್ದಾರೆ. ದಿತಿ ಸಂತಾನವು ಶ್ರೀ ಕೃಷ್ಣನ ಕೈಯಿಂದಲೇ ಹತ ವಾಗುತ್ತದೆಂದು ಮೊದಲೇ ಹೇಳಲಾಗಿತ್ತೆಂದು ಭಾಗವತದಲ್ಲಿ ತಿಳಿಸಿದೆ. ಅದನ್ನು ಕೇಳಿದ ದಿತಿ ಎಷ್ಟೋ ಆನಂದ ಪಟ್ಟಿದ್ದಾಳೆ. "ಪುತ್ರಯಾಶ್ಚೆ ವಧಂ ಕೃಷ್ಣಾದ್ವಿದಿತ್ವಾಸಿನ್ಮಾ ಹಮನಾಃ" ಎಂದು ಆ ವಿಚಾರವನ್ನು ಸ್ಪಷ್ಟವಾಗಿ ಹೇಳಲಾಗಿದೆ.

ದಿತಿಯ ಗರ್ಭದಿಂದ ಹೊರಹೊಮ್ಮಿದ ತೇಜಸ್ಸಿನಿಂದ ಸೂರ್ಯ ಚಂದ್ರರ ಕಾಂತಿ ಕುಗ್ಗಿ ಹೋಗಿದೆ. ಅದಕ್ಕೆ ಪ್ರತಿಯಾಗಿ ತನ್ನಿಂದ ಏನೂ ಮಾಡಲಾಗದೆಂದು ಸ್ವತಃ ಬ್ರಹ್ಮದೇವನೇ ಹೇಳಿದ್ದಾನೆ.ಹತ್ತು ವರ್ಷದ ನಂತರ ದಿತಿಯು ಎರಡು ಗಂಡು ಮಕ್ಕಳಿಗೆ ಜನ್ಮವಿತ್ತಿದ್ದಾಳೆ. ಅವರೇ ಹಿರಣ್ಯಾಕ್ಷ ಮತ್ತು ಹಿರಣ್ಯ ಕಶಿಪು.ಹುಟ್ಟುತ್ತಲೇ ಹಿರಣ್ಯಾಕ್ಷನು ಗದೆಯನ್ನು ಹಿಡಿದು ವಿಶ್ವ ವೆಲ್ಲಾ ತಿರುಗಿ ಬಂದಿದ್ದಾನೆ. ಆತನನ್ನು ನೋಡಿ ದೇವತೆಗಳೇ ಓಡಿ ಹೋಗಿದ್ದಾರೆ. ತನ್ನನ್ನು ಎದುರಿಸುವವರು ಭೂಲೋಕದಲ್ಲೇ ಯಾರೂ ಇಲ್ಲವೆಂದೂ ಹಿರಣ್ಯಾಕ್ಷನು ಸಮುದ್ರ ಜಲದಲ್ಲಿ ಪ್ರವೇಶಿಸಿ ವರುಣನನ್ನು ಯುದ್ಧಕ್ಕಾಗಿ ಆಹ್ವಾನಿಸಿದ್ದಾನೆ. ತಾನು ಯುದ್ಧಕ್ಕೆ ಸರಿಯಾದವನಲ್ಲವೆಂದು ಆತನ ಸೊಕ್ಕನ್ನು ಮುರಿ ಯಬಲ್ಲವನು ಸಾಕ್ಷಾತ್ ಶ್ರೀಹರಿಯೇ ಎಂದು ವರುಣನು ಕೋಪದಿಂದ ಅವನನ್ನು ಸಮಾಧಾನಗೊಳಿಸಿದ್ದಾನೆ. ಹಾಗಾ ದರೆ ಭಗವಂತನು ಎಲ್ಲಿದ್ದಾನೆಂದು ಅದರ ವಿಚಾರವನ್ನು ಆ ದಾನವನು ನಾರದರಿಂದ ತಿಳಿದುಕೊಂಡು ವೇಗವಾಗಿ ರಸಾ ತಲಕ್ಕೆ ಹೊರಟಿದ್ದಾನೆ. ಆಗಲೇ ಯಜ್ಞವರಾಹಮೂರ್ತಿ ತನ್ನ ಕೋರೆದಂತದ ಮೇಲೆ ಭೂಮಿಯನ್ನಿಟ್ಟು ಕೊಂಡು ಸಮುದ್ರ ದಿಂದ ಹೊರಬಂದಿದ್ದಾನೆ. ಅಷ್ಟೊಂದು ಅದ್ಭುತವಾದ ಕಾರ್ಯ ವನ್ನು ಮಾಡುವ ಆ ದೇವ ದೇವನು ದಾನವನಿಗೆ ಸಾಮಾನ್ಯ ಪ್ರಾಣಿಯಾಗಿ ಕಂಡು ಬಂದಿದ್ದಾನೆ. ಆದ್ದರಿಂದಲೇ ಆ ರಾಕ್ಷ ಸನು ವರಾಹಮೂರ್ತಿಯನ್ನು ಅಪಹಾಸ್ಯ ಮಾಡಿ ಮಾತ ನಾಡಿದ್ದಾನೆ. ಇಷ್ಟಾದರೂ ಆ ರಕ್ಕಸನ ಮಾತನ್ನು ಲೆಕ್ಕಿಸದೇ ನೀರಿನ ಮೇಲೆ ಬಂದು, ತನ್ನ ಯೋಗ ಬಲದಿಂದ ಭೂಮಿಯು ನೀರಿನಲ್ಲಿ ತೇಲುವಂತೆ ಮಾಡಿ ಹಿರಣ್ಯಕಶಿಪುವಿನೊಂದಿಗೆ ಯುದ್ಧಕ್ಕೆ ನಿಂತಿದ್ದಾನೆ. ಇಬ್ಬರೂ ಗದೆಗಳಿಂದ ಮಾರಮಾರಿ ಯುದ್ಧವೆಸಗಿದ್ದಾರೆ.ಯುದ್ಧವು ಬಹಳ ಹೊತ್ತಿನವರೆಗೆ ಮುಂದು ವರೆದಿದೆ. ಇದರಿಂದ ಬ್ರಹ್ಮನಿಗೆ ಸ್ವಲ್ಪ ಕಳವಳವುಂಟಾಗಿ ಭಗ ವಂತನೊಂದಿಗೆ ಮಾತನಾಡುತ್ತಾ "ಸ್ವಾಮಿ! ನೀನು ಈ ದಾನ ವನ ಜೊತೆ ಆಟವಾಡುವುದೇ? ಸಂಧ್ಯಾ ಕಾಲ ಒಂದೊ ದಗು ತ್ತಿದೆ.ಆದ್ದರಿಂದ ಇವರನ್ನು ಸಂಹರಿಸಿ ವಿಜಯವನ್ನು ಎತ್ತಿ ಹಿಡಿಯ ಬೇಕು" ಎಂದಿದ್ದಾನೆ.

ಬ್ರಹ್ಮದೇವನ ಮಾತುಗಳನ್ನು ಕೇಳಿಸಿಕೊಂಡು ಶ್ರೀಯಜ್ಞ ವರಾಹಮೂರ್ತಿ ತನ್ನ ಚಕ್ರಾಯುಧ್ಧವನ್ನು ಪ್ರಯೋಗಿಸಿದ್ದಾನೆ. ಇದರಿಂದ ರಾಕ್ಷಸಮಾಯಾ ಶಕ್ತಿ ತತ್ತರಿಸಿ ಹೋಗಿದೆ. ಇನ್ನು ಏನನ್ನು ಮಾಡಲು ತೋಚದೇ ಆ ದಾನವನು ದೇವೇಶನೊಂದಿಗೆ ದ್ವಂದ್ವ ಯುದ್ಧಕ್ಕೆ ಸನ್ನದ್ಧನಾಗಿದ್ದಾನೆ. ತನ್ನ ಬಿಗಿಮುಷ್ಟಿಯಿಂದ ತೀವ್ರವಾಗಿ ಶ್ರೀವರಾಹಮೂರ್ತಿಗೆ ಹೊಡೆಯಲೆತ್ನಿಸಿದ್ದಾನೆ. ಆದರೆ ಭಗವಂತನು ಅವನ ಕೆನ್ನೆಯ ಮೇಲೆ ಒಮ್ಮೆ ಪ್ರಹಾರ ಮಾಡಲು ಹಿರಣ್ಯಾಕ್ಷನ ಕಣ್ಣು ತಿರುಗಿವೆ.ಶರೀರವೆಲ್ಲಾ ಶೀತಲ ಗೊಂಡಿದೆ, ಕೈಕಾಲುಗಳು ಮುರಿದಿದೆ. ಗಾಳಿಯ ಹೊಡೆತಕ್ಕೆ ಸಿಲುಕಿದ ಮರದಂತೆ ನೆಲಕ್ಕುರುಳಿದ್ದಾನೆ. ಸತ್ತರೂ ಸಹಾ ಆತನ ಮುಖದ ಮೇಲಿನ ಕಾಂತಿ ಬಾಡಿಲ್ಲ. "ಆಹಾ! ಇಷ್ಟು ಶ್ರೇಷ್ಠವಾದ ಸಾವು ಮತ್ತಾರಿಗೆ ಒದಗೀತು?" ಎಂದು ಬ್ರಹ್ಮನು ಅಂದಿದ್ದಾನೆ. ಭಗವಂತನ ಮುಖಾರವಿಂದವನ್ನು ದರ್ಶಿಸುತ್ತಾ ಮರಣಿಸಿದ್ದ ನಾದ್ದರಿಂದ ಇವನಿಗೆ ಇಂಥಾ ಭಾಗ್ಯ ದೊರಕಿದೆಯೆಂದು ಎಲ್ಲರೂ ಎಣಿಸಿದ್ದಾರೆ. ನಂತರ ಎಲ್ಲರೂ ಶ್ರೀವರಾಹಮೂರ್ತಿಯನ್ನು ಸ್ತುತಿಸಿದ್ದಾರೆ.ಬಳಿಕ ಅವರೆಲ್ಲರ ಸ್ತುತಿಯನ್ನು ಸ್ವೀಕರಿಸಿ ದೇವದೇವನು ಅಖಂಡಿತೋತ್ಸವದ ನಿಲಯವಾದ ತನ್ನ ನಿವಾಸಕ್ಕೆ ತೆರಳಿದ್ದಾನೆ. ಅಂದರೆ ಈ ಭಗವದ್ಧಾಮದಲ್ಲಿ ನಿರಂತರವಾಗಿ ಉತ್ಸವಗಳು ಜರಗುತ್ತಲೇ ಇರುತ್ತವೆಂಬುದು ಅರ್ಥ. ಈ ಯಜ್ಞವರಾಹ ಮೂರ್ತಿ ಲೀಲೆಯನ್ನು ಜೀವನದ ಕಡೆಯ ಕ್ಷಣದಲ್ಲಿ ಕೇಳುವವನಿಗೆ ನಾರಾಯಣನ ದಿವ್ಯಧಾಮಕ್ಕೆ ಸೇರಿಕೊಳ್ಳುತ್ತಾರೆ ಭಕ್ತರಿಗೆ ತಪೋಧ್ಯಾನಾದಿಗಳ ಅವಶ್ಯ ಕತೆಯೇ ಇಲ್ಲ. ಅವರು ಶ್ರದ್ಧೆಯಿಂದ ಶ್ರೀ ಕೃಷ್ಣಲೀಲೆಯನ್ನು, ಭಗವದ್‌ಲೀಲೆಯನ್ನು ಕೇಳುತ್ತಲೇ ಇರುತ್ತಾರೆ. ಇದರಿಂದಲೇ ಅವರಿಗೆ ಧನ, ಯಶಸ್ಸು, ದೀರ್ಘಾಯು, ಸರ್ವಾಭೀಷ್ಟೆಗಳು ಸಿದ್ಧಿ ಸುತ್ತವೆ. ಭಗವದ್‌ಲೀಲೆಗಳನ್ನು ನಿತ್ಯವೂ ಕೇಳುವವರು ಸನಾತನ ಧಾಮಕ್ಕೇ ಹೋಗಿ ಸೇರಿಕೊಳ್ಳುತ್ತಾರೆ. ನಿತ್ಯಲೀಲಾ ಶ್ರವಣ ಮಾಡುವ ಭಕ್ತರು ಈ ಜಗತ್ತಿನಲ್ಲಿರುವವರೆಗೆ ಶಾಂತಿಯುತರಾಗಿ ವಿಜಯಿಗಳಾಗಿ ಜೀವನವನ್ನು ಸಾಗಿಸಿ ಕಡೆಗೆ ಕೃಷ್ಣ ಲೋಕಕ್ಕೆ ಸೇರುತ್ತಾರೆ. ಭಕ್ತರಿಗೆ ಯಜ್ಞಾವರಾಹಮೂರ್ತಿಯ ಲೀಲಾ ಶ್ರವಣವು ಅಂತಹ ಶ್ರೇಷ್ಠವಾದ ಫಲಿತವನ್ನೇ ತಂದು ಕೊಡುತ್ತದೆ.

## ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

# ಶ್ರೀ ವೇಂಕಟೇಶ್ವರ ಅನ್ನದಾನ ಟ್ರಸ್ಟ್



ತಿರುಮಲೆ, ತಿರುಚಾನೂರಿನಲ್ಲಿ ಸಾವಿರಾರು ಭಕ್ತರಿಗೆ ನಿತ್ಯವೂ ಅನ್ನ ಪ್ರಸಾದ ವಿತರಣೆಯ ವಿಷಯವು ಭಕ್ತರಿಗೆ ತಿಳಿದಿದೆ! ಈಗ ತಿ.ತಿ.ದೇ. ಅನ್ನಪ್ರಸಾದ ಟ್ರಸ್ಟ್‌ಗೆ ಭಕ್ತರು, ದಾತರು ವಿರಾಳವನ್ನು ನೀಡಲು ಅವಕಾಶವನ್ನು ತಿ.ತಿ.ದೇ. ಕಲ್ಪಿಸುತ್ತಿದೆ. ಅದಕ್ಕೆ

**ಒಂದು ದಿನದ ವಿರಾಳ ಪಥಕ ಪ್ರವೇಶಿಸಲಾಗಿದೆ.**



ಅದು ಹೇಗೆಂದರೆ, ಒಂದು ದಿನಕ್ಕೆ ಆಗುವ ಖರ್ಚು

| | | | |
|---|---|---|---|
| 1) | **ಅಲ್ಪಾಹಾರ** | - | **6 ಲಕ್ಷಗಳು** |
| 2) | **ಮಧ್ಯಾಹ್ನ ಭೋಜನ** | - | **10 ಲಕ್ಷಗಳು** |
| 3) | **ರಾತ್ರಿ ಭೋಜನ** | - | **10 ಲಕ್ಷಗಳು** |
| | **ಮೊತ್ತ** | - | **26 ಲಕ್ಷಗಳು** |



ಈ ಮೊತ್ತವನ್ನು ದಾತರಿಂದ ಸಂಗ್ರಹಿಸಲು ಸಿದ್ಧವಾಗುತ್ತಿದೆ ತಿರುಮಲೆ ತಿರುಪತಿ ದೇವಸ್ಥಾನಗಳ ಅನ್ನಪ್ರಸಾದ ಟ್ರಸ್ಟ್.



ದಾತರು - ವ್ಯಕ್ತಿಗಳು / ಕಂಪನಿಗಳು/ ಸಂಸ್ಥೆಗಳು/ ಟ್ರಸ್ಟ್‌ಗಳು/ ಸಂಯುಕ್ತ ವಾಗಿಯೂ ಸಹ ಇರಬಹುದು.

ನೀವುಗಳು ಒಂದು ದಿನದ ಮೊತ್ತ ರೂ. 26 ಲಕ್ಷಗಳಾಗಲಿ / ಅಲ್ಪಾಹಾರ- 6 ಲಕ್ಷಗಳಾಗಲಿ /ಮಧ್ಯಾಹ್ನ ಭೋಜನ - 10 ಲಕ್ಷಗಳಾಗಲಿ/ ರಾತ್ರಿ ಭೋಜನ- 10 ಲಕ್ಷಗಳಾಗಲಿ ನೀಡಬಹುದು.



ದಾತರಿಗೆ ತಿ.ತಿ.ದೇ. ದೇವಸ್ಥಾನಗಳು ಕಲ್ಪಿಸುವ ಸೌಕರ್ಯಗಳು ಒಂದೇ ಮಾದರಿಯಲ್ಲಿ ಇರುತ್ತದೆ.

**ಮತ್ತಷ್ಟು ವಿವರಗಳಿಗೆ ಸಂಪ್ರದಿಸಿ :-**



ಸ್ಪೆಷಲ್ ಆಫೀಸರ್, ಶ್ರೀ ವೇಂಕಟೇಶ್ವರ ಅನ್ನಪ್ರಸಾದ ಟ್ರಸ್ಟ್,

ತಿ.ತಿ.ದೇ, ಆಡಳಿತ ಭವನ, ಕೆ.ಟಿ. ರೋಡ್, ತಿರುಪತಿ.

ದೂರವಾಣಿ ಸಂಖ್ಯೆ 0877-2264258,2264375,2264237

( **www.tirumala.org** ಈ ವೆಬ್‌ಸೈಟ್‌ನಲ್ಲಿ ಕೂಡ ವಿವರಗಳನ್ನು ಪಡೆಯಬಹುದು)






### ತಿರುಪ್ಪಾಣ ಆಳ್ವಾರ್:

ಶ್ರೀರಂಗದ ಬಳಿಯ ಉರೈಯೂರಿನಲ್ಲಿ ತಿರುಪ್ಪಾಣ ಆಳ್ವಾರರು ಜನಿಸಿದರು. ಒಬ್ಬ ಅಸ್ಪೃಶ್ಯನ ಮನೆಯಲ್ಲಿ ಬೆಳೆದವರು. ಬಾಲ್ಯದಿಂದಲೇ ಶ್ರೀರಂಗನಾಥನ ಬಗ್ಗೆ ಭಕ್ತಿಯನ್ನು ಬೆಳೆಸಿಕೊಂಡು ಪಾಣರು ದೇವರ ಪ್ರಾರ್ಥನೆಯಲ್ಲಿಯೇ ಸದಾಕಾಲವು ಮುಳುಗಿರುತ್ತಿದ್ದರು. ನಂತರದ ಕಾಲದಲ್ಲಿ ಲೋಕಸಾರಂಗ ಮುನಿಯು ಈತನನ್ನು ಶ್ರೀರಂಗನಾಥನ ಸನ್ನಿಧಿಗೆ ಕರೆದೊಯ್ದರು. ಕಣ್ಣು ಮನ ದೇಹಗಳಲ್ಲಿ ರಂಗನಾಥನ ರೂಪವನ್ನು ತುಂಬಿಕೊಂಡ ಪಾಣರು ಜಗತ್ತನ್ನು ಸೃಜಿಸಿದ ಮೂಲಕರ್ತನೇ ಎಂದು ಆರಂಭವಾಗುವ ಅಮಲ ನಾದಿಪ್ಪಿ ರಾನ್ ಎಂಬ ಪಾಶುರ ಮಾಲೆಯನ್ನು ರಚಿಸಿ ಶ್ರೀ ವೆಂಕಟೇಶ್ವರ, ಸ್ವಾಮಿಯನ್ನು ಶ್ರೀರಂಗನಾಥನೊಡನೆ ಅಭೇಧವಾಗಿ ವರ್ಣಿಸಿದ್ದಾರೆ.

ತಮ್ಮ ಕೃತಿಯ ಮೊದಲ ಪಾಶುರದಲ್ಲಿ ಪಾಣರು ಸ್ವಾಮಿಯನ್ನು ಕೀರ್ತಿಸುತ್ತ ಜಗದಾದಿ ಮೂಲನೂ, ತನ್ನ ಭಕ್ತರ ಸೇವೆಗೆಂದು ತಮ್ಮನ್ನು (ಪಾಣರನ್ನು) ಸೃಜಿಸಿದ ದೇವರೆಂದೂ, ದೇವತೆಗಳ ಅನುಗ್ರಹಕ್ಕೆ ಸದಾಸಿದ್ಧನಾಗಿರುವವನೆಂದೂ, ನರುಗಂಪು ಬೀರುವ ಹೂದೋಟಗಳ ಹೊಂದಿದ ವೆಂಗಡ ಬೆಟ್ಟದಲ್ಲಿ ನೆಲೆನಿಂತವನೂ ಆದ ಸ್ವಾಮಿಯು ಖಚಿತವಾದ ನೀತಿಮಾರ್ಗವನ್ನು ಅನುಸರಿಸುವವನೆಂದೂ ಶ್ರೀರಂಗದಲ್ಲಿ ಬಂದು ನೆಲೆಸಿರುವನೆಂದು ತಿಳಿಸುತ್ತ ಆತನು ತನ್ನ ಕಣ್ಣುಗಳಲ್ಲಿ ತುಂಬಿದ್ದಾನೆ. - ಎನ್ನುವರು.

ಮೂರನೆಯ ಪಾಶುರದಲ್ಲಿ ಅವರು ಮತ್ತೆ ವೆಂಗಡದ ಸ್ವಾಮಿಯನ್ನು ಗುರುತಿಸಿದ್ದಾರೆ. ಕ್ರೀಡಾಸಕ್ತ ಕಪಿಗಳಿಂದ ಕೂಡಿದ ವೆಂಗಡದಲ್ಲಿ ದೇವತೆಗಳಿಂದ ಆರಾಧನೆ ಪಡೆಯುವ ಸ್ವಾಮಿಯು ಶ್ರೀರಂಗದಲ್ಲಿ ಶೇಷಶಾಯಿಯಾಗಿರುವನೆಂದೂ ಆತನ ದುಕೂಲವು ರಕ್ತವರ್ಣದ ಆಗಸವನ್ನು ಹೋಲುವು ದೆಂದೂ, ನಾಭಿಯಲ್ಲಿ ಬ್ರಹ್ಮನು ಜನಿಸಿದ ಕಮಲವನ್ನು ಪಡೆದಿರುವ ನೆಂದೂ ಆತನು ತಮ್ಮ ಮನದಲ್ಲಿ ನಿಂತು ರಕ್ಷಿಸುತ್ತಿರುವನೆಂದು ತಿಳಿಸುವರು.

### ತಿರುಮಂಗೈ ಆಳ್ವಾರ್

ಬಂಗಾಳ ಕೊಲ್ಲಿಯಲ್ಲಿ ಕಾವೇರೀ ನದಿಯು ಸೇರುವ ತಿರುಕ್ಕುರೈಯಲೂರ್ ಗ್ರಾಮದಲ್ಲಿ ತಿರುಮಂಗೈ ಆಳ್ವಾರರು ಜನಿಸಿದರು. ತಮಿಳು ವೇದಗಳಾದ ದಿವ್ಯ ಪ್ರಬಂಧಗಳ ಬಹು ಪಾಲು ಪಾಶುರಗಳನ್ನು ವಿವಿಧ ಕೃತಿಗಳಲ್ಲಿ ರಚಿಸಿದವರು. ಪೆರಿಯ ತಿರುಮೊಳಿ, ತಿರುಕ್ಕುರುಂದಾಂಡಾಗಮ್, ತಿರುನೆಡುಂ ದಾಂಡಕಮ್, ಸಿರಿಯ ತಿರುಮಡಲ್, ಪೆರಿಯ ತಿರುಮಡಲ್, ಇವುಗಳೇ ಅವರ ರಚನೆಗಳು.

ಪೆರಿಯ ತಿರುಮೊಳಿಯ ಐವತ್ತೂರು ಪಾಶುರಗಳಲ್ಲಿ ವೆಂಗಡದ ಅಧಿದೇವತೆಯಾದ ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ಆತ ಉಲ್ಲೇಖಿಸುವರು.

ಶ್ರೀರಂಗದಲ್ಲಿ ಶೇಷಶಾಯಿಯಾಗಿರುವವನೂ, ಕ್ಷೀರಸಾಗರದಲ್ಲಿ ಮಲಗಿದವನೂ ಹಲವಾರು ಪವಾಡಗಳನ್ನು ಮೆರೆದ ಶ್ರೀಕೃಷ್ಣನಾಗಿರುವವನೂ, ಕೃತಯುಗದಲ್ಲಿ ಬೆಳ್ಳಗಿರುವ ವನೆಂದು ಕಲಿಯುಗದಲ್ಲಿ ಕಪ್ಪಗಿರುವವನೂ, ದ್ವಾಪರ ಯುಗ ದಲ್ಲಿ ಪೀತವರ್ಣದವನೂ ಆಗಿರುವ ದೇವರೆಂದು ಬಹು ಮಂದಿ ಹಿರಿಯರು ಭಾವಿಸಿದವನೂ, ತಿರುವೆಂಗಡದಲ್ಲಿ ನಿಂತಿರುವ ದೇವರೂ ಆದವನನ್ನು ಸ್ಮರಿಸಲೂ ಮನವನ್ನು ಬೇಡುವರು.

ಆಳ್ವಾರರು ತಿರುವೆಂಗಡದ ದೇವರನ್ನು ತ್ರಿವಿಕ್ರಮನೆಂದೂ, ರಾಮಚಂದ್ರನೆಂದೂ, ಗಜೇಂದ್ರ ರಕ್ಷಕನೆಂದೂ, ಹಿಮಾಲಯ ಪರ್ವತದ ಬದರಿಕಾಶ್ರಮದಲ್ಲಿ ನೆಲೆನಿಂತವನೆಂದೂ,ತಿರುಮಾಲಿರುಂ ಶೋಲೈಯಲ್ಲಿಯೂ, ತಿರುವಿಡವೆಂದೈಯಲ್ಲಿಯೂ ಇರುವವನೆಂದು ತಿಳಿಸುತ್ತ ಅಷ್ಟಭುಜ ಕ್ಷೇತ್ರದಲ್ಲಿ ಎಂಟು ಕೈಗಳೊಡನೆ ನಿಂತುಕೊಂಡಿರುವವನು ಈತನೇ ಎಂದೂ, ಪ್ರಳಯ ಕಾಲದಲ್ಲಿ ಎಂಟು ದಿಕ್ಕುಗಳನ್ನು ಸಪ್ತ ಲೋಕಗಳನ್ನು ರಕ್ಷಿಸುವವನೆಂದೂ, ಸುದರ್ಶನ ಚಕ್ರವನ್ನು ಹಿಡಿದವನೆಂದು ಎರಡು ಮರಗಳನ್ನು ಉರುಳಿಸಿದವನೆಂದೂ, ಪಾಂಡವರಿಗೆ ಭಾರತ ಯುದ್ಧದಲ್ಲಿ ನೆರವು ನೀಡಿದವನೆಂದೂ, ಬಲಿಯಿಂದ ಭೂಮಿಯನ್ನು ದಾನ ಬೇಡಿ ಪಡೆದವನೆಂದೂ, ಸಪ್ತ ಸಾಲ ವೃಕ್ಷ ಭಂಜಕನೆಂದೂ, ಹಿರಣ್ಯಕಶ್ಯಪನ ಉದರವನ್ನು ಬಗೆದವನೆಂದೂ, ಚಂದ್ರನ ಕ್ಷೀಣ ದೆಸೆಯನ್ನು ಕಳೆದವನೆಂದೂ, ಪಂಚ ಭೂತ ಸೃಜಕನೆಂದೂ, ಸಹಸ್ರನಾಮಗಳವನೂ, ಜನನ ವಿಲ್ಲದವನೂ,ದೇವತೆಗಳೊಡೆಯನೂ, ಶ್ರೀ ಲಕ್ಷ್ಮಿಯ ಪತಿಯೆಂದೂ ತಿಳಿಸುವರು.ಒಂಭತ್ತನೇ ಪಾಶುರದಲ್ಲಿ ಭೂಮಿಯ ಮೇಲಿನ ಪರ್ವತಗಳ ತಿಲಕವೆಂದು ತೋರುವ ವೆಂಗಡ ಪರ್ವತವನ್ನು ಸೇರಬೇಕೆಂದು ತಮ್ಮ ಮನಕ್ಕೆ ತಿಳಿ ಹೇಳುತ್ತ ಈ ಬೆಟ್ಟದಲ್ಲಿನ ಗಿಡಗಳು ಸುಗಂಧ ಪೂರ್ಣ ಪುಷ್ಪಗಳನ್ನು ಹೊಂದಿವೆಯೆಂದೂ ಇಲ್ಲಿನ ದೇವರು ತನ್ನ ಭಕ್ತರಿಗೆ ಬಹು ಸುಲಭವಾಗಿ ದರ್ಶನ ನೀಡುವನೆಂದೂ, ತನ್ನ ಅಷ್ಟಾಕ್ಷರ ಮಂತ್ರ ನಾದ "ಓಂ ನಮೋ ವೆಂಕಟೇಶಾಯ" - ಎನ್ನುವುದನ್ನು ಪುನಶ್ಚರಣ ಮಾಡುವವರ ಭವ ಬಂಧನವನ್ನು ಕಳೆಯುವನೆಂದೂ ತಿಳಿಸುವರು.

ಹತ್ತನೆಯ ಪಾಶುರದಲ್ಲಿ ತಮ್ಮನ್ನು ತಾವು ಕಲಿಯನ್ ಎಂದೂ ತಿರುಮಂಗೈ ಪ್ರಾಂತ್ಯದ ಪ್ರಭುವೆಂದು ತಿಳಿಸುವ ಆಳ್ವಾರರು ತಾವು ತಿಳಿತಮಿಳಿನಲ್ಲಿ ತಿರುವೆಂಗಡದೇವರ ಸ್ತುತಿಯ ರಚಿಸಿದ ಈ ಒಂಭತ್ತು ಪಾಶುರಗಳನ್ನು ಪಠಿಸುವ ಭಕ್ತರು ಸ್ವಾಮಿಯ ಭಕ್ತರಾಗುವುದೇ ಅಲ್ಲದೆ ಅವರ ಹಿಂಬಾಲಕರ ರಕ್ಷಕರೂ ಆಗಿ ಸ್ವರ್ಗವನ್ನು ಪಡೆಯುವರೆನ್ನವರು.

ಈ ಪಾಶುರಗಳಿಂದಾಗಿ ವೆಂಗಡವು ಕೆಂಪು ಮೀನುಗಳಿಂದ ಕೂಡಿದ ಹೊಳೆಗಳಿಂದಲೂ ದೊಡ್ಡ ದೊಡ್ಡ ಹೂವಿನ ಪೊದೆಗಳಿಂದಲೂ, ಕೆಂಪು ಮಣ್ಣಿನ ಕೃಷಿಭೂಮಿಯನ್ನು ಹೊಂದಿದ್ದಿತೆಂದೂ, ಕುರುವ ಜನಾಂಗದ ಕಿರುಗಾತ್ರದ ಕಟಿಪ್ರದೇಶದ ತುರುಣಿಯರು ಇರುವ ಸ್ಥಳವೆಂದೂ ತಿಳಿದು ಬರುವುದು.

ಎತ್ತರವಾದ ಬಂಡೆಗಳಿಂದ ಆವೃತವಾದ ಶಿಖರಗಳ ನಡುವೆ ಬೃಹದ್ಗಾತ್ರದ ಆನೆಗಳಿರುವ ಬಿದಿರ ಮೆಳೆಗಳಿಂದಲೂ, ಅಲ್ಲಿ ಕಟ್ಟಿರುವ ಜೇನುಗೂಡುಗಳಿಂದಲೂ ತೊಟ್ಟಿಕ್ಕುವ ಮಕರಂದವನ್ನು ಕುಡಿಯುತ್ತ ಝೇಂಕರಿಸಿ ಹಾರಾಡುವ ದುಂಬಿಗಳಿಂದಲೂ , ಅಸಂಖ್ಯವಾದ ಕಮಲದ ಹೂವುಗಳನ್ನು ಹೊಂದಿದ ಪವಿತ್ರ ತೀರ್ಥಗಳಿಂದಲೂ ತೊಟ್ಟಿಕ್ಕೂವ ಸುಗಂಧ ಪುಷ್ಪಗಳ ತರುಗಳಿಂದಲೂ ಕೂಡಿದ ವೆಂಗಡದ ಬೆಟ್ಟದಲ್ಲಿ ನೆಲೆ ನಿಂದ ದೇವರಲ್ಲಿ ಶರಣಾಗತರಾಗಬೇಕೆಂದು ಅಪೇಕ್ಷಿಸುವರು. ದೇವರಿಗೆ ತಮ್ಮ ಪರಿಚಯವನ್ನು ತಿಳಿಸುತ್ತ ತಾವು ಪ್ರಾರಂಭದಿಂದಲೂ ಪಾಪಕಾರ್ಯಗಳನ್ನೇ ಮಾಡುತ್ತ ಬಂದಿರುವುದಾಗಿಯೂ, ತಾಯಿ, ತಂದೆ, ಬಂಧುಗಳು ಮಕ್ಕಳು ಎಂಬ ಸಂಸಾರಿಕ ಬಂಧನಗಳಿಂದ ಕೂಡಿ ಹಾಳಾದೆನೆಂದೂ, ವೆಂಗಡದ ಸ್ವಾಮಿಯಲ್ಲಿ ಶರಣು ಬಂದಿರುವೆನೆಂದೂ ತಿಳಿಸುತ್ತ ಉದ್ಧಾರ ಮಾಡಬೇಕೆಂದು ಬೇಡುವರು. ಮೃಗಶಾಬಾಕ್ಷಿಯರಾದ ಹೆಂಗಸರಿಂದ ಆಕರ್ಷಿತನಾಗಿ ಬುದ್ಧಿಹೀನನಾಗಿ ಹೇಳಲಾಗದ ಅಪಕೃತ್ಯಗಳನ್ನು ಮಾಡಿರುವುದಾಗಿಯೂ, ಅಸಂಖ್ಯ ಮನುಷ್ಯರನ್ನು ಕೊಂದಿರುವುದಾಗಿಯೂ,ಒಂದಾದರೂ ಪುಣ್ಯಕಾರ್ಯ ಮಾಡಿಲ್ಲವೆಂದೂ,ಯೌವನವನ್ನೆಲ್ಲ ಸುಖ ಲೋಲುಪ್ತಿಯಲ್ಲಿಯೇ ಕಳೆದಿರುವುಗಾಗಿಯೂ, ಪ್ರಾರ್ಥನೆಯ ಸೌಲಭ್ಯವನ್ನೇ ಮರೆತುನಿಂತವನಾಗಿಯೂ, ದೇಹವೆಲ್ಲ ರೋಗ ರುಜಿನಗಳಿಂದ ಜರ್ಜರಿತ ಆಗಿರುವುದಾಗಿಯೂ, ಕಡೆಗೆ ವೆಂಗಡದವನಲ್ಲಿ ಶರಣು ಬಂದಿರುವುದಾಗಿಯೂ ಪ್ರಾರ್ಥಿಸುವರು. ಎರಡನೆಯ ಪಾಶುರದಲ್ಲಿ ದೇವರನ್ನು ಆನೆಯೆಂದು ಸಂಬೋಧಿಸಿರುವರು.

- ಸಶೇಷ

**ವೃಕ್ಷೋ ರಕ್ಷತಿ ರಕ್ಷಿತಃ**

**ಗಿಡವೊಂದ ನೆಡುವವನು**
**ದೇವರಾ ಸೇವಕನು**
**ನೆನೆವರವನನು ಜನರು**
**ಅವನೆಂದು ನೋಡದರು**

# ಕಪಿಲೇಶ್ವರಾ! ಸ್ವಯಂಭೂಲಿಂಗೇಶ್ವರಾ!



## ಸ್ಥಳ ಪುರಾಣ:

### ಕಪಿಲೇಶ್ವರಮಹಾಲಿಂಗದ ಆವಿರ್ಭಾವ

ಪಾತಾಳಲೋಕದಲ್ಲಿ 'ಭೋಗವತಿ' ಯಾಗಿ ಹೆಸರನ್ನು ಪಡೆದ ಗಂಗಾ ನದಿಯ ತೀರದಲ್ಲಿರುವ ತನ್ನ ಆಶ್ರಮದಲ್ಲಿ ಕಪಿಲ ಮಹರ್ಷಿ ಒಂದು ಶಿವಲಿಂಗವನ್ನು ಪೂಜಿಸುತ್ತಿದ್ದನು. ಆ ಶಿವಲಿಂಗವು ತೇಜಸ್ಸಿನಿಂದ ಪ್ರಕಾಶಮಾನವಾಗಿತ್ತು. ಹಾಗೇ ಪ್ರಕಾಶಿಸುವುದಲ್ಲದೇ ದಿನದಿನಕ್ಕೆ ಅದ್ಭುತವಾಗಿ, ಊರ್ಧ್ವಮುಖವಾಗಿ ಬೆಳೆಯುತ್ತಾ ಭೂಮಿಯನ್ನು ಕೂಡ ಬಗೆದು ಕೊನೆಗೆ ವೆಂಕಟಾಚಲ ಕ್ಷೇತ್ರದ ಮೂಲದಲ್ಲಿ ಸ್ವಯಂಭುವಾಗಿ ನೆಲಸಿತು. ಹಾಗೇ ಇನ್ನೂ ಇನ್ನೂ ಬೆಳೆಯುತ್ತಿರುವ ಆ ಅದ್ಭುತವಾದ ಶಿವಲಿಂಗವನ್ನು ಬೆಳೆಯಲು ಬಿಡಬಾರದೆಂದು ಸಂಕಲ್ಪಿಸಿ ಶ್ರೀ ಮಹಾವಿಷ್ಣುವು ಗೋಪಾಲನಾಗಿ, ಬ್ರಹ್ಮದೇವನು ಕಪಿಲಧೇನುವಾಗಿ ಆ ಶಿವಲಿಂಗದ ಮೇಲೆ ಅನಂತವಾದ ಕ್ಷೀರಧಾರವನ್ನು ಸುರಿಸಿ ಅಭಿಷೇಕವನ್ನು ಮಾಡಿ ಇಬ್ಬರು ಅನೇಕ ವಿಧವಾಗಿ ಪ್ರಾರ್ಥನೆಯನ್ನು ಮಾಡಿದರು. ಅಷ್ಟರಲ್ಲಿ ಪಾತಾಳ ಲೋಕದಿಂದ ವಿಪರೀತವಾಗಿ ಬೆಳೆಯುತ್ತಾ ಇರುವ ಆ ಮಹಾಶಿವಲಿಂಗ ವೆಂಕಟಾದ್ರಿ ಪರ್ವತ ಮೂಲದಲ್ಲಿ ಏರ್ಪಡಿಸಿದ ಗುಹೆಯಲ್ಲಿ ಸ್ವಯಂಭುವಾಗಿ ನೆಲಸಿದೆ.

ಪಾತಾಳಲೋಕದಿಂದ ಭೂಮಿಯನ್ನು ಬಿರಿದು ಬಂದ ಆ ಶಿವಲಿಂಗದ ಜೊತೆಯಲ್ಲಿ, 'ಭೋಗವತಿ' ಗಂಗಾ ಕೂಡಾ ಹೊರಗೆ ಬಂದಿತು. ಹಾಗೇ ಬೆಳೆದು ಅವಿರ್ಭಾವಿಸಿದ ಆ ಪಾತಾಳ ಶಿವಲಿಂಗವನ್ನು ಅಲ್ಲಿಯೇ ಉದ್ಭವಿಸಿದ ಭೋಗವತಿ ತೀರ್ಥಜಲದಿಂದ ದೇವತೆಯರೆಲ್ಲರೂ ಅಭಿಷೇಕವನ್ನು ಮಾಡಿ ಪೂಜೆಯನ್ನು ನಿರ್ವಹಿಸಿದರು.

ಈ ಶಿವಲಿಂಗವನ್ನು ಮೊದಲ ಬಾರಿ ಪಾತಾಳದಲ್ಲಿ ಕಪಿಲ ಮಹರ್ಷಿ ಪೂಜಿಸಿದ ಕಾರಣ ಶಿವನಿಗೆ 'ಕಪಿಲೇಶ್ವರನು' ಎಂದು "ಕಪಿಲೇಶ್ವರಮಹಾಲಿಂಗ" ಎಂದು ಪ್ರಸಿದ್ಧವಾದ ಹೆಸರು ಏರ್ಪಟ್ಟಿತು. ಹಾಗೆಯೇ ಈ ಕಪಿಲೇಶ್ವರ ಸನ್ನಿಧಿಯಲ್ಲಿ 'ಭೋಗವತಿ' ಗಂಗ 'ಕಪಿಲತೀರ್ಥ' ಎನ್ನುವ ಹೆಸರಿನಿಂದ ಪರಮಪಾವನ ತೀರ್ಥರಾಜನಾಗಿ ಪ್ರಸಿದ್ಧಿ ಹೊಂದಿ ಅಲ್ಲಿ ಸ್ನಾನ ಮಾಡಿದ ಎಲ್ಲರನ್ನು ಘೋರ ಪಾಪದಿಂದ ವಿಮುಕ್ತಿಯನ್ನು ಮಾಡಿ ಪುನೀತರನ್ನಾಗಿ ಮಾಡುತ್ತಿದೆ. ಈ ಕಪಿಲತೀರ್ಥದಲ್ಲಿ ನೆಲಸಿದ ಶ್ರೀಕಾಮಾಕ್ಷಿ ಸಮೇತ ಶ್ರೀ ಕಪಿಲೇಶ್ವರಸ್ವಾಮಿಯವರು ಭಕ್ತರ ಪಾಲಿಗೆ ರಕ್ಷಕನಾಗಿ ಸಮಸ್ತಪಾಪವನ್ನು ಪರಿಹಾರ ಮಾಡಿ ಸಕಲ ಸೌಭಾಗ್ಯವನ್ನು ಪ್ರಸಾದಿಸುತ್ತಿದ್ದಾನೆ.

## ಕಪಿಲತೀರ್ಥ ಚರಿತ್ರೆ

ವೈಷ್ಣವಮತಾಭಿಮಾನಿ ಅಚ್ಯುತರಾಯರು ಶ್ರೀವೆಂಕಟೇಶ್ವರ ಸ್ವಾಮಿಯವರಿಗೆ ಪ್ರೀತಿಕರವಾಗಿ ಈ ಕ್ಷೇತ್ರಕ್ಕೆ ಇರುವ ಕಪಿಲತೀರ್ಥ ಎನ್ನುವ ಹೆಸರನ್ನು ಬಿಟ್ಟು 'ಸುದರ್ಶನ ಚಕ್ರತೀರ್ಥ' ಎನ್ನುವ ಹೆಸರಿನಿಂದ ಪ್ರಸಿದ್ಧಿಯನ್ನು ಹೊಂದಿಸಿದರು. ಅಷ್ಟೇ ಅಲ್ಲದೆ 25-06-1531 ರಲ್ಲಿ ಈ ಪುಷ್ಕರಿಣಿಯಲ್ಲಿ ನಾಲ್ಕು ಮೂಳೆಗಳಲ್ಲಿ 'ತಿರುವಾಳಿಕ್ಕಳ್' ಎಂದು ಕರೆಯುವ ನಾಲ್ಕು ಸುದರ್ಶನ ಚಕ್ರಶಿಲಾಯಂತ್ರವನ್ನು ಪ್ರತಿಷ್ಠಿಸಿ ಈ ತೀರ್ಥಕ್ಕೆ 'ಚಕ್ರತ್ತಾಳ್ವಾರು ತೀರ್ಥ' ಎಂದು 'ಆಳ್ವಾರುತೀರ್ಥಂ' ಎಂದು ಸಾರ್ಥಕವಾದ ನಾಮಧೇಯವನ್ನು ಕಲ್ಪಿಸಿದರು.

ಕಪಿಲೇಶ್ವರ ಆಲಯದಲ್ಲಿ ಪಾದವನ್ನು ಇಟ್ಟದ್ದರಿಂದ ಪ್ರದಕ್ಷಿಣಾ ಮಾರ್ಗದಲ್ಲಿ ಇದ್ದ ಸಮಸ್ತ ಪರಿವಾರ ದೇವತೆಗಳ ಬಗ್ಗೆ ತಿಳಿದು ಕೊಳೋಣ.

- ಮೂಲ. ಇ. ಮುನಿಯಮ್ಮ ಮುತ್ತುಕೃಷ್ಣನ್
- ಅನುವಾದ ಶ್ರೀಮತಿ. ಎಸ್. ಸುರೇಖ



### ಮುಖಮಂಡಪ

ಶ್ರೀ ಕಪಿಲೇಶ್ವರಸ್ವಾಮಿ ಆಲಯ ಮುಖಮಂಡಪ ಒಳಗಡೆ ಶ್ರೀ ಸ್ವಾಮಿಯವರಿಗೆ ಎದುರಿಗೆ ದೊಡ್ಡದಾದ ಧ್ವಜಸ್ತಂಭ, ಆ ಧ್ವಜಸ್ತಂಭದ ಹತ್ತಿರದಲ್ಲಿ ಪಶ್ಚಿಮವಾಗಿ 'ಬಲಿಪೀಠ' ಇದೆ. ಪ್ರಧಾನಾಲಯದ ಪ್ರವೇಶ ದ್ವಾರದ ಎರಡೂ ಕಡೆಯೂ ಶಿವಶಂಕರರ ದ್ವಾರಪಾಲಕರಿಗೆ 'ದಿಂಡಿ', 'ಮುಂಡಿ' ಎಂದು ಹೆಸರುಗಳು. ಇವರನ್ನು ದಾಟಿದ ನಂತರ ಮುಖಮಂಟಪ ಬರುತ್ತದೆ. ವರಸೆಯಾಗಿ ಐದು ಸ್ತಂಭಗಳ ಸೇತುವೆ ಮೂರು ವರಸೆಯಾಗಿ ಒಟ್ಟು ಹದಿನೈದು ಸ್ತಂಭಗಳಿಂದ ನಿರ್ಮಿಸ ಲಾದ ವಿಶಾಲವಾದ ಈ ಮುಖಮಂಟಪದಲ್ಲಿ ಶಿಲಾಸ್ತಂಭಗಳಲ್ಲಿ ಕಾಮಧೇನುವಿನ ಕ್ಷೀರದಿಂದ ಅಭಿಷೇಕಿಸುತ್ತಿರುವ ಕಪಿಲೇಶ್ವರ ಲಿಂಗ, ಭಕ್ತಕಣ್ಣಪ್ಪ ಅರ್ಚಿಸುತ್ತಿರುವ ಶ್ರೀ ಕಾಳಹಸ್ತಿಲಿಂಗ, ಅಂಜ ನೇಯಸ್ವಾಮಿ, ನಂದೀಶ್ವರನು, ಚತುರ್ಭುಜ ಗಣಪತಿ, ಮಯೂರ ವಾಹನನಾದ ಕುಮಾರಸ್ವಾಮಿ,ಮಹಾಋಷಿಗಳು,ಯೋಗಿಗಳು, ಮೊದಲಾದ ಶಿಲ್ಪಗಳನ್ನು ಕೆತ್ತಿಸಲಾಗಿದೆ.ಈ ಮುಖ ಮಂಟಪದಲ್ಲಿ ಶ್ರೀ ಕಪಿಲೇಶ್ವರ ಮಹಾಲಿಂಗಕ್ಕೆ ಎದುರಿಗೆ ಸ್ವಾಮಿಯವರ ಅಭಿಮುಖ ವಾಗಿ ನಂದೀಶ್ವರ ಶಿಲಾವಿಗ್ರಹ, ಶ್ರೀಕಾಮಾಕ್ಷಿ ಅಮ್ಮನವರ ಎದುರಿಗೆ ಸಿಂಹವಾಹನ ಪ್ರತಿಷ್ಠಿಸಲಾಗಿದೆ. ಗರ್ಭಾಲಯದಲ್ಲಿ ಪ್ರವೇಶಿಸಿ ದ್ವಾರಕ್ಕೆ ಎರಡು ಕಡೆಯು ಉತ್ತರ ದಿಕ್ಕಿಗೆ ದ್ವಾರಗಣಪತಿ, ದಕ್ಷಿಣ ದಿಕ್ಕಿಗೆ ದ್ವಾರ ಕುಮಾರಸ್ವಾಮಿ ಶಿಲಾ ಮೂರ್ತಿಗಳಿವೆ.

ಮುಖಮಂಡಪ ದಾಟಿದ ನಂತರ 6x7x7 ಘನಪುಟ ಹೆಜ್ಜೆಗಳ ವೈಶಾಲ್ಯ ಗರ್ಭಾಲಯವಿದೆ.ಈ ಶಿಲಾದ್ವಾರ ಬಂಧನ ಮಾತ್ರ ಇದೆ. ಈ ಶಿಲಾದ್ವಾರ ಬಂಧನಕ್ಕೆ ಯಾವುದೇ ರೀತಿಯ ಬಾಗಿಲುಗಳಿ ರುವುದಿಲ್ಲ. ಗರ್ಭಾಲಯದ ಮಧ್ಯಭಾಗದಲ್ಲಿ ಪಶ್ಚಿಮಾಭಿಮುಖವಾಗಿ ಸ್ವಯಂಭುವಾಗಿ ಆರ್ಚಾರೂಪದಲ್ಲಿ ಮಹಾಲಿಂಗ ರೂಪದಲ್ಲಿ ಶ್ರೀಕಪಿ ಲೇಶ್ವರಸ್ವಾಮಿ ಉದ್ಭವಿಸಿ ಇರುವನು. ಕೆಳಗಿನಿಂದ ಮೇಲಿನವರೆಗೆ ಈ ಶಿವಲಿಂಗವು ಸುಮಾರು 3 ಅಡಿ ಎತ್ತರವಿದೆ. ಈ ಮಹಾಲಿಂಗದ ಮೂಲದಲ್ಲಿ ರಜತವರ್ಣದಿಂದ ಕೂಡಿದ ಬಿಳಿರಂಗಿನಲ್ಲಿ, ಮಧ್ಯ ಭಾಗದಲ್ಲಿ ಸುವರ್ಣಕಾಂತಿಯಿಂದ ಬಂಗಾರದಂತೆ ಕೂಡಿದ ಅರಿಶಿನ ರಂಗಿನಲ್ಲಿ, ಆಗ್ರಭಾಗದಲ್ಲಿ ತಾಮ್ರದಿಂದ ಕೂಡಿದ ಕೆಂಪು ರಂಗಿನಲ್ಲಿ ಪ್ರಜ್ವಲಿಸುತ್ತಿರುತ್ತದೆ. ಅಷ್ಟೇ ಅಲ್ಲದೇ ಈ ಶಿವಲಿಂಗ ಪಶ್ಚಿಮ, ಉತ್ತರ, ಪೂರ್ವ, ದಕ್ಷಿಣ, ಊರ್ಧ್ವ ದಿಕ್ಕಿನಲ್ಲಿ ಪಂಚಮುಖದಲ್ಲಿ ಕಾಣಿಸಿ ಗಾಂಭೀರ್ಯವಾಗಿ ದರ್ಶನವನ್ನು ನೀಡುತ್ತದೆ. ಪಶ್ಚಿಮಾಭಿ ಮುಖವಾಗಿ ದರ್ಶನವನ್ನು ನೀಡುತ್ತಿರುವ ಕಪಿಲೇಶ್ವರ ಲಿಂಗಮೂರ್ತಿ ಯನ್ನು 'ಸದ್ಯೋಜಾತಮೂರ್ತಿ' ಎಂದು ಹೇಳುತ್ತಾರೆ. ಅಂದರೆ ಕೋರಿಕೆಯನ್ನು ಈಡೇರಿಸುವ ಮೂರ್ತಿ ಎಂದು ಅರ್ಥ. ಯುಗ ಯುಗಗಳಿಂದ ಪ್ರಸಿದ್ಧಿ ಹೊಂದಿದ ದೇವ, ಗಂಧರ್ವ, ಯಕ್ಷ, ಕಿನ್ನರ ಕೈಗಳಿಂದ, ಮಹರ್ಷಿಗಳ ಕೈಗಳಿಂದ, ಪಂಡಿತರಿಂದ ಮಾನವರೆಲ್ಲರಲ್ಲಿ ಆರಾಧಿಸ ಲಾಗುತ್ತಿರುವ ಮಹಾ ಮಹಿಮಾನ್ವಿತವಾದ ಹೆಸರನ್ನು ಪಡೆದ ಶಿವಲಿಂಗ 'ಶ್ರೀಕಪಿಲೇಶ್ವರ ಮಹಾಲಿಂಗ',ಶ್ರೀ ಕಪಿಲೇಶ್ವರ ಸ್ವಾಮಿ ದೇವೇರಿ ಆದ ಪಾರ್ವತಿದೇವಿ ಈ ಕ್ಷೇತ್ರದಲ್ಲಿ 'ಕಾಮಾಕ್ಷಿ ದೇವಿ' ಎಂದು ಕರೆಯಲ್ಪಡುತ್ತದೆ.

### ಪರಿವಾರದೇವತಾಮಂಡಪದಲ್ಲಿ ಇದ್ದ ದೇವತಾ ಮೂರ್ತಿಗಳು

ಶ್ರೀಕಾಮಾಕ್ಷಿಕಪಿಲೇಶ್ವರನ ಸನ್ನಿಧಿಗೆ ದಕ್ಷಿಣಾವಾಗಿ ಈ ಪರಿವಾರದೇವತಾಮಂಡಪ ಇದೆ. ಪರಮಶಿವನ ಪರಿ ವಾರದಲ್ಲಿ ಅತ್ಯಂತ ಪ್ರಧಾನವಾಗಿ ಪ್ರಕೃಷ್ಟ ಶಿವಭಕ್ತನು, ನಿರಂತರ ಶಿವ ಧ್ಯಾನ ಪಾರಾಯಣನು ಶ್ರೀ ಚಂಡೀಕೇಶ್ವರ ಸ್ವಾಮಿ. ಈ ಸ್ವಾಮಿ ಶ್ರೀಕಾಮಾಕ್ಷಿಕಪಿಲೇಶ್ವರರ ಪ್ರದಕ್ಷಿಣಾ ಪಥದಲ್ಲಿ ಸೋಮ ಸೂತ್ರದಲ್ಲಿ ಧ್ಯಾನ ನಿಮಗ್ನಮೂರ್ತಿ ಯಾಗಿ ದಕ್ಷಿಣಾಭಿಮುಖನಾಗಿ ಇದ್ದಾನೆ. ಪರಿವಾರದೇವತಾ ಮಂಡಪಗಳಲ್ಲಿ ದಕ್ಷಿಣಾಭಿಮುಖವಾಗಿ ಕುಳಿತು ಪ್ರಪ್ರಥಮ ವಾಗಿ ದರ್ಶನವನ್ನು ನೀಡುವ ಸ್ವಾಮಿ ಶ್ರೀ ಮೇಧಾದಕ್ಷಿಣಾ ಮೂರ್ತಿ.ಈ ಸ್ವಾಮಿ ಸಕಲ ಜಗದ್ಗುರುಮೂರ್ತಿಯಾಗಿ ಪ್ರಶಸ್ತಿಯನ್ನು ಪಡೆದ ಜ್ಞಾನಪ್ರದಾತ.ಇದರ ಪಕ್ಕದಲ್ಲಿ ಕಾಲ ಭೈರವಸ್ವಾಮಿ ಇದ್ದಾನೆ. ಇದಕ್ಕೆ ಎಡಗಡೆ ಗೋಡೆಗೆ ಹತ್ತಿರಕ್ಕೆ ದಕ್ಷಿಣಾಭಿಮುಖವಾಗಿ ಇರುವ ಮೂರ್ತಿ ಶ್ರೀ ಮಹಾಗಣಪತಿ. ಶ್ರೀ ಮಹಾಗಣಪತಿಯ ಎಡಗಡೆ ಪಕ್ಕದಲ್ಲಿ ಮಹಾಶಾಸ್ತ ದರ್ಶನವನ್ನು ನೀಡುತ್ತಾ ಇದ್ದಾನೆ. 'ಶಾಸ್ತ' ಅಂದರೆ ಶಾಷಿಸುವವನು ಎಂದು ಅರ್ಥ.ಶೈವಕ್ಷೇತ್ರದಲ್ಲಿ ಯಾವುದೇ





ರೀತಿಯ ಭೂತ ಪಿಶಾಚಾದಿಗಳು ಪ್ರವೇಶಿಸದೆ ಅವು ಭಕ್ತರನ್ನು ಬಾಧಿಸದೆ ಅವುಗಳನ್ನು ಶಾಷಿಸುವವನೇ ಮಹಾಶಾಸ್ತ. ಈ ಮಂಡಪದ ಗೋಡೆಯ ಹತ್ತಿರವೇ ಒಂದು ಲಿಂಗರೂಪನಾದ ಪಶ್ಚಿಮಮುಖವಾಗಿ ಶ್ರೀ ಕಾಶೀವಿಶ್ವೇಶ್ವರ ಸ್ವಾಮಿ ಅರ್ಚಾಮೂರ್ತಿಯಾಗಿ ನೆಲಸಿದ್ದಾನೆ. ಇದರ ಪಕ್ಕದಲ್ಲಿ ಪಶ್ಚಿಮಾಭಿ ಮುಖವಾಗಿ ಶ್ರೀ ಉಮಾಮಹೇಶ್ವರ ಸ್ವಾಮಿ ದರ್ಶನವನ್ನು ನೀಡುತ್ತಿದ್ದಾನೆ. ಇದಕ್ಕೆ ದಕ್ಷಿಣದಿಕ್ಕಿನ ಪಶ್ಚಿಮಾಭಿಮುಖವಾಗಿ ಕುಳಿತು ಕೊಂಡ ಭಂಗಿಯಲ್ಲಿ ಚತುರ್ಭುಜನಾದ ಮೂಷಿಕ ವಾಹನದಲ್ಲಿ ದರ್ಶನವನ್ನು ನೀಡುತ್ತಿರುವ ಶಿಲಾಮೂರ್ತಿ ಶ್ರೀ ಪ್ರಮಥ ಗಣಪತಿ. ಪಶ್ಚಿಮಾಭಿಮುಖವಾಗಿ ದಕ್ಷಿಣದ ಕಡೆ ಕೊನೆಯದಾಗಿ ನಿಂತಿರುವ ಶಿಲಾಮೂರ್ತಿ ಶ್ರೀ ಶಿವಸೂರ್ಯಸ್ವಾಮಿ. ಉತ್ಸವ ಪ್ರತಿಮಾ ಮಂಡಪಕ್ಕೆ ಪಕ್ಕದಲ್ಲಿ ಪ್ರತ್ಯೇಕವಾಗಿ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಯವರ ಸನ್ನಿಧಿ ಇದೆ. ಇಲ್ಲಿ ಸ್ವಾಮಿ ಶ್ರೀ ವಲ್ಲಿದೇವಸೇನಾ ಸಮೇತವಾಗಿ ದರ್ಶನವನ್ನು ನೀಡುತ್ತಿದ್ದಾನೆ. ಈ ಸನ್ನಿಧಿಯ ಎದುರುಗೆ ಏಕಾಂತ ಸೇವಾಮಂಡಪ ಇದೆ. ಇಲ್ಲಿ ಪ್ರತಿರಾತ್ರಿ ಕೊನೆಯಲ್ಲಿ ಶ್ರೀಕಾಮಾಕ್ಷಿ ಕಪಿಲೇಶ್ವರ ಸ್ವಾಮಿಯವರಿಗೆ ಏಕಾಂತಸೇವೆ (ಪವಳಿಂಪು ಸೇವೆ) ನಡೆಯುತ್ತದೆ.

## ಉತ್ಸವ ಪ್ರತಿಮಾಮಂಡಪದಲ್ಲಿ ಇದ್ದ ಮೂರ್ತಿಗಳು

ಪರಿವಾರದೇವತಾ ಮಂಡಪದಲ್ಲಿ ಅಂದರೆ ಪಶ್ಚಿಮವಾಗಿ ಶ್ರೀ ಸುಬ್ರಹ್ಮಣ್ಯಸ್ವಾಮಿಯವರ ಸನ್ನಿಧಿಗೆ ಪಕ್ಕದಲ್ಲಿ ಉತ್ತರವಾಗಿ ಉದ್ದವಾದ ಗೇಟು ಇದೆ. ಇದರಲ್ಲಿ ಉತ್ಸವ ಪ್ರತಿಮೆಗಳೊಂದಿಗೆ ತುಂಬಿರುವ ಈ ಮಂಡಪ ಸಾಕ್ಷಾತ್ತು ಕೈಲಾಸದಿಂದ ಬಂದಿರುವ ಹಾಗೇ ಇದೆ. ಇದರಲ್ಲಿ ಕಪಿಲೇಶ್ವರಸ್ವಾಮಿಯವರಿಗೆ ಅತ್ಯಂತ ಪ್ರಧಾನವಾದ ಉತ್ಸವಮೂರ್ತಿ ಶ್ರೀ ಸೋಮಸ್ಕಂದಮೂರ್ತಿ. ಪರಮಶಿವನಿಗೆ ಇದ್ದ ಇಪ್ಪತ್ತೈದು ರೂಪಗಳಲ್ಲಿ ಇದು ಒಂದು ತುಂಬಾ ಪ್ರಾಶಸ್ತ್ಯವನ್ನು ಪಡೆದಿದೆ.ಉಮಾಸ್ಕಂದ ಮೂರ್ತಿ ಎಂದರೆ ಉಮಾದೇವಿ (ಪಾರ್ವತಿ)ಯೊಂದಿಗೆ ಸ್ಕಂದನು (ಕುಮಾರಸ್ವಾಮಿ) ಯೊಂದಿಗೆ ಇರುವ ಶಿವಮೂರ್ತಿ ಅಂದರೆ ಒಂದೇ ಪೀಠದ ಮೇಲೆ ಬೇರೆ ಮಾಡಲಾಗದೆ ಇರುವ ಮೂರು ಮೂರ್ತಿಗಳು ಜೊತೆಯಲ್ಲಿರುವುದೇ ಶ್ರೀ ಸೋಮಸ್ಕಂದಮೂರ್ತಿ. ಈ ಸ್ವಾಮಿಗೆ ದೇವೇರಿಯರನ್ನು ಪ್ರತ್ಯೇಕವಾಗಿ ಮತ್ತೊಂದು ಪೀಠದಲ್ಲಿ ಇಟ್ಟು ಎಲ್ಲಾ ಉತ್ಸವಗಳನ್ನು, ಮೆರವಣಿಗೆಯಲ್ಲಿ, ಕಲ್ಯಾಣೋತ್ಸವದಲ್ಲಿ ಪಾಲ್ಗೊಂಡ ಪಂಚಲೋಹಪ್ರತಿಮೆ, ಮೂರ್ತಿ ಶ್ರೀ ಕಾಮಾಕ್ಷಿದೇವಿಯದು ಇದೆ. ಶಿವಸೂರ್ಯ ಸ್ವಾಮಿಯವರ ಹಿಂದೆ ಇದ್ದ ಶ್ರೀ ನಟರಾಜಸ್ವಾಮಿ, ಶ್ರೀ ಶಿವಕಾಮ ಸುಂದರಿ ಅಮ್ಮನವರು. ಮಾಣಿಕ್ಯವಾಚಕರ್ ಎನ್ನುವ ಭಕ್ತನ ಪಂಚಲೋಹವಿಗ್ರಹವಿದೆ. ವಲ್ಲಿದೇವಸೇನಾಸಮೇತ ಕುಮಾರ ಸ್ವಾಮಿ ಉತ್ಸವಮೂರ್ತಿ ಮತ್ತೊಂದು ಇದೆ. ಶ್ರೀ ಕಪಿಲೇಶ್ವರ ಸ್ವಾಮಿ ಪ್ರಧಾನ ಆಯುಧವಾದ ತ್ರಿಶೂಲಸ್ವಾಮಿ ಪಂಚಲೋಹ ವಿಗ್ರಹ ಇದೆ. ಶ್ರೀ ಚಂಡಿಕೇಶನ ಪ್ರತಿಮಾ ಪಂಚಲೋಹವಿಗ್ರಹ ಇದೆ.

ಶ್ರೀ ಕಾಮಾಕ್ಷಿ ಕಪಿಲೇಶ್ವರಸ್ವಾಮಿಯವರ ಪರಿವಾರ ದೇವತಾ ಮಂಡಪಕ್ಕೆ ದಕ್ಷಿಣದ ಕಡೆ ವಿಶಾಲವಾದ ಬಹಿರಂಗ ಪ್ರಾಂಗಣದ ಸುತ್ತು ಇದ್ದ ಆವರಣದಲ್ಲಿ ಅನೇಕ ನಾಗದೇವತೆಗಳ ಪ್ರತಿಮೆಗಳು, ಶಿವಲಿಂಗಗಳು, ಸುಬ್ರಹ್ಮಣ್ಯೇಶ್ವರಸ್ವಾಮಿ ಪ್ರತಿಮೆಗಳು ಇವೆ. ನಾಗಕಟ್ಟೆಗೆ ಪಕ್ಕದಲ್ಲಿಯೇ ಪಶ್ಚಿಮಾಭಿಮುಖವಾಗಿ ಶ್ರೀ ಕೋಟಿಲಿಂಗೇಶ್ವರಾಲಯ ಇದೆ. ಈ ಶಿವಲಿಂಗದ ಮೇಲೆ ಅನೇಕ ಚಿಕ್ಕ ಶಿವಲಿಂಗಮೂರ್ತಿಗಳಿವೆ. ಶ್ರೀ ಕೋಟಿಲಿಂಗೇಶ್ವರ ಸ್ವಾಮಿ ಆಲಯಕ್ಕೆ ದಕ್ಷಿಣದ ಕಡೆ ಪಶ್ಚಿಮಾಭಿಮುಖವಾಗಿ ಅಗಸ್ತ್ಯೇಶ್ವರಾಲಯ ನೆಲಸಿದೆ. ನವಗ್ರಹದೇವತಾಮಂಡಪಕ್ಕೆ ದಕ್ಷಿಣವಾಗಿ ನಾಲ್ಕು ಸ್ತಂಭಗಳಿಂದ ನಿರ್ಮಿಸಲಾದ ವೇದಿಕೆಯಲ್ಲಿ ಶ್ರೀ ರಾಹು ಕೇತು ಪೂಜಾಮಂಡಪ ಇದೆ. ಈ ಮಂಡಪಕ್ಕೆ ಎದುರುಗೆ ಎರಡು ಬಿಲ್ವವೃಕ್ಷಗಳಿವೆ. ಕಪಿಲತೀರ್ಥ ಪುಷ್ಕರಿಣಿಗೆ ಪಶ್ಚಿಮತೀರದಲ್ಲಿ ಎತ್ತರ ಪ್ರದೇಶದಲ್ಲಿ 'ನರಸಿಂಹಸ್ವಾಮಿ' ಗುಹೆ ಇದೆ. ಇದರಲ್ಲಿ ಲಕ್ಷ್ಮಿನೃಸಿಂಹ ಸ್ವಾಮಿಯವರ ಏಕಶಿಲಾಮೂರ್ತಿ ಇದೆ. ಪುಷ್ಕರಿಣಿಗೆ ದಕ್ಷಿಣ ದಿಕ್ಕಿಗೆ ರಂಗಮಂಡಪ ಇದೆ. ಇದಕ್ಕೆ 'ತೀರ್ಥವಾರಿ ಮಂಡಪ'ಎಂದು ಕೂಡ ಹೆಸರು. ರಂಗ ಮಂಡಪಕ್ಕೆ ಪಶ್ಚಿಮ ದಿಕ್ಕಿಗೆ ಪೂರ್ವ ಮುಖವಾಗಿ ಶ್ರೀ ಲಕ್ಷ್ಮಿ ನಾರಾಯಣಸ್ವಾಮಿ ಆಲಯವಿದೆ. ಈ ದೇವಾಲಯಕ್ಕೆ ಹಿಂದಿನ ಭಾಗದಲ್ಲಿ ಶ್ರೀ ಕಾಮಾಕ್ಷಿ ನಂದನವನದ ಹೆಸರಿನಲ್ಲಿ ಉದ್ಯಾನವನ ಇದೆ. ಈ ನಂದನವನಕ್ಕೆ ಹತ್ತಿರದಲ್ಲಿ ನಮ್ಮಾಳ್ವಾರು ದೇವಸ್ಥಾನ ದಕ್ಷಿಣಪ್ರಾಕಾರಕ್ಕೆ 'ಕಲ್ಯಾಣಕಟ್ಟೆ' ಇದೆ. ನಮ್ಮಾಳ್ವಾರು ದೇವಸ್ಥಾನಕ್ಕೆ ಅಭಿಮುಖವಾಗಿ ದಕ್ಷಿಣ ದಿಕ್ಕಿಗೆ ಶ್ರೀ ಅಭಯಹಸ್ತ ಅಂಜನೇಯಸ್ವಾಮಿಯವರ ಶಿಲಾಪ್ರತಿಮೆ ಸಿಂಧೂರಲೇಪನ ದಿಂದ ಕಾಣಿಸುತ್ತದೆ.

## ಅಭಿಷೇಕಗಳು - ಅರ್ಚನೆಗಳು- ಉತ್ಸವಗಳು

ಸ್ವಾಮಿಗೆ ದಿನಕ್ಕೆ ಎರಡುಸಾರಿ ಅಭಿಷೇಕ ನಡೆಯುತ್ತದೆ. ಪ್ರತಿತಿಂಗಳು ಮಾಸಶಿವರಾತ್ರಿ ದಿನ ಬೆಳಗ್ಗೆ ಆರ್ದ್ರಾನಕ್ಷತ್ರದಂದು ಶ್ರೀ ಕಪಿಲೇಶ್ವರನಿಗೆ ಲಕ್ಷಬಿಲ್ವಾರ್ಚನೆ, ಕೃತ್ತಿಕ ದಿನ ಕೃತ್ತಿಕಾ







ದೀಪೋತ್ಸವ ನಡೆಯುತ್ತದೆ. ಪ್ರತಿದಿನ ಅಭಿಷೇಕಸಮಯದಲ್ಲಿ ಕೊನೆಯಲ್ಲಿ 'ವಿಭೂತಿ'ಯಿಂದ ಅಭಿಷೇಕ ಮಾಡಿ ನೀರಾಜನ ವನ್ನು ಕೊಡುತ್ತಾರೆ.

ಪ್ರತಿ ಸೋಮವಾರ ಸಾಯಂಕಾಲ ಶ್ರೀ ಕಾಮಾಕ್ಷಿದೇವಿ ಸಮೇತ ಶ್ರೀಕಪಿಲೇಶ್ವರಸ್ವಾಮಿಯವರಿಗೆ ಡೋಲೋತ್ಸವ ನಡೆಯುತ್ತದೆ. ಇದಕ್ಕೆ 'ಉಂಜಲ್‌ಸೇವೆ' ಎಂದು ಹೆಸರು. ಪ್ರತಿ ತಿಂಗಳು ಮಾಸಶಿವರಾತ್ರಿ ದಿನ ಪ್ರದೋಷ (ಸಾಯಂಸಂಧ್ಯ) ಸಮಯದಲ್ಲಿ ಕಲ್ಯಾಣೋತ್ಸವ ನಡೆಯುತ್ತದೆ. ಪ್ರತಿ ವರ್ಷ ಅಷಾಢಮಾಸದಲ್ಲಿ ಹುಣ್ಣಿಮೆ ಮುಂದು ಬರುವ ಚತುರ್ದಶಿ ದಿನಕ್ಕೆ ಪೂರ್ತಿಯಾಗುವುದಕ್ಕೆ ಮೂರು ದಿನಗಳವರೆಗೆ ಪವಿತ್ರೋತ್ಸವ ನಡೆಯುತ್ತದೆ. ಆಶ್ವಯುಜಮಾಸದಲ್ಲಿ ಶುದ್ಧಪಾಡ್ಯಮಿ ಮೊದಲು ದಶಮಿವರಗೆ ದೇವಿ ನವರಾತ್ರಿ ಪೂಜೆ ಘನವಾಗಿ ನಡೆಯುತ್ತದೆ. ಸೌರಮಾನದ ಪ್ರಕಾರ ತುಲಾಮಾಸದಲ್ಲಿ ಪೂರ್ಣಿಮ ದಿನ ಅಂದರೆ ಆಶ್ವಯುಜ (ಸೆಪ್ಟಂಬರ್- ಅಕ್ಟೋಬರ್) ತಿಂಗಳಲ್ಲಿ ಪ್ರತಿವರ್ಷ'ಅನ್ನಾಭಿಷೇಕ' ಎನ್ನುವ ವಿಶೇಷವಾದ ಅಭಿಷೇಕೋತ್ಸವ ನಡೆಯುತ್ತದೆ. ಈ ಉತ್ಸವ ನಡೆಯುವ ದಿನ 'ಕಪಿಲ ತೀರ್ಥಮುಕ್ಕೋಟಿ' ಎಂದು ವಿಶೇಷವಾಗಿ ಹೇಳಲಾಗುತ್ತದೆ.

ಪ್ರತಿ ವರ್ಷ ಕಾರ್ತಿಕಮಾಸದಲ್ಲಿ ಅರ್ಧ್ರನಕ್ಷತ್ರದಂದು ಲಕ್ಷಬಿಲ್ವಾರ್ಚನೆ ನಡೆಯುತ್ತದೆ. ಕಾರ್ತಿಕ ಮಾಸದಲ್ಲಿ ಕೃತ್ತಿಕಾ ನಕ್ಷತ್ರದಲ್ಲಿ ಇದ್ದ ದಿನ ಪ್ರದೋಷವೇಳೆಯಲ್ಲಿ ಕೃತ್ತಿಕಾದೀಪೋತ್ಸವ ವೈಭವವಾಗಿ ನಡೆಯುತ್ತದೆ. ಪ್ರತಿ ವರ್ಷ ಧನುರ್ಮಾಸದಲ್ಲಿ ಅರುದ್ರನಕ್ಷತ್ರ ಇದ್ದ ಹಿಂದಿನ ದಿನ ಪೂರ್ತಿಯಾಗಿ ಐದು ದಿನಗಳವರೆಗೆ ಪುಷ್ಕರಿಣಿಯಲ್ಲಿ ಪ್ರತಿದಿನ ಪ್ರದೋಶವೇಳೆಯಲ್ಲಿ ತೆಪ್ಪೋತ್ಸವ ನಡೆಯುತ್ತದೆ. ಸೌರಮಾನ ಪ್ರಕಾರ ಪ್ರತಿ ವರ್ಷ ಮಕರಮಾಸದಲ್ಲಿ ಪೂರ್ಣಿಮೆಯಲ್ಲಿ ಮುಂಚಿತವಾಗಿ ಬರುವ ಶುಕ್ರವಾರ ದಿನ - ಎಂದರೆ ಚಾಂದ್ರಮಾನಾವನ್ನು ಅನುಸರಿಸಿ 'ಪುಷ್ಯಮಾಸ' ಅಥವಾ 'ಮಾಘಮಾಸ' (ತಮಿಳ್ - ತೈಮಾಸ) ದಲ್ಲಿ ಶ್ರೀಕಾಮಾಕ್ಷಿ ಅಮ್ಮನವರಿಗೆ ಚಂದನಾಲಂಕಾರ ಸೇವೆ ನಡೆಯುತ್ತದೆ. ಪ್ರತಿ ವರ್ಷ ಮಾಘಮಾಸದಲ್ಲಿ ಮಹಾಶಿವರಾತ್ರಿ ಪರ್ವದಿನ ಸಂದರ್ಭವಾಗಿ 10 ದಿನಗಳ ಕಾಲ ಶೈವಾಗಮ ಶಾಸ್ತ್ರೋಕ್ತವಾಗಿ ಬ್ರಹ್ಮೋತ್ಸವಗಳು ನಡೆಯುತ್ತದೆ.

## ಕಪಿಲತೀರ್ಥ ಪ್ರಾಶ್ಯಸ್ತ್ಯ

ಪೂರ್ವದಲ್ಲಿ ಒಬ್ಬ ಬ್ರಾಹ್ಮಣನು ಕ್ಷೇತ್ರವನ್ನು ,ದರ್ಶಿಸುತ್ತಾ, ದೇಶಸಂಚಾರ ಮಾಡುತ್ತಾ ಇದ್ದನು. ಪ್ರಪಂಚದಲ್ಲಿ ಎಷ್ಟು ತೀರ್ಥ ಗಳು ಇವೆಯೋ ಅದರಲ್ಲೆಲ್ಲಾ ಸ್ನಾನವನ್ನು ಮಾಡಿ ಹಾಗೇ ವಿಶ್ರಾಂತಿ ಇಲ್ಲದೆ ತಿರುಗುತ್ತಾ ಇರುವಾಗ ಆತನು ತುಂಬಾ ಬಲ ಹೀನನಾಗಿ ಶುಷ್ಕಿಂಚಿನಶರೀರದಿಂದ, ನೀರಸನಾಗಿ, ಶೋಷಿಂಚಿ, ಮಗತನಿದ್ರೆಗೆ ಒಳಗಾದನು.

ಆ ನಿದ್ರೆಯಲ್ಲಿ ವೆಂಕಟೇಶ್ವರಸ್ವಾಮಿ ಕಾಣಿಸಿ "ಓ ಬ್ರಾಹ್ಮಣೋತ್ತಮ! ಈ ನಿನ್ನ ಪ್ರಯತ್ನ ಅಸಾಧ್ಯವಾದದ್ದು. ನಿನಗೆ ಅಲ್ಲದೆ ಬೇರೆಯಾರಿಗೂ ಕೂಡ ಇದು ಅಸಾಧ್ಯ. ಯಾವತ್ತಿಗೂ ಇದು ನೆರವೇರುವುದಿಲ್ಲ.ಆದರೆ ವೆಂಕಟಾಚಲಕ್ಷೇತ್ರದಲ್ಲಿ 'ಕಪಿಲತೀರ್ಥ' ಮೊದಲಾದ ಅತ್ಯಂತ ಪ್ರಧಾನವಾದ ಹದಿನ್ನೇಳು ಪುಣ್ಯತೀರ್ಥಗಳಿವೆ. ಅದರಲ್ಲಿ ಶಾಸ್ತ್ರೋಕ್ತವಾಗಿ ನಿಯಮವಾಗಿ ಸ್ನಾನವನ್ನು ಮಾಡಿದರೆ ಸಾಕು. ಪ್ರಪಂಚದಲ್ಲಿರುವ ತೀರ್ಥಗಳಲ್ಲಿ ಸ್ನಾನವನ್ನು ಆಚರಿಸಿದ ಫಲ ಬರುತ್ತದೆ. ಅದರಲ್ಲಿ ಯಾವ ಸಂದೇಹವಿಲ್ಲ. ಆದ್ದರಿಂದ ನೀವು ಆ ಹದಿನ್ನೇಳು ತೀರ್ಥಗಳಲ್ಲಿ ಸ್ನಾನವನ್ನು ಮಾಡು. ನಿನ್ನ ಕೋರಿಕೆಯು ನೆರವೇರುತ್ತದೆ." ಎಂದನು.

ಆ ಸ್ವಪ್ನದಿಂದ ಬ್ರಾಹ್ಮಣನು ಎದ್ದು ತನ್ನ ತೀರ್ಥ ಯಾತ್ರೆಯನ್ನು ಮುಂದುವರಿಸುತ್ತಾ ವೆಂಕಟಾಚಲಕ್ಷೇತ್ರಕ್ಕೆ ಹೋಗಿ ಅಲ್ಲಿ ಇದ್ದ ಕಪಿಲತೀರ್ಥವನ್ನಲ್ಲದೇ ಇನ್ನು ಹದಿನ್ನೇಳು ತೀರ್ಥವನ್ನು ಸೇವಿಸಿ ಮುಕ್ತಿಯನ್ನು ಪಡೆದನು.

ಕೈಲಾಸಶಿಖರಾವಾಸ ಪರಬ್ರಹ್ಮಸ್ವರೂಪಿಣೇ
ಕಾಮಾಕ್ಷಿ ವಲ್ಲಭಾಯಾಸ್ತು ಕಪಿಲೇಶಾಯ ಮಂಗಳಮ್॥

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸ್ವಾಮಿಯ ಆರ್ಜಿತ ಸೇವೆಗಳು – ತಿರುಮಲೆ

## ಆರ್ಜಿತ ಸೇವೆಗಳು/ಉತ್ಸವಗಳು

| ಸಂ. | ಸೇವೆ / ಉತ್ಸವದ ಹೆಸರು | ದಿನ | ಸೇವಾ / ಪ್ರವೇಶ ಸಮಯ | ಪ್ರವೇಶ | ಟಿಕೆಟ್ಟು ಬೆಲೆ |
|---|---|---|---|---|---|
| | **ಸೇವೆಗಳು** | | | | |
| 1. | ಸುಪ್ರಭಾತ | ಪ್ರತಿದಿನ | ಬೆ. 2.00-3.00 ಗಂ॥ | 1 | ರೂ. 120.00 |
| 2. | ತೋಮಾಲ ಸೇವೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 3.00-3,30 ಗಂ॥ | 1 | ರೂ. 220.00 |
| 3. | ಅರ್ಚನೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 4.00-4.30 ಗಂ॥ | 1 | ರೂ. 220.00 |
| | **ನಿತ್ಯ ಉತ್ಸವಗಳು** | | | | |
| 4. | ಕಲ್ಯಾಣೋತ್ಸವ | ಪ್ರತಿದಿನ | ಮ. 10.00-12.00 ಗಂ॥ | 2 | ರೂ. 1,000.00 |
| 5. | ಡೋಲೋತ್ಸವ (ಊಂಜಲ್ ಸೇವೆ) | ಪ್ರತಿದಿನ | ಮ. 11.00-1.00 ಗಂ॥ | 1 | ರೂ. 200.00 |
| 6. | ಆರ್ಜಿತ ಬ್ರಹ್ಮೋತ್ಸವ | ಪ್ರತಿದಿನ | ಮ. 12.30-2.00 ಗಂ॥ | 1 | ರೂ. 200.00 |
| 7. | ವಸಂತೋತ್ಸವ | ಪ್ರತಿದಿನ | ಮ. 2.30-3.00 ಗಂ॥ | 1 | ರೂ. 300.00 |
| 8. | ಸಹಸ್ರದೀಪಾಲಂಕರಣ ಸೇವೆ | ಪ್ರತಿದಿನ | ಸಾ. 5.00-5.30 ಗಂ॥ | 1 | ರೂ. 200.00 |
| | **ವಾರದ ಸೇವೆಗಳು** | | | | |
| 9. | ವಿಶೇಷಪೂಜೆ | ಸೋಮವಾರ | ಬೆ. 6.00-6,30 ಗಂ॥ | 1 | ರೂ. 600.00 |
| 10. | ಅಷ್ಟದಳ ಪಾದಪದ್ಮಾರಾಧನೆ | ಮಂಗಳವಾರ | ಬೆ. 5.00-5.30 ಗಂ॥ | 1 | ರೂ. 1,250.00 |
| 11. | ಸಹಸ್ರ ಕಲಶಾಭಿಷೇಕ | ಬುಧವಾರ | ಬೆ. 5.00-5.30 ಗಂ॥ | 1 | ರೂ. 850.00 |
| 12. | ತಿರುಪ್ಪಾವಡ ಸೇವೆ | ಗುರುವಾರ | ಬೆ. 5.00-5.30 ಗಂ॥ | 1 | ರೂ. 850.00 |
| 13. | ವಸ್ತ್ರಾಲಂಕಾರ ಸೇವೆ | ಶುಕ್ರವಾರ | ಬೆ. 3.00-4.00 ಗಂ॥ | 2 (ಗಂಡ ಹೆಂಡತಿ) | ರೂ. 12,250.00 |
| ಅ. | ಪೂರಾಭಿಷೇಕ (12 ವರ್ಷದ ಮಕ್ಕಳನ್ನು ಅನುಮತಿಸುವುದಿಲ್ಲ) | ಶುಕ್ರವಾರ | ಬೆ. 3.00-4.00 ಗಂ॥ | 1 | ರೂ. 750.00 |
| 14. | ನಿಜಪಾದ ದರ್ಶನ | ಶುಕ್ರವಾರ | ಬೆ. 4.30-5.30 ಗಂ॥ | 1 | ರೂ. 200.00 |
| | **ವಾರ್ಷಿಕ ಸೇವೆಗಳು / ಪ್ರತ್ಯೇಕ ಸಂದರ್ಭ ಸೇವೆಗಳು** | | | | |
| 15. | ತೆಪ್ಪೋತ್ಸವ | ಫೆಬ್ರವರಿ/ ಮಾರ್ಚ್ | ಸಾ.6.00-7-00 ಗಂ॥ | 1 | ರೂ. 500.00 |
| 16. | ವಸಂತೋತ್ಸವ | ಮಾರ್ಚ್/ ಏಪ್ರಿಲ್ | ಮ. 1.00-2.00 ಗಂ॥ | 1 | ರೂ. 300.00 |
| 17. | ಪದ್ಮಾವತಿ ಪರಿಣಯ | ಮೇ | ಸಾ. 4-00-4.30 ಗಂ॥ | 1 | ರೂ. 1,000.00 |
| 18. | ಅಭಿಧೇಯಕ ಅಭಿಷೇಕ | ಜೂನ್ | ಬೆ. 8-00 ಗಂ॥ | 1 | ರೂ. 400.00 |
| 19. | ಪುಷ್ಪಪಲ್ಲಕಿ | ಜುಲೈ | ಸಾ. 6-30-7-30 ಗಂ॥ | 1 | ರೂ. 200.00 |
| 20. | ಪವಿತ್ರೋತ್ಸವ | ಆಗಸ್ಟ್ | ಬೆ. 8-00-9-00 ಗಂ॥ | 1 | ರೂ. 2,500.00 |
| 21. | ಪುಷ್ಪಯಾಗ | ನವೆಂಬರ್ | ಬೆ. 8-00-9-00 ಗಂ॥ | 1 | ರೂ. 700.00 |
| 22. | ಕೋಯಿಲ್ ಆಳ್ವಾರ್ ತಿರುಮಂಜನ | ವರ್ಷಕ್ಕೆ 4 ಬಾರಿ | ಬೆ. 10-00-11-00 ಗಂ॥ | 1 | ರೂ. 300.00 |

Call Centre : 0877–2233333, 0877–2277777
Toll free : 18004254141, 1800425333333
What's app : 9399399399
e-mail : helpdesk@tirumala.org

ಮೇಲಿನ ಸೇವೆಗಳಿಗೆ ಸಂಬಂಧಿಸಿದ ಆನ್‌ಲೈನ್ ನಲ್ಲಿ ಮಾತ್ರವೇ ಟಿಕ್ಕೆಟ್ ಬುಕ್ ಮಾಡಿಕೊಳ್ಳಬೇಕು. ಇತರ ವಿವರಗಳಿಗೆ : ತಿ.ತಿ.ದೇ. ವೆಬ್‌ಸೈಟ್ : www.ttdsevaonline.com / www.tirumala.org ನು ಸಂಪ್ರದಿಸಬೇಕು.



# ಕೈಲಾಸ - ಮಾನಸ ಸರೋವರ ಯಾತ್ರೆ

-ಶ್ರೀಮತಿ. ಎನ್.ನಾಗಲಕ್ಷ್ಮಿ


ಜೀವನದಲ್ಲಿ ಒಮ್ಮೆಯಾದರೂ ಕೈಲಾಸ - ಮಾನಸ ಸರೋವರ ಯಾತ್ರೆ ಮಾಡಿ ಬರಬೇಕೆಂಬ ಹಂಬಲ ಬಹುತೇಕ ಆಸ್ತಿಕ ಹಿಂದೂಗಳದ್ದು. ಚೀನಾದಲ್ಲಿರುವ ಟಿಬೆಟ್ ಭೂಮಿಯ ಈ ಯಾತ್ರೆಯಂತೂ ಕಠಿಣ ಮತ್ತು ವಿಸ್ಮಯಕಾರಿ. ಯಾತ್ರೆ ಹೊರಟವರು ಮರಳಿ ಬರುವುದು ನಿಶ್ಚಿತವೆಂದು ಹೇಳಲಾರದಷ್ಟು ಅಪಾಯಕಾರಿ. ಆದರೆ, ಒಮ್ಮೆ ಹೋಗಿ ಬಂದರೆ ಮೈಮನಗಳಿಗೆ ನವಜೀವನ ಬಂದಂತೆ. ಅದೊಂದು ಮಹಾ ಸಾಹಸದ ಯಾತ್ರೆ.

ಇಲ್ಲಿ ಹಿಮಾಲಯದ ವಿವಿಧ ರೂಪಗಳನ್ನು ನೋಡುವ ಸುಯೋಗ. ಆಕಾಶದೆತ್ತರಕ್ಕೆ ಹಸಿರು ವನಸಿರಿ. ಆ ಹಿನ್ನೆಲೆಯೊಂದಿಗೆ ಝರಿಗಳು, ಹಿಮಾವೃತ ಶಿಖರಗಳು. ಅಪರಿಜಿತ ಹವಾಮಾನ. ಇವೆಲ್ಲ, ಕಲ್ಪನೆಯಲ್ಲೇ ಒಂದು ಅಪೂರ್ವ ಆನಂದ ನೀಡುತ್ತವೆ.

ಕೈಲಾಸ ಮಾನಸಸರೋವರ. ಕೈಲಾಸಪರ್ವತದ ಪರಿಕ್ರಮ ಮಾಡುವ ಮೊದಲು ಮಾನಸಸರೋವರದ ದರ್ಶನವಾಗುತ್ತದೆ. ಬ್ರಹ್ಮನ ಮಾನಸ ಶಕ್ತಿಯ ಫಲವಾಗಿ ನಿರ್ಮಾಣವಾಗಿರುವುದೆಂದು ಹೇಳುವ ಈ ಸರೋವರ ಸುಮಾರು 15,000 ಅಡಿಗಳ ಎತ್ತರದಲ್ಲಿದೆ. ಪ್ರಕೃತಿ ಇಲ್ಲಿ ಪ್ರಶಾಂತ, ನಿಗೂಢ, ಆಕರ್ಷಕ, ಅರ್ಥಪೂರ್ಣ, ಸ್ಫಟಿಕ ಶುಭ್ರಜಲ, ಅಗೋಚರ ರಹಸ್ಯಗಳ ಅಡಗುತಾಣವೆನಿಸುತ್ತದೆ. ಇಲ್ಲಿನ ಗಾಢಮೌನ, ಸ್ಥಿತಪ್ರಜ್ಞತೆಯ ಸಾರಸರ್ವಸ್ವ, ಅರ್ಥವ್ಯಾಪ್ತಿ ಮೀರಿದ ಮಿಶ್ರ ಭಾವವನ್ನು ಉಂಟುಮಾಡುತ್ತದೆ. ಇದು ಹಿಮಾಲಯದ ಪರಿಸರದಲ್ಲಿ ಇರುವಂತಹುದು.

ಹಿಮಾಲಯದ ಈ ಇಡೀ ಪರಿಸರವೇ ಕಣ್ಸೆಳೆಯುವಂತಹುದು. 'ಸತ್ಯಂಶಿವಂ ಸುಂದರಂ' ಎಂಬ ದರ್ಶನದ ಜೊತೆಗೆ ವಾಸ್ತವತೆಯ ಕಟು ಅಂಶಗಳ ಪರಿಚಯ ಇಲ್ಲಿ ಲಭ್ಯವಿದೆ. ಹಿಮಾಲಯಕ್ಕೆ ಹಿಮಾಲಯವೇ ಸಾಟಿ. ಆ ಭವ್ಯತೆ, ಸೌಂದರ್ಯ ಗಾಂಭೀರ್ಯಕ್ಕೆ ಯಾವುದೂ ಸಮವಲ್ಲ. ಪ್ರತಿ ಅಂಶವೂ ಮಾನವನ ಮಿತಿಯನ್ನು ಹೇಳುತ್ತದೆ. ಅದೊಂದು ದಿವ್ಯ, ಭವ್ಯ, ರುದ್ರ ರಮಣೀಯತೆಯ ಸಾಕಾರ, ಅದರ ವಿರಾಟ್ ಸ್ವರೂಪ ಊಹಿಸಲವಶ್ಯಕ. ಆದ್ದರಿಂದಲೇ ಮಾನಸಸರೋವರ, ಕೈಲಾಸ ಯಾತ್ರೆಗೆ ವಿಶಿಷ್ಟಸ್ಥಾನ ಪೌರಾಣಿಕ ಹಿನ್ನೆಲೆಯ ಈ ಸ್ಥಳಗಳ ಹೆಸರು ಕೇಳಿದೊಡನೆ ಆಸ್ತಿಕರಲ್ಲಿ ಅವು ಪವಿತ್ರ ಕ್ಷೇತ್ರಗಳೆಂಬ ಭಾವ ಮೂಡಿದರೆ, ನಾಸ್ತಿಕರಲ್ಲಿ ಸಾಹಸದ, ಸೌಂದರ್ಯಾರಾಧನೆಯ ಮಾನಸಿಕ ಚಿತ್ರಾವಳಿ ಮೂಡುತ್ತದೆ.

ಕೈಲಾಸ ಮಾನಸಸರೋವರ ಯಾತ್ರೆಗೆ ಎರಡು ದಾರಿಗಳಲ್ಲಿ ಪ್ರಯಾಣಿಸಬಹುದು. ಒಂದು ಖಾಸಗಿ ಪ್ರವಾಸೋದ್ಯಮ ಸಂಸ್ಥೆಗಳು ಆಯೋಜಿಸುವುದು, ಮತ್ತೊಂದು ಭಾರತ ಸರ್ಕಾರದವರು ಆಯೋಜಿಸುವುದು. ಖಾಸಗಿಯವರು ನೇಪಾಳದ ಕಟ್ಮಂಡುವಿನ ಮೂಲಕ ವ್ಯವಸ್ಥೆ ಮಾಡುತ್ತಾರೆ. ಭಾರತಸರ್ಕಾರ ಚೈನಾದೇಶದ 'ಲಾಸಾ' ಎಂಬ ನಗರದ ಕಡೆಯಿಂದ ವ್ಯವಸ್ಥೆ ಮಾಡುತ್ತದೆ.



ನೇಪಾಳದ ಗಡಿ ಕೊಡಾರಿಗೆ ಕಠ್ಮಂಡುವಿನಿಂದ 125 ಕಿ.ಮೀ. ಅಂತರ ಪೂರ ಘಾಟ್‌ಸೆಕ್ಷನ್. ಮೈ ನಡುಗಿಸುವ ಪ್ರಪಾತವಿರುತ್ತದೆ. ಕಣ್ಣಿಗೆ ಹಸಿರು ಹಬ್ಬವೇ ಆಗಿರುತ್ತದೆ.ಮಾರ್ಗ ಪೂರ್ತಿ ಅಪಾಯಕರ ತಿರುವುಗಳಿಂದಾಗಿ ಎಚ್ಚರಿಕೆಯ ಚಾಲನೆ ಮಾಡಬೇಕಾಗುತ್ತದೆ. ಬೆಟ್ಟ ಮಧ್ಯದಾರಿ, ಆಕಾಶ ದೆತ್ತರಕ್ಕೂ ಗೋಡೆಯಂತೆ ಹಬ್ಬಿರುತ್ತದೆ, ಹಿಮಾಲಯ. ಬೆಟ್ಟ, ಕಾಡು ಎರಡೂ ಒಂದೇ ಎಂಬ ಭಾವವನ್ನು ಮೂಡಿಸುತ್ತದೆ. ಕೆಳಗೆ ಭೋರ್ಗರೆದು ಹರಿಯುತ್ತಿರುತ್ತದೆ ಚಂದ್ರಾವತಿ ನದಿ. ಅದಲ್ಲದೆ ಎಡಬಲದಿಂದ ಸೇರುತ್ತವೆ. ಝರಿಗಳು, ಅವಂತೂ ಎಲ್ಲ ಕಡೆಯೂ ಕಾಣುತ್ತವೆ. ಬೆಟ್ಟದ ಮೇಲಿಂದ ಅಂಕುಡೊಂಕಾಗಿ ಬೀಳುವ, ಬಾಣದಂತೆ ನೇರವಾಗಿ ಬೀಳುವ ಆಕಾಶದಿಂದಲೇ ರಭಸವಾಗಿ ಧುಮ್ಮಿಕ್ಕುತ್ತಿರುವಂತೆ ಭಿನ್ನ ವಿಭಿನ್ನ ವಿನ್ಯಾಸ. ಇಷ್ಟೆಲ್ಲ ಸುಂದರ ದೃಶ್ಯಗಳಿರುವಂತೆಯೇ ಹಿಮಾಲಯದ ಪರಿಸರದಲ್ಲಿ ಅನಿರೀಕ್ಷಿತವಾಗಿ ಭೂಕುಸಿತವುಂಟಾಗುವ ಸಂಭವಗಳೂ ಸಾಮಾನ್ಯ ವಾಗಿ ಇರುತ್ತವೆ.

ಕೊಡಾರಿಯಲ್ಲಿ 'ವಟಿಕೋಶಿ' ಎಂಬ ಭಾರಿ ನದಿ ಹರಿಯುತ್ತದೆ. ಅದಕ್ಕೆ ಅನೇಕ ಝರಿಗಳ ನೀರು ಸೇರಿಕೊಂಡು ನೀರಿನ ಅಗಾಧತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಕೊಡಾರಿಯಲ್ಲಿರುವ ಸ್ನೇಹಸೇತುವೆ ದಾಟಿದರೆ ಟಿಬೆಟ್ ಪ್ರದೇಶಿಸಿದಂತೆ ಇಲ್ಲಿ ಸ್ವಲ್ಪ ದೂರ 'ನೋಮ್ಯಾನ್ಸ್ ಲ್ಯಾಂಡ್' ಎಂದು ಕರೆಯುವ ಯಾರಿಗೂ ಸೇರದ ಪ್ರದೇಶವಿರುತ್ತದೆ. ಅದನ್ನು ಕ್ರಮಿಸಿದ ನಂತರ ಚೈನಾ ದೇಶದ ಅನುಮತಿ ಯೊಂದಿಗೆ ಪ್ರಯಾಣ ಪ್ರಾರಂಭವಾಗುತ್ತದೆ. ಈ ಪ್ರಯಾಣಕ್ಕೆ ಲ್ಯಾಡ್‌ಕ್ರೂಸರ್ ಎಂಬ ವಾಹನ, ನಾಲ್ವರು ಪ್ರಯಾಣಿಕರನ್ನು ಕರೆದೊಯ್ಯುವ ಸಾಮರ್ಥ್ಯ ಅದರದು.

ಈ ಪ್ರಯಾಣದಲ್ಲಿ ಸಿಕ್ಕುವ ಸ್ಥಳಗಳು ನ್ಯಾಲಂ, ಸಾಗಾ ಮತ್ತು ಪರ್ಯಾಂಗ್, ಇದು ಮರೆಯಲಾಗದ ಪ್ರಯಾಣ.ನ್ಯಾಲಂವರೆಗೆ ಅಲ್ಲಲ್ಲಿ ಸ್ವಲ್ಪ ಹಸಿರು, ಬೆಟ್ಟದ ಝರಿಗಳು ಕಂಡರು ಅಲ್ಲಿಂದ ಮುಂದೆ ಬರೀ ಬೋಳುಗುಡ್ಡ. ಮರುಭೂಮಿಯ ದಾರಿ. ಜರಡಿಹಿಡಿದಂತೆ ನುಣ್ಣನೆ ಮರಳು ರಾಶಿ ಕಣ್ಣು ತುಂಬುತ್ತದೆ. ದಾರಿಯೆಂದರೆ ದಾರಿಯಲ್ಲ, ಕಲ್ಲು ರಾಶಿಯ ಮೇಲೆ ಮರಳ ರಾಶಿಯ ಮೇಲೆ, ನೀರಿನ ಸಣ್ಣಪುಟ್ಟ ಹಳ್ಳಗಳಲ್ಲಿ ಇಳಿದು, ನೀರಿನ ಅಭಿಷೇಕವನ್ನು ಇಡೀ ವಾಹನಕ್ಕೆ ಮಾಡಿಸಿಕೊಳ್ಳುತ್ತ ಪ್ರಯಾಣ ಸಾಗುತ್ತದೆ. ಏರು, ತಗ್ಗುಗಳಲ್ಲಿಯೇ ಮುಂದುವರಿಯುತ್ತದೆ. ದಾರಿಯಲ್ಲಿ ಟಿಬೆಟ್‌ನ ಅತಿ ಎತ್ತರದ ಬೆಟ್ಟ 'ಶೀಷಾತಾಂಗ್‌ಮಾ', ಸಮೀಪದಲ್ಲಿಯೇ 'ಪೈಗುಟ್ಸೋ' ಎಂಬ ಸರೋವರ ಸಿಕ್ಕುತ್ತದೆ. ಅತಿ ಸುಂದರವಾದ 300 ಚ.ಕಿ.ಮೀ. ವಿಸ್ತೀರ್ಣದ ಸರೋವರ. ಎತ್ತರಕ್ಕೆ ಪ್ರಯಾಣ ಸಾಗುತ್ತಿದ್ದಂತೆ ಉಸಿರಾಟದ ತೊಂದರೆ ಆಮ್ಲಜನಕದ ಅಭಾವದಿಂದ ಉಂಟಾಗುತ್ತದೆ.

ಇಲ್ಲೆಲ್ಲ ಯಾವ ಹಸಿರೂ ಇಲ್ಲ. ಕೇವಲ ಎರಡು ಗೇಣೆತ್ತರದ ಪೊದೆಯಂತಹ ಕುರುಚಲು ಗಿಡ ಬಿಟ್ಟರೆ ಬೇರೇನೂ ಗಿಡವಿಲ್ಲ. ಆದರೆ, ಟಿಬೆಟ್‌ನ ಬೋಳು ಗುಡ್ಡಗಳಲ್ಲಿಯೂ ಒಂದು ಸೌಂದರ್ಯವಿರುತ್ತದೆ. ಅಲ್ಲಲ್ಲಿ ಗುಡ್ಡಗಳಿಗೆ ಛತ್ರಿ ಹಿಡಿದಂತೆ ಮೋಡದ ನೆರಳಿರುತ್ತದೆ. 'ಸಾಗಾ' ಪಟ್ಟಣ ಬ್ರಹ್ಮಪುತ್ರಾ ನದೀ ತೀರದಲ್ಲಿದೆ.ಚೀನೀಯರ ಸೇನಾನೆಲೆ ಈ ಪ್ರದೇಶದಲ್ಲಿರುತ್ತದೆ.

ಟಿಬೆಟ್ ಜನರ ಬಡತನ ಇಲ್ಲಿ ಎದ್ದು ಕಾಣುತ್ತದೆ. ಇರುವ ಸಣ್ಣಪುಟ್ಟ ಅನುಕೂಲಗಳೆಲ್ಲ ಚೀನೀಯರಿಗೆ ಮಾತ್ರ, ಟಿಬೆಟ್ ಮಕ್ಕಳಿಗೆ ಇಲ್ಲಿ ಯಾವ ಭವಿಷ್ಯವೂ ಇಲ್ಲ. ಆಧುನಿಕತೆಯ ಯಾವ ಪರಿಚಯವೂ ಇವರಿಗೆ ಲಭ್ಯವಿಲ್ಲ - ಶಿಕ್ಷಣವಿಲ್ಲ. ಉದ್ಯೋಗವಿಲ್ಲ. ವ್ಯವಸಾಯ ನಡೆಯುವುದಿಲ್ಲ. ಹಾಗಾಗಿ ಬದುಕುವ ದಾರಿಯೇ ಇಲ್ಲ. ಹೊರ ಹೋಗಲು ಚೈನಾದೇಶ ಅನುಮತಿ ನೀಡುವುದಿಲ್ಲ. ಹಾಗಾಗಿ ಪ್ರವಾಸಿಗರು ಬಂದಾಗ ಅವರ ಮುಂದೆ ಕೈಚಾಚಿ ಹಣಕ್ಕಾಗಿ ನಿಲ್ಲುತ್ತಾರೆ.

ಟಿಬೆಟಿಯನ್ನರು ಹಿಂದೂ ಹಬ್ಬಗಳನ್ನು ಗೌರವಿಸುತ್ತಾರೆ. ಬುದ್ಧನನ್ನು ಆರಾಧಿಸುತ್ತಾರೆ. ಆದರೆ, ತಮಗೆ ಬೇಕಾದಂತೆ ಧಾರ್ಮಿಕ ಕ್ರಿಯೆಗಳನ್ನು ಮಾಡಲು ಇವರಿಗೆ ಪೂರ್ಣ ಸ್ವಾತಂತ್ರ್ಯವಿರುವುದಿಲ್ಲ.

'ಸಾಗಾ' ನಂತರ 'ಪರ್ಯಾಂಗ್' ಎಂಬ ಪಟ್ಟಣ. ಅದು 4,500 ಮೀ. ಎತ್ತರದಲ್ಲಿದೆ. ಈ ದಾರಿಯೂ ಬರೀ ಗುಡ್ಡಗಳನ್ನು ಕ್ರಮಿಸಿಯೇ ಸಾಗುತ್ತದೆ. ಅಲ್ಲಲ್ಲಿ

ಹಳ್ಳಿಗಳ ಅವಶೇಷಗಳು ಕಾಣುತ್ತವೆ. ಅವೆಲ್ಲ ಚೀನಿಯರ ಆಕ್ರಮಣಕ್ಕೆ ತುತ್ತಾಗಿಯೋ, ಬಡತನದ ಬೇಗೆಯಿಂದಲೋ ನಿರ್ನಾಮವಾಗಿರುತ್ತದೆ. ಒಂದೊಂದು ಹಳ್ಳಿಗೂ ಒಂದೊಂದು ದುರಂತ ಕಥೆಯಿರುತ್ತದೆ. ದಾರಿಯಲ್ಲಿ ಆಗೊಮ್ಮೆ ಈಗೊಮ್ಮೆ ಸ್ವಲ್ಪ ಜನವಸತಿಯಿರುವ ಪ್ರದೇಶಗಳಲ್ಲಿ ಕಾಣುವ ಪ್ರಾಣಿಗಳೆಂದರೆ ಕುರಿಗಳು ಮತ್ತು ಯಾಕ್‌ಗಳು.

ಪರ್ಯಾಂಗ್‌ನಿಂದ ಮಾನಸಸರೋವರಕ್ಕೆ 250 ಕಿ.ಮೀ.ಗಳ ಪ್ರಯಾಣದ ನಂತರ ಮಾನಸಸರೋವರದ ದರ್ಶನವಾಗುತ್ತದೆ.

ಮಾನಸಸರೋವರ ಋಷಿಗಳ ಪ್ರಾರ್ಥನೆಯಂತೆ ಬ್ರಹ್ಮನಿಂದ ನಿರ್ಮಿತವಾದದ್ದು. ಪೂರ್ವಜರಿಗೆ ತರ್ಪಣ ಇಲ್ಲಿ ನೀಡುವುದು ಶ್ರೇಯಸ್ಕರವೆಂಬ ನಂಬಿಕೆಯಿದೆ. ಪುರಾಣದ ಹಲವು ವ್ಯಕ್ತಿಗಳು ಇದರ ದರ್ಶನ ಮಾಡಿ ಧನ್ಯರಾದರೆಂಬ ಕಥೆಗಳಿವೆ. ಸುಮಾರು 104 ಕಿ.ಮೀ. ಪರಿಕ್ರಮದ ಹಾದಿ ಇಲ್ಲಿದೆ. 350 ಅಡಿಗಳಷ್ಟು ಆಳವನ್ನು ಹೊಂದಿರುವ ಇದು ವಿಶಾಲವೂ ಆಕರ್ಷಕವೂ ಆದ ಸರೋವರ. 14,950 ಅಡಿಗಳ ಎತ್ತರದಲ್ಲಿರುವ ಇದು ಜಗತ್ತಿನ ಅತಿ ಎತ್ತರದ ಶುಭ್ರಸಲಿಲ ಸರೋವರವೆಂಬ ಖ್ಯಾತಿಯನ್ನು ಹೊಂದಿದೆ. ಬ್ರಹ್ಮಪುತ್ರ ನದಿಯ ಉಗಮಸ್ಥಾನ ಇದು. ವಿಶೇಷವೆಂದರೆ ಚಳಿಗಾಲದ ತೀವ್ರತೆಯಲ್ಲಿಯೂ ಅಷ್ಟು ಎತ್ತರದಲ್ಲಿದ್ದರೂ ಇದರ ನೀರು ಮಂಜುಗಡ್ಡೆಯಾಗುವುದಿಲ್ಲ. ಮೇಲಿನ ಒಂದು ಪದರಕ್ಕೆ ಮಾತ್ರ ತೆಳುವಾದ ಮಂಜಿನ ಹೊದಿಕೆ ಹೊದಿಸಿದಂತಿರುತ್ತದೆ. 350 ಚ.ಕಿ.ಮೀ. ಇದರ ವಿಸ್ತಾರ. ಇದೆಲ್ಲ ಹಿನ್ನೆಲೆಯೊಂದಿಗೆ ಇದಕ್ಕೆ ಹಿಂದೂಗಳು ಮಹತ್ತ್ವದ ಸ್ಥಾನವನ್ನು ನೀಡುತ್ತಾರೆ.

ಮಾನಸಸರೋವರಕ್ಕೆ ಇರುವ ಪೌರಾಣಿಕ ಹಿನ್ನೆಲೆಯಷ್ಟೇ ಇದರ ವಿಶೇಷವಲ್ಲ. ಇದರ ಸೌಂದರ್ಯ ಕೂಡ ವಿಶಿಷ್ಟವೇ. ಒಮ್ಮೆ ಕಡು ನೀಲಿ, ಮತ್ತೊಮ್ಮೆ ದಟ್ಟ ಹಸಿರು. ಇನ್ನೊಮ್ಮೆ ಸುವರ್ಣದ ಹೊಳಪು. ಸ್ವಲ್ಪ ಮುಂದೆ ಹೋದರೆ ನವಿಲುಗರಿಯ ನೀಲಿ ಹಸಿರು ಮಿಶ್ರಬಣ್ಣದ ನೀರು ಮತ್ತೆ ಅಲ್ಲೇ ಒಂದಷ್ಟು ಭಾಗ ಮುತ್ತಿನ ಮಣಿಗಳಂತೆ ಕಾಣುವ ಸೊಬಗು. ಒಟ್ಟಾರೆ ಇಡೀ ಪ್ರದೇಶಕ್ಕೆ ದೇವಲೋಕದ ಪಾವಿತ್ರ್ಯ ಆವರಿಸಿರುತ್ತದೆಂಬ ಭಾವ, ಏಕೆಂದರೆ ಅಲ್ಲೆಲ್ಲ ರಾತ್ರಿಯ ವೇಳೆ ದೇವತೆಗಳು ಸುಳಿದಾಡುತ್ತಾರೆಂಬ ಕಥೆಗಳು ಪ್ರಚಲಿತವಿದೆ. ಸರೋವರದ ಪ್ರಶಾಂತತೆಯನ್ನು ಕೆಡಿಸಬಾರದೆಂದು ಗಾಳಿ ಕೂಡ ಮಂದವಾಗಿ ಬೀಸುತ್ತ ಸರೋವರದಲ್ಲಿ ಸಣ್ಣ ಸಣ್ಣ ಅಲೆಗಳು ಮಾತ್ರ ಏಳುತ್ತಿರುತ್ತವೆ.

ಮಾನಸಸರೋವರದ ಸುತ್ತ ಕಾಲ್ನಡಿಗೆಯಲ್ಲಿ ಅಥವಾ ಯಾಕ್(ಹೇಸರಗತ್ತೆ) ಎಂಬ ಪ್ರಾಣಿಯ ಮೇಲೆ ಕುಳಿತು ಇಲ್ಲವೇ ಲ್ಯಾಂಡ್ ಕ್ರೂಸರ್ ವಾಹನದಲ್ಲಿ ಕುಳಿತೇ ಪರಿಕ್ರಮ (ಪ್ರದಕ್ಷಿಣೆ) ಮಾಡುತ್ತಾರೆ.ಮಾನಸಸರೋವರ ಪ್ರದೇಶದಿಂದ ಕೈಲಾಸ ಪರ್ವತಕ್ಕೆ 45 ನಿಮಿಷಗಳ ಪ್ರಯಾಣ. ಡಾರ್ಚಿನ್ ಎಂಬ ಊರಿನಿಂದ ಕೈಲಾಸಪರ್ವತದ ಪರಿಕ್ರಮವನ್ನು ಮಾಡಲಾಗುತ್ತದೆ. ಇಲ್ಲಿಯೂ ಟಿಬೆಟಿಯನ್ನರ ಬಡತನದ ಚಿತ್ರ ಎದುರಾಗುತ್ತದೆ. ಊರಿನಿಂದ 7-8 ಕಿ.ಮೀ. ಪ್ರಯಾಣ ಮಾಡಿದ ನಂತರ ಕಾಲ್ನಡಿಗೆಯಲ್ಲಿ ಅಥವಾ 'ಯಾಕ್' ಮೇಲೆ ಪರ್ವತದ ಪರಿಕ್ರಮ ನಡೆಯುತ್ತದೆ. ಇಡೀ ಪರ್ವತವೇ ಪವಿತ್ರ - ಪರಶಿವನ ವಾಸಸ್ಥಾನವೇ ಇದೆನ್ನುತ್ತಾರೆ. ಸುತ್ತಲಿನ ಸ್ಥಳಗಳಲ್ಲೆಲ್ಲ ದೇವತೆಗಳ ಸಂಚಾರದ ಪ್ರದೇಶವಿದೆಯೆನ್ನುತ್ತಾರೆ. ಕುಬೇರನ ಅಲಕಾವತಿ, ಇಂದ್ರನ ಅಮರಾವತಿ ಎಲ್ಲವೂ ಅಲ್ಲಿಯೇ ಇದೆಯೆನ್ನುತ್ತಾರೆ.

ಕೈಲಾಸಪರ್ವತದ ಎತ್ತರದ 6,638 ಮೀ. ನ ಶಿಖರದ್ದೇ ಇಲ್ಲಿನ ವಿಶೇಷ. ಎರಡು ರಾತ್ರಿ, ಮೂರು ಹಗಲುಗಳು ಪರಿಕ್ರಮ ಮಾಡಲು ಐವತ್ತೆರಡು ಕಿ.ಮೀ. ಕ್ರಮಿಸಬೇಕಾಗುತ್ತದೆ. ಎರಡನೇ ದಿನ ಅತ್ಯಂತ ಎತ್ತರದ ಭಾಗವನ್ನು ತಲುಪಿ ಇಳಿಯಲು ಪ್ರಾರಂಭಿಸಲಾಗುತ್ತದೆ. 21,778 ಅಡಿಗಳ ಎತ್ತರದ ಶಿಖರವನ್ನು ತಲುಪುವುದು ಅತಿ ಪ್ರಯಾಸದ ಮತ್ತು ಸಾಹಸದ ಹಾಗೂ ಗಂಡಾಂತರಕಾರಿಯಾದ ಪ್ರಯಾಣ, ಪ್ರಾಣ ಹಾನಿಯಾಗುವ ಸಂಭವವೂ ಇದ್ದು ಆಮ್ಲಜನಕದ ಅಭಾವವೇ ಅದಕ್ಕೆ ಕಾರಣವಾಗಿರುತ್ತದೆ. ಅದೃಷ್ಟ ಚೆನ್ನಾಗಿದ್ದವರು ಯಶಸ್ವಿಯಾಗಿ ಸಾಹಸದ ಈ ಯಾತ್ರೆಯನ್ನು ಮುಗಿಸಿ ಹಿಂತಿರುಗುತ್ತಾರೆ. ಬೇರೆ ಯಾವುದೇ ಚಾರಣಗಳಿಗಿಂತಲು ವಿಭಿನ್ನವಾದದ್ದು ಈ ಯಾತ್ರೆ. ಇದೊಂದು ಆಧ್ಯಾತ್ಮಿಕ ಸಂಗತಿಗಳನ್ನು ಹೊರಚೆಲ್ಲುತ್ತ ಜೊತೆಗೆ ಅನೇಕ ನಿಗೂಢ ಅಂಶಗಳನ್ನು ಹೊಂದಿ ವಿಶಿಷ್ಟ ಅನುಭವ ನೀಡುವುದರೊಂದಿಗೆ ಯಶಸ್ವಿಯಾದರೆ ಜೀವನದ ಧ್ಯೇಯವನ್ನು ಪೂರೈಸಿದಂತೆ ಎಂಬ ನಂಬಿಕೆಯಿದೆ. ಪ್ರತಿಯೊಂದು ಯಾತ್ರಾ ತಂಡವೂ ಹೊರಡುವಾಗ ಹಿಂತಿರುಗಿ ಕ್ಷೇಮವಾಗಿ ಮತ್ತು ಪೂರ್ಣಯಾತ್ರೆ ಮುಗಿಸಿ ಬರುವ ಭರವಸೆಯಿಲ್ಲದೇ ಹೊರಡುತ್ತದೆ. ಏಕೆಂದರೆ ಇಲ್ಲಿನ ಹವಾಮಾನ ಕೂಡ ಅಸ್ಥಿರವಾದುದು. ಮೇಲೇರಿದಂತೆ ಆಮ್ಲಜನಕದ ಅಭಾವ. ಹಿಮಾಪಾತದ ಸಂಭವ ವಿಪರೀತ ಛಳಿ ಎಲ್ಲ ಪ್ರತಿಕೂಲ ಪರಿಸ್ಥಿತಿಗಳು. ಆದರೂ ಪರಮೇಶ್ವರನ ಆವಾಸವೆನ್ನುವ ಈ ಕೈಲಾಸಪರ್ವತ, ಸಮೀಪದ ಮಾನಸಸರೋವರ ಯಾತ್ರೆಯ ಹಂಬಲ ಪ್ರತಿಯೊಬ್ಬ ಹಿಂದೂ, ಜೀವನದಲ್ಲಿ ಪೂರೈಸಿಕೊಳ್ಳಲು ಬಯಸುವಂತಹುದು.

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ



# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂದು ಪತ್ರ

ಹೆಸರು ಮತ್ತು ವಿಳಾಸ : ______________________

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥ ವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ) ☐☐☐☐☐☐

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು
☐ ಹಿಂದೀ ☐ ತಮಿಳು
☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ / ಆಜೀವಚಂದಾ: ☐ ರೂ.60/- ☐ ರೂ.500/-

(ಸಂಸ್ಕೃತ ಸಪ್ತಗಿರಿಗಾಗಿ ಆಜೀವ ಚಂದಾ ಸ್ವೀಕರಿಸಲಾಗುವುದಿಲ್ಲ.)

ಚಂದಾ ಪುನರುದ್ಧರಣೆ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ :

(ಚೆಕ್ಕು, ಪಿ.ಓ.ಗಳನ್ನು ಸ್ವೀಕರಿಸುವುದಿಲ್ಲ )

ಸ್ಥಳ :

ದಿನಾಂಕ :

ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.60/-, ಆಜೀವ ಚಂದಾ ರೂ.500/- ಗಳು ಡಿ.ಡಿ/ಎಂ.ಓ. ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾವನ್ನು ಪುನರುದ್ಧರಿಸಿ ಕೊಳ್ಳುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಆದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - "ಪ್ರಧಾನಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು, ತಿರುಪತಿ - 517 507".

## ಸಪ್ತಗಿರಿ ಚಂದಾದಾರರಲ್ಲಿ ವಿನಂತಿ

ಸಪ್ತಗಿರಿ ಚಂದಾದಾರರು ತಮ್ಮ ಚಂದಾ ಹಣವನ್ನು ಕಳುಹಿಸುವಾಗ (ಇ) ಎಂ.ಓ. / ಡಿ.ಡಿ.ಗಳನ್ನು ಕಳುಹಿಸುತ್ತಿರುವುದು ಸರಿಯಷ್ಟೆ. ಅಂಚೆಯಲ್ಲಿ ಪೋಸ್ಟಲ್ ಇ.ಎಂ.ಓ. ಕಳುಹಿಸುವಾಗ ಚಂದಾದಾರರು ಪೂರ್ತಿವಿಳಾಸ ವಿವರ ನೀಡಬೇಕು. ಈಗ "ಪೋಸ್ಟಲ್ ಇ.ಎಂ.ಓ" ವಿಧಾನದಲ್ಲಿ ಹಣ ಕಳುಹಿಸುವವರು ಬರೆಯುವ ಅವಕಾಶವೇ ಇರುವುದಿಲ್ಲವಾಗಿ, ನಿಮ್ಮ ವಿಳಾಸವನ್ನು ಅವರು ಕಂಪ್ಯೂಟರ್‌ನಲ್ಲಿ ಸಂಪೂರ್ಣವಾಗಿ ದಾಖಲುಮಾಡುವಂತೆ ನೋಡಿಕೊಳ್ಳಬೇಕು. ನಿಮ್ಮ ಪೂರ್ಣವಿಳಾಸ ಕಂಪ್ಯೂಟರಿನಲ್ಲಿ ದಾಖಲೆ ಆಗದಿದ್ದರೆ ಹಣ ಸೇರಿದರೂ ವಿಳಾಸವಿಲ್ಲದೆ ಸಪ್ತಗಿರಿ ನಿಮ್ಮನ್ನು ಸೇರುವುದಿಲ್ಲ.

**ಅ.** ತಾವು ಹಳೆಯ ಚಂದಾದಾರರಾಗಿದ್ದರೆ ಚಂದಾ ಪುನರುದ್ಧಾರ - ಪುರ್ನವೀಕರಿಸುವಾಗ ಇ. ಎಂ. ಓ / ಎಂ.ಓ ಮಾಡುವಾಗ ಚಂದಾ ಕ್ರಮ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.

**ಆ.** ಇದರಲ್ಲಿ ನಿಮ್ಮ ಊರಿನ ಪೂರ್ತಿ ವಿಳಾಸದೊಡನೆ ಅಂಚೆ ಪಿನ್ ಕೋಡ್ ಇರುವಂತೆ ನೋಡಿಕೊಳ್ಳಬೇಕು.

**ಇ.** ನಿಮಗೆ ಬೇಕಾದ ಭಾಷೆ ಯನ್ನು ಖಚಿತವಾಗಿ ನಮೂದಿಸ ಬೇಕು.

ಇವೆಲ್ಲ ವಿವರಗಳನ್ನೂ ಸರಿಯಾಗಿರುವಂತೆ ಮಾಡಿದ್ದೇ ಆದಲ್ಲಿ ಸಪ್ತಗಿರಿ ಖಚಿತವಾಗಿ ಶ್ರೀವೆಂಕಟೇಶ್ವರ ಸ್ವಾಮಿಯ ಅನುಗ್ರಹವನ್ನು ಹೊತ್ತು ನಿಮ್ಮ ಮನೆ ಸೇರುವುದು.

**ಸಪ್ತಗಿರಿ ಚಂದಾ ವಿವರಣೆಗಾಗಿ**

**0877- 2264359**

**0877-2264543**


Edited and Published on behalf of T.T.Devasthanams by **Dr. K. Radha Ramana**, M.A., M.Phil., Phd., Chief Editor, T.T.D. and Printed at T.T.D. Press by **Sri R.V. Vijaya Kumar**, B.A., B.Ed., Dy. E.O. (Publications & Press), T.T.D. Press, Tirupati - 517 507.

ತಿರುಮಲ ತಿರುಪತಿ ದೇವಸ್ಥಾನಗಳು

'ಸಪ್ತಗಿರಿ' ಆಧ್ಯಾತ್ಮಿಕ ಮಾಸಪತ್ರಿಕೆ (ಕನ್ನಡ, ತೆಲುಗು, ತಮಿಳು, ಇಂಗ್ಲೀಷ್, ಹಿಂದಿ, ಸಂಸ್ಕೃತ)

ಮನೆಮನೆಗೂ 'ಸಪ್ತಗಿರಿ' ! ಇದು ಸ್ವಾಮಿಯ ಅಕ್ಷರಸಿರಿ !



## ಕಲಿಯುಗ ಪ್ರತ್ಯಕ್ಷ ದೈವನಾದ ಶ್ರೀವೇಂಕಟೇಶ್ವರನ ದಿವ್ಯ ವೈಭವ ಪ್ರತಿತಿಂಗಳು... 'ಸಪ್ತಗಿರಿ' ಪತ್ರಿಕೆಯಲ್ಲಿ ನೋಡಿರಿ...ಓದಿರಿ...



ಭಗವಂತನನ್ನು ಸಂದರ್ಶಿಸಲು,
ದೇವದೇವನನ್ನು ಸೇರುವುದಕ್ಕೆ ಅನಂತ ಮಾರ್ಗಗಳು,
ಪದ್ಧತಿಗಳು.
ಅನಾಥರಕ್ಷಕನು, ಆಪದ್ರಕ್ಷಕನಾದ ಆ ಸಪ್ತಗಿರೀಶನನ್ನು
ಕೆಲವರು ಅಕ್ಷರಪುಷ್ಪಗಳಿಂದ ಆರಾಧಿಸುತ್ತಾರೆ.



ಸ್ವಾಮಿಯ ಅಕ್ಷರ ಪ್ರಸಾದವಾದ 'ಸಪ್ತಗಿರಿ'ಯನ್ನು
ಓದುವುದು, ಓದಿಸುವುದು ಕೂಡಾ ಅವನಿಗೆ ಮಾಡುವ ಉತ್ತಮ ಸೇವೆಯೇ.

ಪ್ರತಿ ತಿಂಗಳು......... "ಸಪ್ತಗಿರಿ" ಓದಿರಿ... ನಿಮ್ಮ ಆತ್ಮೀಯರಿಂದ ಓದಿಸಿರಿ!
ಪ್ರತಿ ತಿಂಗಳು ಸ್ವಾಮಿಯನ್ನು ಈ ಮೂಲಕ ದರ್ಶಿಸಿ... ತಿರುಮಲೆಯ ವಿಶೇಷಗಳನ್ನು ತಿಳಿದುಕೊಳ್ಳಿ.

ಸಪ್ತಗಿರಿ ಅಭಿವೃದ್ಧಿಗೆ ಆಕಾಂಕ್ಷಿಸಿ
ಸಪ್ತಗಿರಿ ಮಾಸಪತ್ರಿಕೆಗೆ ಚಂದಾವನ್ನು ಕಟ್ಟಿ ಕಟ್ಟಿಸಿರಿ.



**ಚಂದಾ ವಿವರಗಳು**

| | | |
|---|---|---|
| ಬಿಡಿ ಪ್ರತಿ.... | ರೂ. | 5-00 |
| ವಾರ್ಷಿಕ ಚಂದಾ.... | ರೂ. | 60-00 |
| ಆಜೀವ ಚಂದಾ.... | ರೂ. | 500-00 |
| ವಿದೇಶಿ ವಾರ್ಷಿಕ ಚಂದಾ... | ರೂ. | 850-00 |

ಗಮನಿಸಿ - ಸಂಸ್ಕೃತ ಭಾಷೆಗೆ ಆಜೀವ ಚಂದಾ ಇಲ್ಲ.



'ಸಪ್ತಗಿರಿ' ಮಾಸಪತ್ರಿಕೆಗೆ ಸಂಬಂಧಿಸಿದ
ಇತರ ಪೂರ್ತಿ ವಿವರಗಳಿಗೆ
ಸಂಪ್ರದಿಸಿ... 0877-2264543
ಪ್ರಧಾನ ಸಂಪಾದಕರ ಚರವಾಣಿ
ಸಂಖ್ಯೆ - 9866329955

ನಮ್ಮ ವಿಳಾಸ
ಪ್ರಧಾನ ಸಂಪಾದಕರು,
'ಸಪ್ತಗಿರಿ' ಮಾಸಪತ್ರಿಕೆ ಕಾರ್ಯಾಲಯ
ತಿ.ತಿ.ದೇ. ಪ್ರೆಸ್ ಕಾಂಪೌಂಡ್
ಕೆ.ಟಿ.ರಸ್ತೆ, ತಿರುಪತಿ - 517 507.

ಸಲಹೆ/ಸೂಚನೆಗಳು/ದೂರುಗಳಿಗಾಗಿ ಸಂಪ್ರದಿಸಿ
sapthagiri_helpdesk@tirumala.org

SAPTHAGIRI (KANNADA) ILLUSTRATED MONTHLY
Published by Tirumala Tirupati Devasthanams 25-01-2019
Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020

